ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಫೆಬ್ರವರಿ 14 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 297 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ಅಕ್ರಮ ನಿವೇಶನ ಹಂಚಿಕೆ ಹಗರಣ ಸಂಬಂಧ ಲೋಕಾಯುಕ್ತ ವರದಿ

ಸಿಎಂ ಸಿದ್ದರಾಮಯ್ಯರದ್ದು ಏನೂ ಪಾತ್ರವಿಲ್ಲ

● ರಾಜಕೀಯ ಒತ್ತಡಕ್ಕೆ ಮಣಿದು ಸಿಎಂ ಪತ್ನಿ ಪಾರ್ವತಿ ಅವರಿಗೆ ನಿವೇಶನ ನೀಡಿಲ್ಲ ● ಮುಡಾದಲ್ಲಿ ಸಾವಿರಕ್ಕೂ ಅಧಿಕ ನಿವೇಶನ ಹಂಚಿಕೆ ● ನಾನಾ ಕಾರಣ ಮುಂದಿಟ್ಟುಕೊಂಡು ಅಧಿಕಾರಿಗಳೇ ಮಾಡಿರುವ ಬಹುದೊಡ್ಡ ಲೋಪ



ಬೆಂಗಳೂರು, ಫೆ.13(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಒಂದು ಸಾವಿರಕ್ಕೂ ಹೆಚ್ಚು ಬಿಡಿ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂ. ನಷ್ಟ ಉಂಟು ಮಾಡಲಾಗಿದೆ ಎಂದು ಲೋಕಾಯುಕ್ತ ತನ್ನ ವರದಿಯಲ್ಲಿ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಭೂಸ್ವಾಧೀನಕ್ಕೆ ಪರ್ಯಾಯವಾಗಿ 14 ನಿವೇಶನಗಳನ್ನು ನೀಡುವ ಅವಶ್ಯಕತೆ ಇರಲಿಲ್ಲ ಎಂದಿದೆ. ನ್ಯಾಯಾಲಯದ ಆದೇಶದಂತೆ ಮುಖ್ಯಮಂತ್ರಿ ಕುಟುಂಬಕ್ಕೆ 14 ನಿವೇಶನಗಳನ್ನು ನೀಡಿರುವ ಸಂಬಂಧ ತನಿಖೆ ನಡೆಸಿದ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ತಮ್ಮ ವರದಿಯಲ್ಲಿ ಅಕ್ರಮಗಳ ಬಗ್ಗೆ ದಾಖಲೆ ಸಮೇತ



ಮುಡಾ ಕಚೇರಿ

ಕೇಂದ್ರ ಕಚೇರಿಗೆ ಸಲ್ಲಿಸಿದ್ದಾರೆ. ಯಾವುದೇ ರಾಜಕೀಯ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿ ಅವರ ಕುಟುಂಬಕ್ಕೆ ನಿವೇಶನಗಳನ್ನು ಮುಡಾ ನೀಡಿಲ್ಲ ಎನ್ನುವ ಮೂಲಕ ಸಿದ್ದರಾಮಯ್ಯ ಅವರಿಗೆ ಕ್ಲೀನ್ ಚಿಟ್ ನೀಡಿದೆ ವಿವಿಧ ಕಾರಣಗಳನ್ನು ಮುಂದೊಡ್ಡಿ ಬಿಡಿ ನಿವೇಶನಗಳನ್ನು ಕೇಳಿದವರಿಗೆ ಒಟ್ಟಾರೆಯಾಗಿ ಒಂದು ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಅಧಿಕಾರಿಗಳು ಹಂಚಿಕೆ ಮಾಡಿ ಭಾರಿ ಲೋಪ ಎಸಗಿದ್ದಾರೆ. ಬಿಡಿ ನಿವೇಶನ ಹಂಚಿಕೆ ಸಂದರ್ಭದಲ್ಲಿ ಕಾನೂನಿನ ಎಲ್ಲೆ ಮೀರಿರುವುದು ದಾಖಲೆಗಳಿಂದ ಕಂಡುಬಂದಿದೆ. ಇದರಲ್ಲಿ ಮೇಲಿನಿಂದ ಕೆಳಹಂತದ ಅಧಿಕಾರಿಗಳವರೆಗೂ ಶಾಮೀಲಾಗಿದ್ದಾರೆ. ನಿವೇಶನಗಳ ಹಂಚಿಕೆಯಲ್ಲಿ ಕಂದಾಯ ಹಾಗೂ ನೋಂದಣಿ ಅಧಿಕಾರಿಗಳು ಕೆಲವೊಂದು ವಿಷಯಗಳಲ್ಲಿ ಶಾಮೀಲಾಗಿರುವುದು ತನಿಖೆಯಿಂದ ಕಂಡುಬಂದಿದೆ ಎಂದು ಉದೇಶ್ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಬಿಡಿ ನಿವೇಶನಗಳ ಹಂಚಿಕೆ ಹಾಗೂ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.)ದ ಪ್ರಾಥಮಿಕ ವರದಿ ಮತ್ತು ಅವರು ಎತ್ತಿರುವ ■ 6ನೇ ಪುಟಕ್ಕೆ

ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ

ಇಂದು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಲ್ಲಿ ಸಭೆ

● ಠಾಣೆಗೆ ಭೇಟಿ ನೀಡಿ; ಮಾಹಿತಿ ಸಂಗ್ರಹದ ನಂತರ ಉಸ್ತುವಾರಿ ಸಚಿವ ಮಹದೇವಪ್ಪ ಪ್ರಕಟ ● ತಾವೂ ಸೇರಿದಂತೆ ಡಿಸಿ, ಪೊಲೀಸ್ ಆಯುಕ್ತರು, ಡಿಜಿ ಸಭೆಯಲ್ಲಿ ಪಾಲ್ಗೊಳ್ಳುತ್ತೇವೆ ● ಘಟನೆ ಸಂಬಂಧ ಪೊಲೀಸರು ಅಮಾಯಕರನ್ನು ಬಂಧಿಸಿಲ್ಲ


ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟರ್ ಹಾಗೂ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಸಂಬಂಧ ಗುರುವಾರ ಉದಯಗಿರಿ ಪೊಲೀಸ್ ಠಾಣೆಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾಹಿತಿ ಪಡೆದರು.

ಮೈಸೂರು, ಫೆ.13(ಎಂಕೆ)– ದೆಹಲಿ ಚುನಾವಣಾ ಫಲಿತಾಂಶ ಕುರಿತ ಅವಹೇಳನಕಾರಿ ಪೋಸ್ಟರ್ ಹಾಗೂ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಸಂಬಂಧ ನಾಳೆ(ಫೆ.14) ಮುಖ್ಯಮಂತ್ರಿಗಳು ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ ಸಭೆ ನಡೆಸಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು. ಉದಯಗಿರಿ ಪೊಲೀಸ್ ಠಾಣೆಗೆ ಗುರುವಾರ ಭೇಟಿ ನೀಡಿ, ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿಗಳು ನಾಳೆ ಸಭೆ ಕರೆದಿದ್ದು, ನನ್ನನ್ನು ಸೇರಿ ಜಿಲ್ಲಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರು, ಡಿಜಿ ಅವರನ್ನು ಕರೆದಿದ್ದಾರೆ ಎಂದು ತಿಳಿಸಿದರು. ■ 6ನೇ ಪುಟಕ್ಕೆ

ಬಲವಂತ ಸಾಲ ವಸೂಲಿಗೆ 10 ವರ್ಷ ಜೈಲು; 5 ಲಕ್ಷ ದಂಡ

● ಸುಗ್ರೀವಾಜ್ಞೆ ಮೂಲಕ ಹೊಸ ಕಾನೂನು ಜಾರಿ ● ಇಂತಹ ಅಪರಾಧಕ್ಕೆ ಜಾಮೀನು ಇಲ್ಲ ● ಪ್ರಕರಣ ದಾಖಲಿಸಲು ಪೊಲೀಸರು ನಿರಾಕರಿಸುವಂತಿಲ್ಲ ● ಸರ್ಕಾರಗಳಿಂದ, ಆರ್‌ಬಿಐ ನೋಂದಾಯಿತವಲ್ಲದ ಮೈಕ್ರೋ ಫೈನಾನ್ಸ್‌ಗಳಿಗೆ ಸುಗ್ರೀವಾಜ್ಞೆ ಅನ್ವಯ

ಬೆಂಗಳೂರು, ಫೆ. 13(ಕೆಎಂಶಿ)–ಬಲವಂತವಾಗಿ ಸಾಲ ಮತ್ತು ಸಾಲದ ಮೇಲಿನ ಬಡ್ಡಿ ವಸೂಲಿ ಮಾಡುವ ವ್ಯಕ್ತಿಗಳಿಗೆ 10 ವರ್ಷ ಸೆರೆವಾಸ ಹಾಗೂ 5 ಲಕ್ಷ ರೂ.ವರೆಗೂ ದಂಡ ವಿಧಿಸಲು ಹೊಸ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಮೈಕ್ರೊ ಫೈನಾನ್ಸ್ ಸಂಸ್ಥೆಗಳು ಮತ್ತು ಇತರೆ ಸಾಲ ನೀಡಿಕೆ ಏಜೆನ್ಸಿಗಳು ಅಥವಾ ಲೇವಾದೇವಿಗಾರರು ವಿಧಿಸುವ ಹೆಚ್ಚಿನ ಬಡ್ಡಿ ದರಗಳಿಂದ ಸಾಲ ಪಡೆದವರಿಗೆ ಆಗುವ ಹೊರೆ ಮತ್ತು ಬಲವಂತದ ವಸೂಲಾತಿ ತಪ್ಪಿಸಲು ರಾಜ್ಯಪಾಲರ ಅಂಕಿತದೊಂದಿಗೆ ಸರ್ಕಾರ ಜಾರಿಗೆ ತಂದಿರುವ ಸುಗ್ರೀವಾಜ್ಞೆಯಲ್ಲಿ ಈ ಅಂಶಗಳು ಒಳಗೊಂಡಿವೆ. ಇಂತಹ ಅಪರಾಧ ಎಸಗುವವರಿಗೆ ಜಾಮೀನು ಇರುವುದಿಲ್ಲ, ಯಾವುದೇ ಪೋಲಿಸ್ ಅಧಿಕಾರಿ ಇಂತಹ ಪ್ರಕರಣಗಳನ್ನು ನೋಂದಣಿ ಮಾಡಿಕೊಳ್ಳಲು ನಿರಾಕರಿಸುವಂತಿಲ್ಲ.

ಸಂಕಷ್ಟಕ್ಕೊಳಗಾದ ವ್ಯಕ್ತಿ ನೀಡದಿದ್ದರೆ, ಡಿವೈಎಸ್‌ಪಿ ಹಾಗೂ ಮೇಲಿನ ಅಧಿಕಾರಿಗಳು ಪ್ರಕರಣವನ್ನು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡು ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರ ನೀಡಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತವಲ್ಲದ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಗೆ ಮಾತ್ರ ಈ ಆಧ್ಯಾದೇಶ ಅನ್ವಯವಾಗುತ್ತದೆ. ಈ ಸುಗ್ರೀವಾಜ್ಞೆಯಿಂದ ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತವಲ್ಲದ ಮೈಕ್ರೊ ಫೈನಾನ್ಸ್ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚುತ್ತದೆ ಮತ್ತು ಸಾಲ ಪಡೆದವರಿಗೆ ಕಿರುಕುಳ, ಬಲವಂತದ ವಸೂಲಿ ಕ್ರಮಗಳಿಂದ ಮುಕ್ತಿ ದೊರೆಯುತ್ತದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪತ್ರಿಕಾ ಹೇಳಿಕೆ ನೀಡಿ, ಸುಗ್ರೀವಾಜ್ಞೆಯಲ್ಲಿರುವ ಪ್ರಮುಖ ಅಂಶಗಳನ್ನು ಜನರಿಗೆ ಮುಟ್ಟಿಸುವ ಪ್ರಯತ್ನ ಮಾಡಿದ್ದಾರೆ. ಕರ್ನಾಟಕ ಕಿರು (ಮೈಕ್ರೊ) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ■ 6ನೇ ಪುಟಕ್ಕೆ

> ಬಲವಂತದ ವಸೂಲಾತಿಗಳನ್ನು ಕೈಗೊಳ್ಳುವ ವ್ಯಕ್ತಿಯು ವಿಚಾರಣೆಗೆ ಒಳಪಡುತ್ತಾನೆ. ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆ ಹಾಗೂ 5 ಲಕ್ಷ ರೂ ವರೆಗೆ ವಿಧಿಸಬಹುದಾದ ಜುಲ್ಮಾನೆಗೆ ಒಳಪಡುತ್ತಾನೆ. ಈ ಅಪರಾಧಗಳು ಸಂಜ್ಞೆಯ (ಕಾಗ್ನಿಜಬಲ್) ಹಾಗೂ ಜಾಮೀನು ರಹಿತ (ನಾನ್ ಬೇಲೆಬಲ್) ಪ್ರಕರಣಗಳಾಗಿರುತ್ತವೆ. ಯಾವುದೇ ಪೊಲೀಸ್ ಅಧಿಕಾರಿಗಳು ಇಂತಹ ಪ್ರಕರಣಗಳನ್ನು ನೋಂದಣಿ ಮಾಡಿಕೊಳ್ಳಲು ನಿರಾಕರಿಸಬಾರದು. ಪೊಲೀಸ್ ಉಪ ಅಧೀಕ್ಷಕ (ಡಿವೈಎಸ್‌ಪಿ) ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿಯು ಸ್ವತಃ (ಸುಮೊಟೊ) ಪ್ರಕರಣ ದಾಖಲಿಸಬಹುದು. ಸರ್ಕಾರವು ಈ ಅಧ್ಯಾದೇಶದ ಅನುಷ್ಠಾನಕ್ಕೆ ಕಾಲಕಾಲಕ್ಕೆ ನಿರ್ದೇಶನಗಳನ್ನು ನೀಡುವ ಅಧಿಕಾರ ಹೊಂದಿರುತ್ತದೆ. ಈ ಆದೇಶದಿಂದ ಆರ್.ಬಿ.ಐ ಮತ್ತು ಕೇಂದ್ರ, ರಾಜ್ಯ ಸರ್ಕಾರಗಳಿಂದ ನೋಂದಣಿಯಾಗದ ಮೈಕ್ರೋಫೈನಾನ್ಸ್ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಹೆಚ್ಚಿಸಲು ಹಾಗೂ ಸಾಲಗಾರರಿಗೆ ಕಿರುಕುಳ, ಬಲವಂತದ ವಸೂಲಿ ಕ್ರಮಗಳಿಂದ ಮುಕ್ತಿ ನೀಡುತ್ತದೆ.
>
> –ಡಾ.ಶಾಲಿನಿ ರಜನೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು



ಇನ್ನೂ 8 ಮಂದಿ ಬಂಧನ: ಸಿಸಿಬಿಯಿಂದ ಇದುವರೆಗೆ 16 ಜನರ ಸೆರೆ



ಮೈಸೂರು, ಫೆ.13(ಆರ್‌ಕೆ)– ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಸಂಬಂಧ ಅವಹೇಳನಕಾರಿ ಪೋಸ್ಟರ್ ಹಾಕಿದರೆಂಬ ಕಾರಣಕ್ಕಾಗಿ ಗುಂಪೊಂದು ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು ಈವರೆಗೆ ಒಟ್ಟು 16 ಮಂದಿಯನ್ನು ಬಂಧಿಸಿದ್ದಾರೆ. ನಿನ್ನೆವರೆಗೆ 8 ಮಂದಿಯನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದ ಸಿಸಿಬಿ ಎಸಿಪಿ ಸಂದೇಶ್ ಕುಮಾರ್, ಇನ್‌ಸ್ಪೆಕ್ಟರ್‌ಗಳಾದ ಕೆ.ಸಿ. ಪೂವಯ್ಯ ಹಾಗೂ ಮೋಹನ್ ನೇತೃತ್ವದ ತನಿಖಾ ತಂಡ ಸಿಸಿ ಕ್ಯಾಮರಾ ದೃಶ್ಯಾವಳಿ ಆಧರಿಸಿ ಕಳೆದ ರಾತ್ರಿ ಮತ್ತೆ 8 ಮಂದಿಯನ್ನು ಬಂಧಿಸಿದ್ದಾರೆ. ಎಲ್ಲರನ್ನೂ ಸಿಸಿಬಿ ಘಟಕದಲ್ಲಿ ವಿಚಾರಣೆ ನಡೆಸಿದಾಗ ತಾವು ■ 6ನೇ ಪುಟಕ್ಕೆ

ಸಿಸಿಬಿ ಎಸಿಪಿ ದಿಢೀರ್ ಎತ್ತಂಗಡಿ

ಮೈಸೂರು, ಫೆ.13– ಉದಯಗಿರಿ ಪೊಲೀಸ್ ಠಾಣೆ ಮೇಲಿನ ದಾಳಿ ಪ್ರಕರಣದ ತನಿಖಾಧಿಕಾರಿಯಾಗಿದ್ದ ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ ಅವರನ್ನು ದಿಢೀರ್ ಎತ್ತಂಗಡಿ ಮಾಡಲಾಗಿದೆ. ಅಲ್ಲದೆ ಮೈಸೂರಿನ ದೇವರಾಜ ಉಪ ವಿಭಾಗ ಮತ್ತು ಸಂಚಾರ ವಿಭಾಗದ ಎಸಿಪಿಗಳನ್ನು ಸ್ಥಳ ತೋರಿಸದೆ ವರ್ಗಾವಣೆ ಮಾಡಲಾಗಿದೆ. ಸಿಐಡಿಯಲ್ಲಿದ್ದ ಮೊಹಮ್ಮದ್ ಶರೀಫ್ ರಾವುತರ್ ಅವರನ್ನು ಮೈಸೂರು ನಗರ ಸಿಸಿಬಿ ಎಸಿಪಿಯಾಗಿ, ಕೆ.ರಾಜೇಂದ್ರ ಅವರನ್ನು ದೇವರಾಜ ಉಪ ವಿಭಾಗದ ಎಸಿಪಿಯಾಗಿ ಹಾಗೂ ಕರ್ನಾಟಕ ಪೊಲೀಸ್ ಅಕಾಡೆಮಿಯ ಅಸಿಸ್ಟೆಂಟ್ ಡೈರೆಕ್ಟರ್ ಎಂ.ಶಿವಶಂಕರ್ ಅವರನ್ನು ಸಂಚಾರ ಉಪ ವಿಭಾಗದ ಎಸಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ಸಿಸಿಬಿ ಎಸಿಪಿಯಾಗಿದ್ದ ಸಂದೇಶ್ ಕುಮಾರ್, ದೇವರಾಜ ಉಪ ವಿಭಾಗದ ಎಸಿಪಿಯಾಗಿದ್ದ ಶಾಂತಮಲ್ಲಪ್ಪ ಹಾಗೂ ಸಂಚಾರ ಉಪ ವಿಭಾಗದ ಎಸಿಪಿ ಯಾಗಿದ್ದ ಪರಶುರಾಮಪ್ಪ ಅವರಿಗೆ ಸ್ಥಳ ನಿಯುಕ್ತಿಗೊಳಿಸದೆ ಪೊಲೀಸ್ ಪ್ರಧಾನ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ.

ಪ್ರತ್ಯೇಕ ಪ್ರಕರಣ: ಕಾಡಾನೆ ದಾಳಿಗೆ ಮೂವರು ಬಲಿ

● ಸರಗೂರು, ಬೇಲೂರು, ಗೋಣಿಕೊಪ್ಪದಲ್ಲಿ ದುರ್ಘಟನೆ ● ಗದ್ದೆಹಳ್ಳ ಗ್ರಾಮಸ್ಥರಿಂದ ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ● 15 ಲಕ್ಷ ರೂ. ಪರಿಹಾರ ವಿತರಣೆ


ದ್ಯಾವಮ್ಮ


ಅವಿನಾಶ್


ಜಾನಕಿ

ಬೇಲೂರು/ಗೋಣಿಕೊಪ್ಪ/ಸರಗೂರು, ಫೆ.13– ಪ್ರತ್ಯೇಕ ಪ್ರಕರಣಗಳಲ್ಲಿ ಕಾಡಾನೆ ದಾಳಿಗೆ ಗುರುವಾರ ಸರಗೂರು ತಾಲೂಕಿನ ಗದ್ದೆಹಳ್ಳ ಗ್ರಾಮದಲ್ಲಿ ಯುವಕ, ಗೋಣಿಕೊಪ್ಪದ ಬಾಳಾಜಿ ಗ್ರಾಮ ಮತ್ತು ಬೇಲೂರು ತಾಲೂಕಿನ ಬೆಳ್ಳಾವರ ಗ್ರಾಮದಲ್ಲಿ ಇಬ್ಬರು ಮಹಿಳೆಯರು ಬಲಿಯಾಗಿದ್ದಾರೆ.

ಬೆಳ್ಳಾವರ: ಕಾಡಾನೆ ದಾಳಿಗೆ ಬೇಲೂರು ತಾಲೂಕಿನ ಬೆಳ್ಳಾವರ ಗ್ರಾಮದಲ್ಲಿ ಮಹಿಳೆ ಬಲಿಯಾಗಿದ್ದಾರೆ. ಕಣಗುಪ್ಪೆ ಗ್ರಾಮದ ನಿವಾಸಿ ದ್ಯಾವಮ್ಮ (62) ಸಾವನ್ನಪ್ಪಿದವರು. ಇಂದು ಬೆಳಗ್ಗೆ ಈಕೆ ದನಗಳ ಹುಡುಕಿಕೊಂಡು ಅರಣ್ಯದಂಚಿಗೆ ಹೋಗಿದ್ದರು. ಎಷ್ಟೊತ್ತಾದರೂ ದ್ಯಾವಮ್ಮ ಮನೆಗೆ ಬಾರದಿದ್ದರಿಂದ ಕುಟುಂಬದವರು ಹುಡುಕಾಡಿದಾಗ ಆಕೆ ಶವ ಬೆಳ್ಳಾವರ ಗ್ರಾಮದ ಪೊದೆಯೊಂದರಲ್ಲಿ ಪತ್ತೆಯಾಗಿದೆ. ಕಾಡಾನೆ ದಾಳಿಗೆ ದ್ಯಾವಮ್ಮ ಬಲಿಯಾಗಿದ್ದಾರೆ. ದೇಹದ ಮೇಲೆ ಆನೆ ದಾಳಿ ನಡೆಸಿರುವ ■ 6ನೇ ಪುಟಕ್ಕೆ

ಮರಕ್ಕೆ ಸಾರಿಗೆ ಬಸ್ ಡಿಕ್ಕಿ; 35 ಮಂದಿಗೆ ಗಾಯ


ಚಾಲಕನ ನಿಯಂತ್ರಣ ತಪ್ಪಿ ಕೆಎಸ್‌ಆರ್‌ಟಿಸಿ ಬಸ್ ಮರಕ್ಕೆ ಡಿಕ್ಕಿ ಹೊಡೆದಿರುವುದು.


ಅಪಘಾತದ ಗಾಯಾಳುಗಳನ್ನು ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್ ಭೇಟಿ ಮಾಡಿ, ವೈದ್ಯರಿಂದ ಮಾಹಿತಿ ಪಡೆದುಕೊಳ್ಳುತ್ತಿರುವುದು. ಈ ವೇಳೆ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ಡಾ.ಶಶಿಧರ್ ಇತರರು ಇದ್ದರು.

ಕೆ.ಆರ್.ಪೇಟೆ, ಫೆ.13– ಚಾಲಕನ ನಿಯಂತ್ರಣ ತಪ್ಪಿ ಕೆಎಸ್‌ಆರ್‌ಟಿಸಿ ಬಸ್ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸುಮಾರು 35 ಮಂದಿಗೆ ತೀವ್ರ ಸ್ವರೂಪದ ಗಾಯಗಳಾಗಿರುವ ಘಟನೆ ತಾಲೂಕಿನ ಹೇಮಗಿರಿ ರಸ್ತೆಯ ಕುಂದನಹಳ್ಳಿ ಗ್ರಾಮದ ಗೇಟ್ ಬಳಿ ಗುರುವಾರ ಬೆಳಿಗ್ಗೆ ಸುಮಾರು 8 ಗಂಟೆ ಸಮಯದಲ್ಲಿ ನಡೆದಿದೆ.

ತಾಲೂಕಿನ ಆಲೇನಹಳ್ಳಿಯಿಂದ ಕೆ.ಆರ್.ಪೇಟೆ ಕಡೆಗೆ ಬರುತ್ತಿದ್ದ ಕೆ.ಆರ್.ಪೇಟೆ ಡಿಪೋಗೆ ಸೇರಿದ ಬಸ್(ಕೆ.ಎ.11–ಎಫ್–0278) ಕುಂದನಹಳ್ಳಿ ಗೇಟ್ ಬಳಿ ಇರುವ ಕೆ.ಆರ್.ಪೇಟೆ–ಹೇಮಗಿರಿ ಮುಖ್ಯ ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ, ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ.

ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ನಾಟನಹಳ್ಳಿ ಗ್ರಾಮದ ಪ್ರೇಕ್ಷಿತಾ, ಸುಚಿತ್ರ, ರಾಜೇಗೌಡ, ಮಲ್ಲೇನಹಳ್ಳಿಯ ನಿಂಗಮ್ಮ, ನಾಗೋನಹಳ್ಳಿಯ ಶಿವಮ್ಮ, ಶೋಭ, ಆಲೇನಹಳ್ಳಿಯ ಬಿಂದು, ಹೊನ್ನೇನಹಳ್ಳಿಯ ದೇವರಾಜು, ಬಂಡಿಹೊಳೆ ಕೀರ್ತನ, ಮಡುವಿನಕೋಡಿ ಕಿರಣ್, ಮೂಡನಹಳ್ಳಿ ಅರ್ಪಿತಾ, ಆಶಾ, ವಡ್ಡರಹಳ್ಳಿ ಅರ್ಪಿತ, ಕಾಂತಾಮಣಿ, ಚಾಲಕ ಎಂ.ಬಿ.ಕಿರಣ್, ನಿರ್ವಾಹಕ ಸೇರಿದಂತೆ 35 ಮಂದಿಗೆ ಗಾಯಗಳಾಗಿವೆ. ಈ ಪೈಕಿ ಪ್ರೇಕ್ಷಿತಾ, ನಿಂಗಮ್ಮ, ರಾಜೇಗೌಡ, ಬಿಂದು ಸೇರಿದಂತೆ ಆರೇಳು ಮಂದಿಗೆ ಗಂಭೀರವಾದ ಗಾಯಗಳಾಗಿವೆ. ಗಾಯಾಳುಗಳನ್ನು ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಶಶಿಧರ್ ನೇತೃತ್ವದಲ್ಲಿ ಆಂಬುಲೆನ್ಸ್‌ನಲ್ಲಿ ಕೆ.ಆರ್.ಪೇಟೆ ಸರ್ಕಾರಿ ಆಸ್ಪತೆಗೆ ಕರೆತಂದು ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆ ಹಾಗೂ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಘಟನೆ ವಿಷಯ ತಿಳಿಯುತ್ತಿದ್ದಂತೆಯೇ ಶಾಸಕ ಹೆಚ್.ಟಿ. ಮಂಜು, ಪಾಂಡವಪುರ ಉಪವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ಜಿಲ್ಲಾ ಸಾರಿಗೆ ನಿಯಂತ್ರಣಾಧಿಕಾರಿ ನಾಗರಾಜು, ಕೆ.ಆರ್.ಪೇಟೆ ಡಿಪೋ ಮ್ಯಾನೇಜರ್ ರವಿ ಸೇರಿದಂತೆ ಹಲವು ಅಧಿಕಾರಿಗಳು ಭೇಟಿ ನೀಡಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸಾ ವ್ಯವಸ್ಥೆ ಮಾಡಿದರು. ಉಪ ವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್ ಮಾತನಾಡಿ, ಗಾಯಾಳುಗಳಿಗೆ ಉಚಿತ ಚಿಕಿತ್ಸೆ ಕೊಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ■ 6ನೇ ಪುಟಕ್ಕೆ

ಸಿದ್ದರಾಮಯ್ಯ ರಾಜ್ಯದ ದೀರ್ಘಾವಧಿ ಸಿಎಂ ಆಗಲೆಂದು ಹಾರೈಸುತ್ತೇನೆ

ಇದಕ್ಕೆ ಇತರ ಸಚಿವರ ಸಹಮತ



ಬೆಂಗಳೂರು, ಫೆ.13– ಸಿದ್ದರಾಮಯ್ಯ ಅವರು ರಾಜ್ಯದ ದೀರ್ಘಾವಧಿಯ ಸಿಎಂ ಆಗಿ ದಾಖಲೆ ಮಾಡಲಿ ಎಂದು ಹಾರೈಸುತ್ತೇನೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ ಪಬ್ಲಿಕ್ ಟಿವಿ ಸಂದರ್ಶನದಲ್ಲಿ ದೀರ್ಘಾವಧಿಯ ಸಿಎಂ ಎಂಬ ದಾಖಲೆ ಮಾಡುವ ಬಗ್ಗೆ ಸಿದ್ದ ರಾಮಯ್ಯ ಇಚ್ಛೆ ವ್ಯಕ್ತಪಡಿಸಿದ್ದ ಕುರಿತು ಪ್ರತಿಕ್ರಿಯೆ ನೀಡಿದರು. ಅವರು ದೀರ್ಘಾವಧಿಯ ಸಿಎಂ ಆಗಲಿ, ದಾಖಲೆ ಮಾಡಲಿ ಅಂತ ನಾನೂ ಹಾರೈಸುತ್ತೇನೆ. ಅವರು ಈ ಐದು ವರ್ಷ ಆಡಳಿತ ಪೂರ್ಣಗೊಳಿಸಿದರೆ ಸಹಜವಾಗಿ ಅದು ದಾಖಲೆ ಆಗಲಿದೆ ಎಂದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಮಲ್ಲಿಕಾರ್ಜುನ ಖರ್ಗೆ ಸುಳಿವು ಕೊಟ್ಟಿರುವ ವಿಚಾರದ ಬಗ್ಗೆ ನಾನು ಪ್ರತಿಕ್ರಿಯೆ ಕೊಡಲ್ಲ. ಹೈಕಮಾಂಡ್ ತೀರ್ಮಾನ ಏನೇ ಇದ್ದರೂ ನಾವು ಒಪ್ಪುತ್ತೇವೆ. ಎಐಸಿಸಿ ಹೊಸ ಕಚೇರಿ ಉದ್ಘಾಟನೆ ವೇಳೆ ಅವರು ಎಐಸಿಸಿ ಪುನಾರಚನೆ ಆಗಬೇಕು ಅಂದಿದ್ದರು. ಆ ಅರ್ಥದಲ್ಲಿ ಅವರು ಹೇಳಿರ ಬಹುದು. ಕೆಲ ರಾಜ್ಯಗಳಲ್ಲಿ ನಮ್ಮ ಪಕ್ಷ ಸೋತಿದೆ, ಪಕ್ಷ ಸಂಘಟನೆ ದೃಷ್ಟಿಯಿಂದ ಖರ್ಗೆಯವರು ಹಾಗೆ ಹೇಳಿರಬಹುದು. ಹೈಕಮಾಂಡ್ ತೀರ್ಮಾನ ಏನಿರುತ್ತೋ ಗೊತ್ತಿಲ್ಲ ಎಂದು ಡಾ.ಪರಮೇಶ್ವರ್ ಹೇಳಿದರು. ಇದಕ್ಕೆ ಧನಿಗೂಡಿಸಿರುವ ಸಚಿವ ಮಹದೇವಪ್ಪ ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರುವುದರಲ್ಲಿ ಅನುಮಾನವೇ ಇಲ್ಲ ಎಂದರೆ, ಸಚಿವ ಸತೀಶ್ ಜಾರಕಿಹೊಳಿ ಎಲ್ಲರ ಅಭಿಪ್ರಾಯವೇ ನನ್ನ ಅಭಿಪ್ರಾಯವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಅತ್ತ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಸಹ ಸಿದ್ದರಾಮಯ್ಯ ಪೂರ್ಣಾವಧಿಗೆ ಮುಂದುವರೆಯುವುದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ.

ನಾಳೆಯಿಂದ 'ಕದಂಬ ರಂಗ ಹಬ್ಬ'



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕದಂಬ ರಂಗಹಬ್ಬದ ಪೋಸ್ಟರ್ ಅನ್ನು ರಂಗಕರ್ಮಿ ಡಾ.ರಾಜಶೇಖರ ಕದಂಬ ಬಿಡುಗಡೆ ಮಾಡಿದರು.

ಮೈಸೂರು, ಫೆ.13(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಫೆ.15ರಿಂದ 17ರವರೆಗೆ ಮೂರು ದಿನಗಳ 'ಕದಂಬ ರಂಗಹಬ್ಬ' ಆಯೋಜಿಸಲಾಗಿದೆ ಎಂದು ಕದಂಬ ರಂಗ ವೇದಿಕೆ ಅಧ್ಯಕ್ಷ ಡಾ.ರಾಜಶೇಖರ ಕದಂಬ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕದಂಬ ರಂಗ ವೇದಿಕೆ ಪ್ರತಿ ವರ್ಷವೂ ರಂಗಹಬ್ಬವನ್ನು ಆಯೋಜಿಸುವ ಮೂಲಕ ಮೈಸೂರಿನ ರಂಗಾಸಕ್ತರಿಗೆ ನಾಟಕಗಳ ಪ್ರದರ್ಶನ ನಡೆಸುತ್ತಾ ಬಂದಿದೆ. ಈ ಬಾರಿಯೂ ಮೂರು ದಿನಗಳ ರಂಗಗೀತೆ ಮತ್ತು ನಾಟಕ ಪ್ರದರ್ಶನ ಏರ್ಪಡಿಸಿದೆ. ಜ.15ರಂದು ಸಂಜೆ 6.30ಕ್ಕೆ ಹಿರಿಯ ಕಲಾವಿದ ಶಂಕರ್ ಅಶ್ವಥ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ರಂಗಸಮಾಜದ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು, ಕದಂಬ ರಂಗವೇದಿಕೆ ಅಧ್ಯಕ್ಷ ಡಾ.ರಾಜಶೇಖರ್ ಕದಂಬ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಭಾ ಕಾರ್ಯಕ್ರಮ ಮುಗಿದ ಬಳಿಕ ಸಂಜೆ 7ರಿಂದ ರಾಜ್ಯ ಪ್ರಶಸ್ತಿ ಪುರಸ್ಕೃತ ವೈ.ಎಂ.ಪುಟ್ಟಣ್ಣಯ್ಯ ಮತ್ತು ತಂಡದವರಿಂದ ರಂಗಗೀತೆ ಕಾರ್ಯಕ್ರಮವಿದೆ ಎಂದರು. ಫೆ.16ರಂದು ಸಂಜೆ 7ಕ್ಕೆ ಚಾಮರಾಜನಗರದ ಶಾಂತಲಾ ಕಲಾವಿದರಿಂದ 'ಅಶ್ವಘೋಷ' ನಾಟಕ ಪ್ರದರ್ಶನ, ಫೆ.17ರ ಸಂಜೆ 7ಕ್ಕೆ ಸಂಚಲನ ಮೈಸೂರು ತಂಡದಿಂದ 'ಚಿತ್ರತುರಗ ನ್ಯಾಯ ಅರ್ಥಾತ್ ಕೀರ್ತಿಯ ಅವಾಂತರ' ನಾಟಕ ಪ್ರದರ್ಶನವಿದೆ. ಈ ಮೂರೂ ದಿನ ಕಲಾಸಕ್ತರಿಗೆ ಉಚಿತ ಪ್ರವೇಶವಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕದಂಬ ರಂಗ ವೇದಿಕೆ ಉಪಾಧ್ಯಕ್ಷ ಯು.ಎಸ್.ರಾಮಣ್ಣ, ಖಜಾಂಚಿ ಡಿ.ತಿಪ್ಪಣ್ಣ, ಸದಸ್ಯರಾದ ಅಶ್ವಥ್ ಕದಂಬ, ಡಿ.ನಾಗೇಂದ್ರ ಕುಮಾರ್ ಉಪಸ್ಥಿತರಿದ್ದರು.

ಫೆ.16ರಂದು ಮಾಘಮಾಸ ಸ್ನಾನ; ಶನೇಶ್ವರಸ್ವಾಮಿ ಪೂಜಾ ಮಹೋತ್ಸವ




ಮೈಸೂರು: ಶ್ರೀರಂಗಪಟ್ಟಣದ ಕಾವೇರಿ ನದಿ ಸ್ನಾನಘಟ್ಟದ ಬಳಿ ವಿಶ್ವಕರ್ಮ ಕುಲಬಾಂಧವರು ಮತ್ತು ಶನೇಶ್ವರ ಸ್ವಾಮಿ ಭಕ್ತ ಮಂಡಳಿ ವತಿಯಿಂದ ಫೆ.16ರ ಭಾನುವಾರ ಬೆಳಗ್ಗೆ 9.30ರಿಂದ 12–30ರವರೆಗೆ 'ಮಾಘಮಾಸ ಸ್ನಾನ' ಕಾರ್ಯಕ್ರಮ, 'ಶನೇಶ್ವರ ಸ್ವಾಮಿ' ಪೂಜಾ ಮಹೋತ್ಸವ ನಡೆಯಲಿದೆ.

ವಿದ್ವಾನ್ ಗಂಗಾಧರಚಾರ್ ಮತ್ತು ಬಿಳಿಕೆರೆ ತಂಡದವರಿಂದ ಶನೇಶ್ವರಸ್ವಾಮಿ ಹರಿಕಥೆ ಏರ್ಪಡಿಸಲಾಗಿದ್ದು, ಪೂಜಾ ಕೈಂಕರ್ಯಗಳು ಜರುಗುತ್ತವೆ. ಮಧ್ಯಾಹ್ನ 1 ಗಂಟೆಗೆ ಮಹಾಮಂಗಳಾರತಿ ನಡೆಯಲಿದೆ. ಪೂಜಾ ಮಹೋತ್ಸವಕ್ಕೆ ಆಗಮಿಸುವ ಸಾವಿರಾರು ಭಕ್ತರಿಗೆ ಶ್ರೀರಂಗಪಟ್ಟಣ ಸ್ನಾನಘಟ್ಟದ ಮಂಟಪದ ಸಮೀಪ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಹಾಗೂ ಮೈಸೂರು ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ವತಿಯಿಂದ ರಕ್ತದಾನ ಶಿಬಿರ ಮತ್ತು ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ ಜಿಲ್ಲೆ ಸೇರಿದಂತೆ ವಿವಿಧೆಡೆಯಿಂದ ವಿಶ್ವಕರ್ಮ ಕುಲಬಾಂಧವರು ಮಾಘಮಾಸ ಸ್ನಾನ ಕಾರ್ಯಕ್ರಮಕ್ಕೆ ಮತ್ತು ಪೂಜಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವರು.

ಪೂಜಾ ಸಮಿತಿಯಲ್ಲಿ ಎಸ್.ಆನಂದ್, ವಿ.ಕೆ.ವಿವೇಕ್, ಎಸ್.ಶ್ರೀಧರ್, ಎಸ್.ಮಹೇಶ, ವಿ.ಗಿರೀಶ್‌ಮೂರ್ತಿ, ಟಿ.ಚಲುವರಾಜು, ಬಿ.ಯೋಗಾನಂದ, ಯು.ಪ್ರದೀಪ್ ಕುಮಾರ್, ಆಟೋ ಶಿವಕುಮಾರ್, ಎನ್.ಸೋಮಚಾರ್, ಎಸ್.ಎನ್.ಕೇಶವಮೂರ್ತಿ, ಸಿದ್ದಚಾರ್ ಸಮ್ಮುಖದಲ್ಲಿ ಪೂಜಾ ಮಹೋತ್ಸವ ಸಿದ್ಧತೆ ನಡೆಯುತ್ತಿದೆ ಎಂದು ಶನೇಶ್ವರಸ್ವಾಮಿ ಪೂಜಾ ಸಮಿತಿ ಮುಖ್ಯಸ್ಥರಾದ ಬಿ.ವಸಂತ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ತನ್ವೀರ್ ಸೇಠ್ ಸಹೋದರ ಆದಿಲ್ ಸೇಠ್ ಇನ್ನಿಲ್ಲ



ಮೈಸೂರು, ಫೆ.13(ಆರ್‌ಕೆ)–ಅನಾರೋಗ್ಯದಿಂದ ಬಳಲುತ್ತಿದ್ದ ಎನ್.ಆರ್.ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರ ಹಿರಿಯ ಸಹೋದರ, ಉದಯಗಿರಿ ನಿವಾಸಿ ಆದಿಲ್ ಸೇಠ್ (74) ಅವರು ಇಂದು ಬೆಳಗ್ಗೆ ನಿಧನರಾದರು. ಅವರು ಇಬ್ಬರು ಪುತ್ರರು, ಅಪಾರ ಬಂಧು–ಬಾಂಧವರು ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಮೈಸೂರಿನ ಉದಯಗಿರಿಯಲ್ಲಿರುವ ಶಾಸಕ ತನ್ವೀರ್ ಸೇಠ್ ಅವರ ನಿವಾಸದಲ್ಲಿ ಆದಿಲ್ ಸೇಠ್ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಿದ ಬಳಿಕ ಅಶೋಕ ರಸ್ತೆಯ ಮಸ್ಜಿದ್–ಇ–ಅಯಾಮ್‌ನಲ್ಲಿ ನಮಾಜ್–ಇ–ಅಸಾರ್ ನಡೆಸಿದ ನಂತರ ಸಂಜೆ 5.30 ಗಂಟೆಗೆ ಮುಸ್ಲಿಂ ಧರ್ಮದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನ್ನಡ ಹೋರಾಟಗಾರ ಮೈ.ನ.ಗೋಪಾಲಕೃಷ್ಣ



ಮೈಸೂರು, ಫೆ.13–ಮೈಸೂರಿನ ಬನ್ನಿಮಂಟಪ ಬಡಾವಣೆಯ ನಿವಾಸಿ ಹಿರಿಯ ಕನ್ನಡ ಹೋರಾಟಗಾರ, ಕಾಂಗ್ರೆಸ್ ಪಕ್ಷದ ಮುಖಂಡರು, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮೈ.ನ.ಗೋಪಾಲಕೃಷ್ಣ (85)ಅವರು ಗುರುವಾರ ನಿಧನರಾದರು.

ಮೃತರು ಓರ್ವ ಪುತ್ರ, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ನಿಧನಕ್ಕೆ ಮೈಸೂರು ನಗರ ಕಾಂಗ್ರೆಸ್ ಸಮಿತಿ, ಕನ್ನಡ ಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಸೇರಿದಂತೆ ಮತ್ತಿತರರು ಸಂತಾಪ ಸೂಚಿಸಿದ್ದಾರೆ. ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಬನ್ನಿಮಂಟಪದ ಜೋಡಿ ತೆಂಗಿನ ಮರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೋಲ್ವೋ ಕಂಪನಿಯಿಂದ ಮತ್ತೆ 1400 ಕೋಟಿ ಬಂಡವಾಳ ಹೂಡಿಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸಮ್ಮುಖದಲ್ಲಿ ಒಡಂಬಡಿಕೆಗೆ ಸಹಿ



ವೋಲ್ವೋ ಕಂಪನಿ, ಬಸ್ ಮತ್ತು ಟ್ರಕ್ ತಯಾರಿಕಾ ಸ್ಥಾವರ ವಿಸ್ತರಣೆಗೆ 1,400 ಕೋಟಿ ರೂ. ಬಂಡವಾಳ ಹೂಡಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸಮ್ಮುಖದಲ್ಲಿ ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ಕಾವೇರಿ'ಯಲ್ಲಿ ಒಡಂಬಡಿಕೆಗೆ ಸಹಿ ಹಾಕಲಾಯಿತು.

ಬೆಂಗಳೂರು, ಫೆ. 13(ಕೆಎಂಶಿ)– ಹೊಸಕೋಟೆಯಲ್ಲಿನ ಸ್ವೀಡನ್ ಮೂಲದ ವೋಲ್ವೋ ಕಂಪನಿ, ಬಸ್ ಮತ್ತು ಟ್ರಕ್ ತಯಾರಿಕಾ ಸ್ಥಾವರ ವಿಸ್ತರಣೆಗೆ 1,400 ಕೋಟಿ ರೂ. ಬಂಡವಾಳ ಹೂಡಿಕೆಗೆ ಮುಂದಾಗಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಸಮ್ಮುಖದಲ್ಲಿ ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ಕಾವೇರಿ'ಯಲ್ಲಿ ಒಡಂಬಡಿಕೆಗೆ ಇಂದು ಸಹಿ ಹಾಕಲಾಯಿತು.

ಒಡಂಬಡಿಕೆಗೆ ಸರ್ಕಾರದ ಪರವಾಗಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಹಾಗೂ ವೋಲ್ವೋ ಇಂಡಿಯಾ ಪರ ವ್ಯವಸ್ಥಾಪಕ ನಿರ್ದೇಶಕ ಕಮಲ್ ಬಾಲಿ ಸಹಿ ಮಾಡಿದರು.

ನಗರದಲ್ಲಿ ನಡೆಯುತ್ತಿರುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ವೋಲ್ವೋ ಸಂಸ್ಥೆ ಸಕ್ರಿಯವಾಗಿ ಪಾಲ್ಗೊಂಡಿದ್ದು ಇದರ ಅಂಗವಾಗಿ ಪ್ರಮುಖ ಒಪ್ಪಂದಕ್ಕೆ ಸಹಿ ಮಾಡಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 25 ವರ್ಷಗಳ ಹಿಂದೆಯೇ ಕರ್ನಾಟಕಕ್ಕೆ ಬಂದಿರುವ ವೋಲ್ವೋ ಕಂಪನಿ ಬಂಡವಾಳ ಹೂಡಿಕೆಗೆ ನಾಂದಿ ಹಾಡಿದೆ, ವೋಲ್ವೋ ಉತ್ಕೃಷ್ಟ ಗುಣಮಟ್ಟದ ಬಸ್‌ಗಳ ತಯಾರಿಕೆಗೆ ಹೆಸರು ಪಡೆದಿದೆ ಎಂದು ಹೇಳಿದರು.

ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿನ ಐಷಾರಾಮಿ ಬಸ್‌ಗಳನ್ನು ಜನತೆ ವೋಲ್ವೋ ಹೆಸರಿನಿಂದಲೇ ಗುರುತಿಸುತ್ತಾರೆ, ಕಂಪನಿಗೆ ಅಗತ್ಯ ಸೌಲಭ್ಯ ಮತ್ತು ನೆರವನ್ನು ಸರ್ಕಾರ ಒದಗಿಸಲಿದೆ, ಕಂಪನಿ ತನ್ನ ಘಟಕದಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗ ನೀಡಬೇಕು, ಇದರಿಂದ ಸ್ಥಳೀಯರ ಭದ್ರತೆ ಮತ್ತು ಆರ್ಥಿಕ ಬೆಳವಣಿಗೆಯನ್ನೂ ಸಾಧಿಸಬಹುದಾಗಿದೆ ಎಂದರು.

ವೋಲ್ವೋ ಸಿಇಒ ಮಾರ್ಟಿನ್ ಲುಂಡ್‌ಸ್ಟೆಡ್ ಮಾತನಾಡಿ, ಕಂಪನಿ ಕರ್ನಾಟಕದ ಪೀಣ್ಯ, ಹೊಸಕೋಟೆ ಮತ್ತು ಧಾರವಾಡ ಬಳಿಯ ಪೀತಂಪುರದಲ್ಲಿ ತಯಾರಿಕಾ ಘಟಕಗಳನ್ನು ಹೊಂದಿದ್ದು, ಪ್ರಸ್ತುತ ವರ್ಷಕ್ಕೆ 3,000 ಬಸ್ ಮತ್ತು ಟ್ರಕ್‌ಗಳನ್ನು ತಯಾರಿಸಲಾಗುತ್ತಿದೆ ಎಂದರು.

ಹೊಸಕೋಟೆ ಸ್ಥಾವರ ವಿಸ್ತರಣೆಯಿಂದ ವರ್ಷಕ್ಕೆ 20 ಸಾವಿರ ಬಸ್ ಮತ್ತು ಟ್ರಕ್‌ಗಳನ್ನು ಹೆಚ್ಚುವರಿಯಾಗಿ ತಯಾರಿಸಬಹುದಾಗಿದ್ದು, ಇದರಿಂದ ಸಾಮರ್ಥ್ಯ ವೃದ್ಧಿ ಹಾಗೂ ಉದ್ಯೋಗ ಸೃಷ್ಟಿಯೂ ಆಗಲಿದೆ.

ಜಾಗತಿಕ ಪೂರೈಕೆ ಸರಪಳಿಯಲ್ಲಿ ಭಾರತ ಮತ್ತು ಕರ್ನಾಟಕದ ಸ್ಥಾನ ಮತ್ತಷ್ಟು ಸುಭದ್ರವಾಗಲಿದೆ, ಅಲ್ಲದೆ, ಸ್ಥಳೀಯ ಮಾರುಕಟ್ಟೆ ಅಗತ್ಯಗಳನ್ನೂ ಸುಲಭವಾಗಿ ಪೂರೈಸಲು ಸಾಧ್ಯವಾಗಲಿದೆ. ವೋಲ್ವೋ ಕಂಪನಿಗೆ ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ 4ನೇ ಅತಿದೊಡ್ಡ ತಾಣವಾಗಿದೆ, ಇಲ್ಲಿನ ಜಿಸಿಸಿ ಕೇಂದ್ರದಲ್ಲಿ 3,500ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದು, ಆರ್ ಅಂಡ್ ಡಿ, ಐಟಿ, ಖರೀದಿ, ಲಾಜಿಸ್ಟಿಕ್ಸ್ ಮತ್ತು ಹಣಕಾಸು ಸೇವೆ ಸಹ ನಿರ್ವಹಿಸಲಾಗುತ್ತಿದೆ, ಅಲ್ಲದೆ ಮಧ್ಯಪ್ರದೇಶದಲ್ಲೂ ಜಂಟಿ ಸಹಭಾಗಿತ್ವದಲ್ಲಿ ಯೋಜನೆ ಜಾರಿಯಲ್ಲಿದ್ದು, ಕಂಪನಿಯ ವಾರ್ಷಿಕ ವಹಿವಾಟು 50 ಬಿಲಿಯನ್ ಡಾಲರ್ ದಾಟಿದೆ ಎಂದರು.

ಸಂಗೀತ ಕಾರ್ಯಕ್ರಮಕ್ಕೆ ಕಾಪಿರೈಟ್ ರಾಯಲ್ಟಿ ಕಿರುಕುಳ ಆರೋಪ

ಮೈಸೂರು,ಫೆ.13(ಎಂಟಿವೈ)–ಸಾರ್ವಜನಿಕ ಸ್ಥಳ ಹಾಗೂ ವಿವಿಧ ಸಭಾಂಗಣಗಳಲ್ಲಿ ಸಂಗೀತ ಕಾರ್ಯಕ್ರಮ ನಡೆಸುವುದಕ್ಕೆ ಕಾಪಿರೈಟ್ ರಾಯಲ್ಟಿ ನೀಡಬೇಕೆಂದು ಖಾಸಗಿ ಸಂಸ್ಥೆಯೊಂದು ಕಲಾವಿದರಿಗೆ ಕಿರುಕುಳ ನೀಡುತ್ತಿದೆ ಎಂದು ಸಂಗೀತ ಕಲಾವಿದರ ಹಿತರಕ್ಷಣಾ ವೇದಿಕೆ ಪ್ರಧಾನ ಸಂಚಾಲಕ ಡಾ.ನಾಗರಾಜ್ ವಿ.ಬೈರಿ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಗಾಯಕರು ಸೇರಿದಂತೆ ವಿವಿಧ ಕಲಾವಿದರು ಸೇರಿ ಮೈಸೂರಿನ ವಿವಿಧ ಸಭಾಂಗಣದಲ್ಲಿ ಗಾಯನ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದ್ದಾರೆ. ಬಹುತೇಕ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶಾವಕಾಶ ಇರುತ್ತದೆ. ಕಲಾವಿದರು ತಮ್ಮ ಹಣವನ್ನು ಖರ್ಚು ಮಾಡಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಿದ್ದರೂ, ಇದೀಗ ಕಾಪಿರೈಟ್ ರಾಯಲ್ಟಿ ನೀಡುವಂತೆ ಖಾಸಗಿ ಸಂಸ್ಥೆಯೊಂದು ವಸೂಲಿ ದಂಧೆ ನಡೆಸುತ್ತಿದೆ ಎಂದು ಕಿಡಿಕಾರಿದರು.

ಕಾಪಿರೈಟ್ ಸಂಸ್ಥೆ ಪ್ರತಿಯೊಂದೂ ಕಾರ್ಯಕ್ರಮಕ್ಕೂ 15ರಿಂದ 20 ಸಾವಿರ ಶುಲ್ಕ ನಿಗದಿಪಡಿಸುತ್ತಿದೆ. ಕಾಪಿರೈಟ್ ಕಾಯ್ದೆಯು ಚಾರಿಟಿ, ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳಿಗೆ ವಿನಾಯಿತಿ ನೀಡಿದೆ. ಹೀಗಿದ್ದರೂ ಮೈಸೂರಲ್ಲಿ ಯಾವುದೇ ಸಂಗೀತ ಕಾರ್ಯಕ್ರಮಗಳಿಗೆ ಕಾಪಿರೈಟ್ ಸಂಸ್ಥೆ ಅಡ್ಡಿಯುಂಟು ಮಾಡುತ್ತಿದೆ. ಅಲ್ಲದೆ, ಕಾಪಿರೈಟ್ ಸಂಸ್ಥೆಗೆ ಹಣ ಪಾವತಿಸಿ ಲೈಸೆನ್ಸ್ ಪಡೆದಿದ್ದರೆ ಮಾತ್ರ ಸಭಾಂಗಣ ನೀಡುವಂತೆ ಸಭಾಂಗಣದ ಆಡಳಿತ ಮಂಡಳಿಗೆ ಬೆದರಿಸುತ್ತಿದ್ದಾರೆ. ಲೈಸೆನ್ಸ್ ಇಲ್ಲದೇ ಇದ್ದವರಿಗೆ ಕಾರ್ಯಕ್ರಮ ನಡೆಸಲು ಅವಕಾಶ ನೀಡಿದರೆ, ಕಾನೂನು ಕ್ರಮ ಕೈಗೊಳ್ಳುವುದಾಗಿ ಸಭಾಂಗಣದ ವ್ಯವಸ್ಥಾಪಕರಿಗೆ ಬೆದರಿಸಿದ್ದಾರೆ. ಇದರಿಂದ ಮೈಸೂರಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಅವರು ವಿಷಾದಿಸಿದರು.


ಕಾಪಿರೈಟ್ ಸಂಸ್ಥೆಯ ಪ್ರತಿನಿಧಿ ಎಂದು ಹೇಳಿಕೊಂಡ ವ್ಯಕ್ತಿಯೊಬ್ಬರು ಇನ್ನು ಮುಂದೆ ಶುಲ್ಕ ಪಾವತಿಸಿ ಲೈಸೆನ್ಸ್ ಪಡೆದು ಕಾರ್ಯಕ್ರಮ ನಡೆಸಬೇಕು. ಇಲ್ಲದಿದ್ದರೆ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಬೆದರಿಸುತ್ತಾರೆ. ಇದೇ ರೀತಿ ಮುಂದುವರೆದರೆ ಪಾರ್ಕ್, ರೈಲ್ವೆ ನಿಲ್ದಾಣ, ರಸ್ತೆಬದಿ, ಸಾರ್ವಜನಿಕ ಸ್ಥಳಗಳಲ್ಲಿ ನಡೆಸುವ ಕಾರ್ಯಕ್ರಮಕ್ಕೂ ಲೈಸೆನ್ಸ್ ಪಡೆಯಲೇಬೇಕಾಗುತ್ತದೆ. ಕಳೆದ ಎರಡು ಮೂರು ತಿಂಗಳಿನಿಂದ ಈ ಸಮಸ್ಯೆ ಕಂಡುಬರುತ್ತಿದ್ದು, ಈ ಬಳಿಕ ನಗರದ ಬಹುತೇಕ ಎಲ್ಲ ಸಭಾಂಗಣಗಳು ಬಿಕೋ ಎನ್ನುತ್ತಿವೆ. ಜೊತೆಗೆ, ಸಂಗೀತ ಕಲಾವಿದರು ಕಾರ್ಯಕ್ರಮ ನಡೆಸಿಕೊಡಲಾಗದಂತಹ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಲಾವಿದರಾದ ಆರ್.ಲಕ್ಷ್ಮಣ್, ಕೃಷ್ಣಮೂರ್ತಿ, ಶ್ರೀಕಂಠರಾವ್, ಕವಿತಾ ಕಾಮತ್, ಮೋಹನ್‌ಕುಮಾರಿ, ಪಾಲ್ ದೇವಾನಂದ್, ಗಣೇಶ್ ಭಟ್, ರೇವಣ್ಣ ಉಪಸ್ಥಿತರಿದ್ದರು.

ಮದುವೆ ಮನೆಗೆ ನುಗ್ಗಿದ ಚಿರತೆ; ಕಾರಿನಲ್ಲಿ ರಕ್ಷಣೆ ಪಡೆದ ವಧು–ವರ

ಲಖನೌ: ಮದುವೆ ಕಾರ್ಯಕ್ರಮಕ್ಕೆ ಚಿರತೆಯೊಂದು ನುಗ್ಗಿದ್ದು, ತೀವ್ರ ಆತಂಕಕ್ಕೆ ಕಾರಣವಾಯಿತು. ಘಟನೆಯಲ್ಲಿ ಅರಣ್ಯಾಧಿಕಾರಿಯೊಬ್ಬರು ಗಾಯಗೊಂಡಿದ್ದು, ಜೀವ ಉಳಿಸಿಕೊಳ್ಳಲು ಓಡಿದ ವಧು–ವರರು ಕೊನೆಗೆ ಕಾರಿನಲ್ಲಿ ರಕ್ಷಣೆ ಪಡೆದುಕೊಳ್ಳುವಂತಾಯಿತು.

ನಗರದ ಬುದ್ಧೇಶ್ವರ ರಸ್ತೆ ಪ್ರದೇಶದಲ್ಲಿ ಬುಧವಾರ ರಾತ್ರಿ ಈ ಘಟನೆ ಸಂಭವಿಸಿದ್ದು, ಚಿರತೆ ಬ್ಯಾಂಕ್ವೆಟ್ ಹಾಲ್‌ಗೆ ಪ್ರವೇಶಿಸಿದ ಕೂಡಲೇ ಜನರು ತಮ್ಮ ಪ್ರಾಣ ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿದರು. ಸ್ಥಳದಲ್ಲಿ ತೀವ್ರ ಆತಂಕ ಸೃಷ್ಟಿಯಾಗಿತ್ತು ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ. ಚಿರತೆ ನುಗ್ಗುತ್ತಿದ್ದಂತೆ ಮಂಟಪದಲ್ಲಿ ಕುಳಿತಿದ್ದ ವಧು–ವರರೂ ಕೂಡ ಓಡಿಹೋಗಿ ಕಾರಿನಲ್ಲಿ ಲಾಕ್ ಮಾಡಿಕೊಂಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ತಕ್ಷಣ ಪೊಲೀಸರು ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದಾರೆ. ಹಲವು ಗಂಟೆಗಳ ಪ್ರಯತ್ನದ ನಂತರ ತಡರಾತ್ರಿ 2 ಗಂಟೆ ಸುಮಾರಿಗೆ ಚಿರತೆಯನ್ನು ಸೆರೆಹಿಡಿಯಲಾಗಿದೆ. ಪೊಲೀಸರ ಪ್ರಕಾರ ಚಿರತೆ ಹಿಡಿಯುವ ವೇಳೆ ಅರಣ್ಯ ಇಲಾಖೆ ಅಧಿಕಾರಿ ಮುಕದ್ದರ್ ಅಲಿ ಅವರ ಕೈಗೆ ಗಾಯಗಳಾಗಿವೆ. ಚಿರತೆ ಹಿಡಿಯುವವರೆಗೂ, ವಧು ಮತ್ತು ವರರ ಕುಟುಂಬದವರು ಸುರಕ್ಷತೆಗಾಗಿ ತಮ್ಮ ವಾಹನಗಳಲ್ಲಿ ಕುಳಿತಿದ್ದರು ಎಂದು ಅತಿಥಿಯೊಬ್ಬರು ಹೇಳಿದ್ದಾರೆ. ಘಟನೆಯ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.02.2025 ಶುಕ್ರವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪುಬ್ಬ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಗ್ಯಾಸ್ಟ್ರೈಟಿಸ್ (ಆಮ್ಲಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ :** ಮಕ್ಕಳಿಗೆ ಸಾಮೂಹಿಕ ಅಕ್ಷರಾಭ್ಯಾಸ, ಸರಸ್ವತಿಪೂಜೆ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮಹರ್ಷಿ ಪಬ್ಲಿಕ್ ಶಾಲೆ ಮುಖ್ಯಸ್ಥರಾದ ಭವಾನಿ ಶಂಕರ್, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ಬಿಜೆಪಿ ನಗರ ಉಪಾಧ್ಯಕ್ಷೆ ಹೇಮಾನಂದೀಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಮಹರ್ಷಿ ಪಬ್ಲಿಕ್ ಶಾಲೆ, ವಿಶ್ವೇಶ್ವರನಗರ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಪ್ರಸಾರ ಭಾರತಿ, ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ, ಆಕಾಶವಾಣಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ :** ರೇಡಿಯೋ ಕಿಸಾನ್ ದಿನದ ಸಂದರ್ಭದಲ್ಲಿ ವೇದ ಕೃಷಿ ಕುರಿತ ಕಾರ್ಯಾಗಾರ, ಉದ್ಘಾಟನೆ : ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ, ಪ್ರಧಾನ ಭಾಷಣ : ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್ ಕುಲಸಚಿವ ಎಸ್. ಕುಮಾರ್, ಅಧ್ಯಕ್ಷತೆ : ಆಕಾಶವಾಣಿ ಉಪನಿರ್ದೇಶಕ ಎಸ್.ಎಸ್. ಉಮೇಶ್, ಸ್ಥಳ: ಆಯಿಷ್ ಸೆಮಿನಾರ್ ಹಾಲ್, ಆಯಿಷ್ ಅಕಾಡೆಮಿಕ್ ಬ್ಲಾಕ್, ಮಾನಸಗಂಗೋತ್ರಿ, ಬೆಳಗ್ಗೆ 10 ರಿಂದ.

■ **ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಸಂಸ್ಕೃತ ಸಂಶೋಧನಾ ಕೇಂದ್ರ :** ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಪ್ರಾಯೋಜಿತ ಅಷ್ಟಾದಶೀ ಯೋಜನೆಯಡಿ ವಿದ್ಯಾರ್ಥಿಗಳಿಗಾಗಿ ಒಂದು ತಿಂಗಳ ಸಂಸ್ಕೃತ ಭಾಷಾ ಕೌಶಲ್ಯವರ್ಧನಾ ತರಬೇತಿ ಶಿಬಿರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಶ್ರೀ ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮೀಜಿ, ಅಧ್ಯಕ್ಷತೆ : ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಮುಖ್ಯ ಅತಿಥಿಗಳು : ವಿಶ್ರಾಂತ ಹೆಚ್ಚುವರಿ ನಿರ್ದೇಶಕ ಪ್ರೊ. ಟಿ.ಎನ್. ಪ್ರಭಾಕರ, ಜೆಎಸ್‌ಎಸ್ ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ, ಸ್ಥಳ: ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ವಾಣಿ ವಿಲಾಸ ರಸ್ತೆ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ :** 'ಮುಕ್ತ ದಿನ' ಉದ್ಘಾಟನೆ: ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಮುಚ್ಚಯದ ಆವರಣ, ಬೆಳಗ್ಗೆ 10 ರಿಂದ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಡೆವಲಪ್‌ಮೆಂಟ್ ಪ್ರೋಗ್ರಾಂ ಔಷಧ ಶಿಕ್ಷಣದಲ್ಲಿ ಫಲಿತಾಂಶ ಆಧಾರಿತ ಶಿಕ್ಷಣ ಮತ್ತು ಪ್ರಕ್ರಿಯೆ ಚಾಲಿತ ಸಮಸ್ಯೆ ಆಧಾರಿತ ಕಲಿಕೆ ಪರಿಚಯ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಾಂಶುಪಾಲ ಡಾ. ಕೆ. ಸತೀಶ್, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್. ದಿನೇಶ್, ಸಂಪನ್ಮೂಲ ವ್ಯಕ್ತಿಗಳಾಗಿ ಸಹ ಪ್ರಾಧ್ಯಾಪಕರು ಹಾಗೂ ಮಲೇಷ್ಯಾದ ಔಷಧೀಯ ಉತ್ಪನ್ನ ಅಭಿವೃದ್ಧಿ ಕೇಂದ್ರ ಕ್ವೆಸ್ಟ್ ಇಂಟರ್‌ನ್ಯಾಷನಲ್ ಯೂನಿವರ್ಸಿಟಿ, ಇಪೋ ನಿರ್ದೇಶಕರಾದ ಡಾ. ಮಹಿಬೂಬ್ ಮಹಮದ್ದಾ ಕಣಕಲ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಹನುಮಂತಚಾರ್ ಜೋಶಿ, ಸ್ಥಳ: ಪ್ರೊ.ಎಸ್. ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಸೇನಾಪಡೆ :** ಕೆಂಗಲ್ ಹನುಮಂತಯ್ಯನವರ ಜಯಂತಿ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಶಾಸಕ ಸಿ.ಎನ್. ಮಂಜೇಗೌಡ, ಮುಖ್ಯ ಅತಿಥಿಗಳು : ಡಾ. ಬಿ.ಆರ್. ನಟರಾಜ ಜೋಯ್ಸ್, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ. ಗಂಗಾಧರ್, ಹಿರಿಯ ಸಂಸ್ಕೃತಿ ಪೋಷಕ ಡಾ. ರಘುರಾಂ ವಾಜಪೇಯಿ, ಎನ್.ಎಂ. ನವೀನ್ ಕುಮಾರ್, ಎಂ.ಬಿ. ಮಂಜೇಗೌಡ, ಎ.ಪಿ. ನಾಗೇಶ್, ಡಾ. ಮೊಗಣ್ಣಾ, ಸುರೇಶ್ ಟಿ. ಗೋಲ್ಡ್, ಮರಿಸ್ವಾಮಿ, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 5.50 ಸಾಧನ – ಶೋಧ, ಗ್ರಾಮೀಣ ಪರಿಸರದ ಉಪಕರಣಗಳು, ಪ್ರಸ್ತುತಿ : ಡಾ. ಎಂ. ಎನ್. ಚಿಕ್ಕಮಾದು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ಜಯಂತಿ. ವಿ. ಭಟ್, ವ್ಯಾಖ್ಯಾನ– ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ 'ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ' ಕುರಿತು ಡಾ. ಮಹಮದ್ ಸಿರಾಜ್ ಅಹಮದ್ ಮತ್ತು 'ವಿಶ್ವ ಅನೀಮಿಯಾ ಜಾಗೃತಿ ದಿನಾಚರಣೆ' ಕುರಿತು ತಿಳಿಸಿಕೊಡಲಿದ್ದಾರೆ ಡಾ. ಬಿ. ಹೆಚ್. ಶ್ರೀನಿವಾಸ್ ಮತ್ತು ಕಾರ್ಯದರ್ಶಿ ಡಾ. ಹೆಚ್. ಎನ್. ಯಶವಂತರಾಜು ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಬಾಲಮುರಳೀಕೃಷ್ಣ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸಂಗೀತ ಸಂಭ್ರಮ ನಾದಲಯ ಸಂಗಮ', ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಯು. ಶ್ರೀನಿವಾಸ್ – ಮ್ಯಾಂಡೋಲಿನ್, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.10ಕ್ಯಾನ್ಸರ್‌ನ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು –ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 6.50 ಕೃಷಿರಂಗ : ಜಾನುವಾರುಗಳಲ್ಲಿ ಕಾಲುಬಾಯಿ ಜ್ವರ ರೋಗದ ನಿಯಂತ್ರಣ ಈ ಕುರಿತು ಪಶು ವೈದ್ಯರಾದ ಡಾ. ಚಾಮರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ–ಆಕಾಶವಾಣಿ ಮೈಸೂರು ಕೇಂದ್ರದ 90ನೇ ವರ್ಷಾಚರಣೆ ಸಂದರ್ಭದಲ್ಲಿ ಚಾಮರಾಜನಗರದಲ್ಲಿ ಆಯೋಜಿಸಲಾಗಿದ್ದ ಜಾನಪದ ಸಂಭ್ರಮದಲ್ಲಿ ಡಾ. ಕೃಷ್ಣಮೂರ್ತಿ ಹನೂರು ಅವರು ಮಾಡಿದ್ದ ಭಾಷಣದ ಆಯ್ದ ಭಾಗಗಳು, 8.15 ಕನ್ನಡ ಭಾರತೀ– ಬರಹಗಾರ್ತಿ ಹಾಗೂ ಕವಯತ್ರಿ ಬಿ.ವಿ. ಭಾರತಿ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ –ಅಬ್ದುಲ್ ರಶೀದ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಚಿತ್ರಬಿಲ್ವಂ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

■ **ಪೀಪಲ್ ಫಾರ್ ಅನಿಮಲ್ಸ್ :** ಆಪರೇಷನ್ ಥಿಯೇಟರ್ ಉದ್ಘಾಟನಾ ಸಮಾರಂಭ, ಗೌರವ ಅತಿಥಿಗಳು : ಶ್ರೀಮತಿ ತ್ರಿಷಿಕಾದೇವಿ ಒಡೆಯರ್, ಸ್ಥಳ: ಪೀಪಲ್ ಫಾರ್ ಅನಿಮಲ್ಸ್, ಬೆಳಗ್ಗೆ 11.30ಕ್ಕೆ.

■ **ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಡಾ.ರೂಪಕಲಾ ಎಂ.ಶಶಿಧರ್, ಅಧ್ಯಕ್ಷತೆ : ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು : ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಪ್ರಾಂತೀಯ ನಿರ್ದೇಶಕ ಲಕ್ಷ್ಮಣ್‌ರಾವ್ ಅತುಕುರಿ, ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್. ರಾಜಪ್ಪ, ಜೆಎಸ್‌ಎಸ್ ಸಂಸ್ಥೆ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಕರಕುಶಲ ಸೇವಾ ಕೇಂದ್ರ ಸಹಾಯಕ ನಿರ್ದೇಶಕ ಕೆ.ಎಸ್. ಸುನೀಲ್‌ಕುಮಾರ್, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ವಲಯ, ಸಂಜೆ 4ಕ್ಕೆ

■ **ಸಂವಹನ : ಪ್ರಕಾಶಕರು :** ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಪಿ. ವೆಂಕಟರಾಮಯ್ಯ ಅವರು ರಚಿಸಿರುವ ನೊಬೆಲ್ ಪಾರಿತೋಷಕ ಪುರಸ್ಕೃತ ತಂದೆ–ಮಕ್ಕಳ ಜೋಡಿಗಳು ಪುಸ್ತಕ ಲೋಕಾರ್ಪಣೆ, ಲೋಕಾರ್ಪಣೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗ್ರಂಥ ಕುರಿತು : ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಸ್.ಎನ್. ಪ್ರಸಾದ್, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗಡೆ, ಉಪಸ್ಥಿತರು: ಗ್ರಂಥ ಕರ್ತೃ ಪ್ರೊ. ಪಿ. ವೆಂಕಟರಾಮಯ್ಯ, ಸ್ಥಳ: ಐನ್‌ಸ್ಟೀನ್ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರ ದಾಸರ ಆರಾಧನಾ ಸಂಗೀತೋತ್ಸವ, ಸಂಜೆ 6.15ಕ್ಕೆ ವಿದ್ವಾನ್ ಕುನ್ನಕುಡಿ ಎಂ. ಬಾಲಮುರಳಿಕೃಷ್ಣ ಅವರಿಂದ ಗಾಯನ, ವಿದ್ವಾನ್ ಮೈಸೂರು ವಿ. ಶ್ರೀಕಾಂತ್–ಪಿಟೀಲು, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ವಿದ್ವಾನ್ ಶಮಿತ್ ಎಸ್. ಗೌಡ–ಘಟಂ, ಸ್ಥಳ:ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ರೋಟರಿ ಮೈಸೂರು ಉತ್ತರ :** ಮೈಸೂರು ಉತ್ತರ ರೋಟರಿ ದತ್ತಿ ಹಾಗೂ ಗುಂಡ್ಲುಪೇಟೆ ಜಿ.ಎನ್. ನಂಜುಂಡಯ್ಯ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೋ. ಪಿ. ಪ್ರಭಾಕರ್, ಮುಖ್ಯ ಅತಿಥಿಗಳು : ಹಿರಿಯ ರಂಗಕರ್ಮಿ ರಾಜಶೇಖರ ಕದಂಬ, ಸ್ಥಳ: ರೋಟರಿ ಭವನ, ವಿಜಯನಗರ ರೈಲ್ವೆ ಬಡಾವಣೆ, ಸಂಜೆ 6.30ಕ್ಕೆ.

'ಸ್ಪರ್ಶ್' ಕುಷ್ಠರೋಗ ಪತ್ತೆ ಅಭಿಯಾನ

ಮೈಸೂರು ಜಿಲ್ಲೆಯಲ್ಲಿ ಹೊಸ ಪ್ರಕರಣ ಒಂದೂ ಇಲ್ಲ

●83 ಹಳೇ ಪ್ರಕರಣ ಸಂಬಂಧ ಮುಂದುವರೆದ ಚಿಕಿತ್ಸೆ ●ಅಂಗವಿಕಲತೆಯಿಂದ ಪಾರಾಗಲು ಶೀಘ್ರ ಚಿಕಿತ್ಸೆಗೆ ಒಳಗಾಗುವುದು ಅವಶ್ಯ

ಮೈಸೂರು,ಫೆ.13(ಪಿಎಂ)– ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಜ.30ರಿಂದ ಫೆ.13ರವರೆಗೆ ಜಿಲ್ಲೆಯಲ್ಲಿ ನಡೆದ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಮತ್ತು 'ಸ್ಪರ್ಶ್' ಜಾಗೃತಿ ಅಭಿಯಾನ 2025ರಡಿ ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿಲ್ಲ.

ಜಿಲ್ಲಾ ಕುಷ್ಠರೋಗ ನಿರ್ಮೂಲನಾ ವಿಭಾಗದ ವತಿಯಿಂದ ಜಿಲ್ಲೆಯಾದ್ಯಂತ ಅಭಿಯಾನ ನಡೆದಿದ್ದು, ಸದ್ಯ ಕುಷ್ಠರೋಗ ಯಾರಲ್ಲೂ ಕಂಡು ಬಂದಿಲ್ಲ. ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಸಹಯೋಗದಲ್ಲಿ ಅಭಿಯಾನದಡಿ ಮನೆ ಮನೆ ಸರ್ವೇ ಕಾರ್ಯ ನಡೆಯಿತು. ಜಿಲ್ಲೆಯಲ್ಲಿ ಈ ಹಿಂದೆ ಪತ್ತೆಯಾದ 83 ಸೋಂಕಿತರು ಕುಷ್ಠರೋಗ ನಿರ್ಮೂಲನಾ ವಿಭಾಗದ ಮೇಲ್ವಿಚಾರಣೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 2024ರ ಸಾಲಿನ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ 61 ಪ್ರಕರಣಗಳು ಪತ್ತೆಯಾಗಿದ್ದು, ಇದಕ್ಕೂ ಪೂರ್ವದಲ್ಲಿ ಪತ್ತೆಯಾದ ಪ್ರಕರಣಗಳೂ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 83 ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ 23 ಮಹಿಳೆಯರು ಹಾಗೂ ಮೂವರು ಮಕ್ಕಳು ಸೇರಿದ್ದಾರೆ.

ಈ 83 ಪ್ರಕರಣಗಳ ಪೈಕಿ ತಿ.ನರಸೀಪುರ ತಾಲೂಕಿನಲ್ಲಿ 38 ಕುಷ್ಠರೋಗಿಗಳಿದ್ದು, ಜಿಲ್ಲೆಯಲ್ಲಿ ಹೆಚ್ಚು ಪ್ರಕರಣಗಳು ಹೊಂದಿರುವ ತಾಲೂಕು ಇದಾಗಿದೆ. ಅಂತೆಯೇ ನಂಜನಗೂಡು ತಾಲೂಕು


ಮೈಸೂರು ಗ್ರಾಮಾಂತರದಲ್ಲಿ ಕಳೆದ ವರ್ಷ ನಡೆದ ಕುಷ್ಠರೋಗ ತಪಾಸಣಾ ಶಿಬಿರದ ಚಿತ್ರ.

19 ರೋಗಿಗಳನ್ನು ಹೊಂದಿರುವ ಮೂಲಕ ಎರಡನೇ ಸ್ಥಾನದಲ್ಲಿದೆ. ಉಳಿದಂತೆ ಮೈಸೂರು ಗ್ರಾಮಾಂತರದಲ್ಲಿ 7, ಮೈಸೂರು ನಗರದಲ್ಲಿ 11, ಹುಣಸೂರಿನಲ್ಲಿ 1, ಹೆಚ್‌ಡಿ ಕೋಟೆಯಲ್ಲಿ 3, ಪಿರಿಯಾಪಟ್ಟಣ 2, ಕೆಆರ್ ನಗರದಲ್ಲಿ 2 ಪ್ರಕರಣಗಳು ಇವೆ.

ಕುಷ್ಠರೋಗ ಹರಡುವುದ್ಹೇಗೆ: ಮಾನವ ಕುಲದ ಅತ್ಯಂತ ಪ್ರಾಚೀನ ರೋಗಗಳಲ್ಲಿ ಕುಷ್ಠರೋಗವೂ ಒಂದು. ಇದು 'ಮೈಕೋ ಬ್ಯಾಕ್ಟೀರಿಯಂ ಲೆಪ್ರೆ' ಎಂಬ ರೋಗಾಣುವಿನಿಂದ ಬರುತ್ತದೆ. ಈ ಕಾಯಿಲೆ ಮುಖ್ಯವಾಗಿ ಚರ್ಮ ಮತ್ತು ನರಗಳಿಗೆ ಸಂಬಂಧಿಸಿದ್ದಾಗಿದೆ. ಕುಷ್ಠರೋಗಿಯು ಸೀನಿದಾಗ, ಕೆಮ್ಮಿದಾಗ ಹಾಗೂ ಕಫದ ಮೂಲಕ ರೋಗಾಣು ಹೊರಗೆ ಬಂದು ಗಾಳಿಯ ಮೂಲಕ ಆರೋಗ್ಯವಂತರ ಶರೀರದಲ್ಲಿ ಪ್ರವೇಶಿಸಿ ಸೋಂಕು ಉಂಟು ಮಾಡುತ್ತದೆ. ಇದು ವಂಶ ಪಾರಂಪರ್ಯದಿಂದ ಹರಡುವುದಿಲ್ಲ. ಕುಷ್ಠರೋಗಿಗಳನ್ನು ಮುಟ್ಟುವುದರಿಂದಾಗಲೀ, ಹಸ್ತಲಾಘವ ಮಾಡುವುದರಿಂದಾಗಲೀ, ರೋಗ ಹರಡುವುದಿಲ್ಲ.

ಎಚ್ಚರ ತಪ್ಪಿದರೆ ಅಂಗ ಊನತೆ: ಹಾಗಾಗಿ ಆರಂಭಿಕ ಹಂದಲ್ಲಿಯೇ ಚಿಕಿತ್ಸೆ ಪಡೆದಲ್ಲಿ ಅಂಗ ಊನತೆ ತಡೆಯಬಹುದು. ಕುಷ್ಠರೋಗ ದೇಹದ ಅಂಗಾಂಗಗಳ ಆಕಾರವನ್ನು ಮತ್ತು ಆರೋಗ್ಯವನ್ನು ಹದಗೆಡಿಸುತ್ತದೆ. ದೇಹದ ಮಾಂಸಖಂಡಗಳು ಇದರಿಂದ ತೊಂದರೆಗೆ ಒಳಗಾಗುತ್ತವೆ.

ಗುರುತಿಸುವ ಬಗೆ: ಕುಷ್ಠರೋಗ ಪೀಡಿತ ಚರ್ಮವನ್ನು ಗುರುತಿಸಲು ಹಲವು ತಿಂಗಳಿಂದ ವರ್ಷಗಳವರೆಗೂ ಕಾಲಾವಕಾಶ ಬೇಕಾಗಬಹುದು. ಕೇವಲ ಕೆಲವು ದಿನಗಳಲ್ಲಿ ಅಥವಾ ವಾರಗಳ ಅವಧಿಯಲ್ಲಿ ಕಾಣಿಸಿಕೊಂಡ ಮಚ್ಚೆಯು ಕುಷ್ಠರೋಗ ಆಗಿರುವುದಿಲ್ಲ. ಹುಟ್ಟಿನಿಂದ ಇರುವ ಮಚ್ಚೆಗಳೂ ಕುಷ್ಠರೋಗವಾಗುವುದಿಲ್ಲ. ಕುಷ್ಠರೋಗದ ಮಚ್ಚೆಯು ಸಾಧಾರಣವಾಗಿ ಹಲವು ತಿಂಗಳಿಂದ ನಿಧಾನವಾಗಿ ವಿಸ್ತರಿಸುತ್ತದೆ. ಇದು ನವೆ, ಕೆರೆತದಂತಹ ಲಕ್ಷಣಗಳನ್ನು ಹೊಂದಿರುವುದಿಲ್ಲ.

ದೇಹದ ಯಾವುದೇ ಭಾಗದ ಮೇಲೆ ತುರಿಕೆ ಇಲ್ಲದ ತಿಳಿಬಿಳಿ ಅಥವಾ ತಾಮ್ರ ಬಣ್ಣದ ಮತ್ತು ಸ್ಪರ್ಶದ ಅನುಭವ ಉಂಟು ಮಾಡದ ಮಚ್ಚೆಗಳು ಇದ್ದಲ್ಲಿ ಅವುಗಳು ಕುಷ್ಠರೋಗಕ್ಕೆ ಸಂಬಂಧಿಸಿದ್ದಾಗಿರುತ್ತವೆ. ರೋಗ ಖಚಿತಪಡಿಸಿಕೊಳ್ಳಲು ವೈದ್ಯಕೀಯ ಪರೀಕ್ಷೆಗೆ ಒಳಪಡಬೇಕಾಗುತ್ತದೆ. ಕೈಕಾಲು ಜೋಮು ಹಿಡಿಯುವುದು ಮತ್ತು ನರಗಳು ದಪ್ಪಗಾಗುವುದು ಕೈಕಾಲುಗಳಲ್ಲಿ ಸ್ಪರ್ಶಜ್ಞಾನ ಇಲ್ಲದಂತಾಗುವ ಲಕ್ಷಣಗಳನ್ನು ಈ ಕಾಯಿಲೆ ಒಳಗೊಂಡಿದೆ. ಈ ರೋಗವನ್ನು ಬಹುವಿಧ ಔಷಧಿ (ಎಂಡಿಟಿ) ಮೂಲಕ ಸಂಪೂರ್ಣವಾಗಿ ಗುಣಪಡಿಸಬಹುದು. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ, ಔಷಧಿ ಲಭ್ಯವಿದೆ.



ಕುಷ್ಠರೋಗಿಗಳಿಗೆ ಅಂಗವಿಕಲ ಶಸ್ತ್ರಚಿಕಿತ್ಸೆ (ಆರ್‌ಸಿಎಸ್) ಸಹ ಸರ್ಕಾರದಿಂದ ಉಚಿತವಾಗಿ ಮಾಡಿಸಲಾಗುತ್ತದೆ. ಜೊತೆಗೆ ಈ ಶಸ್ತ್ರಚಿಕಿತ್ಸೆಗೆ ಒಳಗಾದವರಿಗೆ ಸರ್ಕಾರ 12 ಸಾವಿರ ರೂ. ಸಹಾಯಧನ ನೀಡುತ್ತದೆ. ಪ್ರಕರಣಗಳ ಪತ್ತೆಗಾಗಿ ಪ್ರತಿ ಬುಧವಾರ ಲೆಪ್ರಸಿ ಡೇ ಮೂಲಕ ಪಿಹೆಚ್‌ಸಿ ಸಿಬ್ಬಂದಿ ಸರ್ವೇ ಕಾರ್ಯ ಮಾಡಲಿದ್ದಾರೆ. ಅಲ್ಲದೆ, ಎಲ್ಲಾ ತಜ್ಞ ವೈದ್ಯರೊಂದಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ತಪಾಸಣಾ ಶಿಬಿರ ನಡೆಸಲಾಗುತ್ತದೆ. ಜಿಲ್ಲೆಯಲ್ಲಿ ಪ್ರಸ್ತುತ ನಡೆದ ಮನೆ ಮನೆ ಸರ್ವೇಯಲ್ಲಿ ಯಾವುದೇ ಹೊಸ ಪ್ರಕರಣಗಳು ಪತ್ತೆಯಾಗಿಲ್ಲ.
-ಡಾ.ಬಿ.ಬೃಂದಾ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು, ಮೈಸೂರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಬಿ.ಬೃಂದಾ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕುಷ್ಠರೋಗಕ್ಕೆ ಚಿಕಿತ್ಸೆ ಸಂಪೂರ್ಣ ಉಚಿತವಿದೆ. ಯಾರೂ ಮುಚ್ಚಿಟ್ಟುಕೊಳ್ಳದೇ ಚಿಕಿತ್ಸೆಗೆ ಮುಂದಾದರೆ ಅಂಗವಿಕಲತೆಗೆ ಒಳಗಾಗುವುದನ್ನು ತಪ್ಪಿಸಬಹುದು. ಕುಷ್ಠರೋಗಿಗಳಿಗೆ ಎಂಸಿಆರ್ (ಮಲ್ಟಿ ಸೆಲ್ಯುಲರ್ ರಬ್ಬರ್) ಪಾದರಕ್ಷೆ ನೀಡಲಾಗುತ್ತದೆ. ಇದರಿಂದ ಅಲ್ಸರ್‌ಗೆ ತುತ್ತಾಗುವುದನ್ನು ತಡೆಗಟ್ಟಬಹುದು. ವರ್ಷಕ್ಕೆ ಎರಡು ಜೊತೆ ಈ ರೀತಿಯ ಪಾದರಕ್ಷೆಗಳನ್ನು ಸರ್ಕಾರದಿಂದ ಉಚಿತವಾಗಿ ನೀಡಲಾಗುತ್ತದೆ. ಅಲ್ಲದೆ, ವ್ಯಾಯಾಮ ತರಬೇತಿ ಸಹ ನೀಡಲಾಗುತ್ತದೆ. ಔಷಧಗಳನ್ನು ಒಳಗೊಂಡ ಸೆಲ್ಫ್‌ಕೇರ್ ಕಿಟ್‌ಗಳನ್ನು ರೋಗಿಗಳಿಗೆ ನೀಡಲಾಗುತ್ತದೆ. ಡಿಪಿಎಂಆರ್ ಶಿಬಿರದ ಮೂಲಕ ಈ ಎಲ್ಲಾ ಸಾಮಗ್ರಿಗಳನ್ನು ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಉದಯಗಿರಿ ಠಾಣೆ ಗಲಾಟೆ ಪ್ರಕರಣ

ಮೈಸೂರು ನಗರ ಪೊಲೀಸರ ಕಾರ್ಯವೈಖರಿ ಪ್ರಶಂಸಿಸಿದ ಉಸ್ತುವಾರಿ ಸಚಿವ ಮಹದೇವಪ್ಪ



ಮೈಸೂರು, ಫೆ. 13(ಎಂಕೆ)– ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಗೂ ಉದಯಗಿರಿ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಸಂಬಂಧ ಮೈಸೂರು ನಗರ ಪೊಲೀಸರ ಕಾರ್ಯವೈಖರಿ ಶ್ಲಾಘನೀಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಅವಹೇಳನಕಾರಿ ಪೋಸ್ಟ್ ವೈರಲ್ ಆಗುತ್ತಿದ್ದಂತೆ ಎಚ್ಚೆತ್ತ ಪೊಲೀಸರು, ಸುಮೊಟೋ ಪ್ರಕರಣ ದಾಖಲಿಸಿಕೊಂಡು ಅವಹೇಳನಕಾರಿ ಪೋಸ್ಟ್ ಅನ್ನು ವಾಟ್ಸಾಪ್ ಸ್ಟೇಟಸ್‌ಗೆ ಹಾಕಿಕೊಂಡಿದ್ದವರನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪೊಲೀಸರ ಈ ನಿರ್ಧಾರ ಇಲ್ಲಿನ ಹಿರಿಯ ಮುಖಂಡರಿಗೂ ಸಮಾಧಾನ ತಂದಿತ್ತು. ಆದರೆ, ಕೆಲವರು ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ ಎಂದರು.

ನಂತರ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ತಿರುಗುವಷ್ಟರಲ್ಲಿ ಟಿಯರ್ ಗ್ಯಾಸ್ ಬಳಸಿ, ಜನರನ್ನು ಚದುರಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದವರನ್ನು ಬಂಧಿಸುತ್ತಿದ್ದು, ಪ್ರಕರಣದ ತನಿಖೆ ಕೈಗೊಂಡಿರುವ ಸಿಸಿಬಿ ಪೊಲೀಸರು ಪ್ರಕರಣ ಸತ್ಯಾಂಶ ಹೊರತರಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಹೊಸ ಆದಾಯ ತೆರಿಗೆ ಮಸೂದೆ ಮಂಡನೆ

ಸಂಸದೀಯ ಸಮಿತಿಗೆ ಒಪ್ಪಿಸಲು ಕೇಂದ್ರ ಸರ್ಕಾರ ಮನವಿ



ನವದೆಹಲಿ, ಫೆ.13– ಕೇಂದ್ರ ಹಣ ಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಗುರುವಾರ ಲೋಕಸಭೆಯಲ್ಲಿ ಹೊಸ ಆದಾಯ ತೆರಿಗೆ ಮಸೂದೆ 2025 ಅನ್ನು ಮಂಡಿಸಿದ್ದು, ಅಂತೆಯೇ ಸ್ಪೀಕರ್ ಓಂ ಬಿರ್ಲಾ ಅವರನ್ನು ಸದನದ ಆಯ್ಕೆ ಸಮಿತಿಗೆ ಉಲ್ಲೇಖಿಸುವಂತೆ ಒತ್ತಾಯಿಸಿದರು.

ಆರಂಭದಲ್ಲಿ ವಿರೋಧ ಪಕ್ಷದ ಸದಸ್ಯರು ಮಸೂದೆಯನ್ನು ಪರಿಚಯ ಹಂತದಲ್ಲಿ ವಿರೋಧಿಸಿದರು. ಆದರೆ ಸದನವು ಅದರ ಪರಿಚಯಕ್ಕಾಗಿ ಧ್ವನಿಮತದ ಮೂಲಕ ನಿರ್ಣಯವನ್ನು ಅಂಗೀಕರಿಸಿತು.

ಸೀತಾರಾಮನ್, ಕರಡು ಕಾನೂನನ್ನು ಸದನದ ಆಯ್ಕೆ ಸಮಿತಿಗೆ ಉಲ್ಲೇಖಿಸುವಂತೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಒತ್ತಾಯಿಸಿದರು. ಅದು ಮುಂದಿನ ಅಧಿವೇಶನದ ಮೊದಲ ದಿನದೊಳಗೆ ತನ್ನ ವರದಿಯನ್ನು ಸಲ್ಲಿಸಲಿದೆ. ಪ್ರಸ್ತಾವಿತ ಸಮಿತಿಯ ಸಂಯೋಜನೆ ಮತ್ತು ನಿಯಮಗಳ ಕುರಿತು ನಿರ್ಧಾರ ತೆಗೆದುಕೊಳ್ಳುವಂತೆ ಅವರು ಅವರಲ್ಲಿ ಮನವಿ ಮಾಡಿದರು. ಸಮಿತಿ ಮುಂದಿನ ಅಧಿವೇಶನದ ಮೊದಲ ದಿನ ವರದಿ ಸಲ್ಲಿಸಲಿದೆ. ಬಹು ನಿರೀಕ್ಷಿತ ಮಸೂದೆಯು 'ಮೌಲ್ಯಮಾಪನ ವರ್ಷ' ಮತ್ತು 'ಹಿಂದಿನ ವರ್ಷ'ದಂತಹ ಪರಿಭಾಷೆಗಳನ್ನು ಸರಳಗೊಳಿಸುವ ಕ್ರಮದ ಭಾಗವಾಗಿ 'ಮೌಲ್ಯಮಾಪನ ವರ್ಷ' ಮತ್ತು 'ಹಿಂದಿನ ವರ್ಷ'ದಂತಹ ಪರಿಭಾಷೆಗಳನ್ನು ಬದಲಾಯಿಸುತ್ತದೆ ಮತ್ತು ನಿಬಂಧನೆಗಳು ಮತ್ತು ವಿವರಣೆಗಳನ್ನು ತೆಗೆದು ಹಾಕುತ್ತದೆ. ಪ್ರಸ್ತಾವಿತ ಸಮಿತಿಯ ರಚನೆ ಮತ್ತು ನಿಯಮಗಳ ಬಗ್ಗೆ ನಿರ್ಧಾರ ತೆಗೆದು ಕೊಳ್ಳುವಂತೆ ಸ್ಪೀಕರ್ ಅವರಿಗೆ ಸಚಿವೆ ಮನವಿ ಮಾಡಿದರು. ಹೊಸ ಮಸೂದೆಯಲ್ಲಿ ತೆರಿಗೆ ಪರಿಭಾಷೆಯನ್ನು ಸರಳಗೊಳಿಸುವ ಪ್ರಸ್ತಾವನೆಗಳಿವೆ.

ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ



ಇಂಫಾಲ್, ಫೆ13– ರಾಜಕೀಯ ಪ್ರಕ್ಷುಬ್ಧತೆ ಆವರಿಸಿರುವ ಈಶಾನ್ಯ ರಾಜ್ಯವಾದ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ ಮಾಡಲಾಗಿದೆ. ಎರಡು ದಿನಗಳ ಹಿಂದಷ್ಟೇ ಮಣಿಪುರದ ಮುಖ್ಯಮಂತ್ರಿ ಸ್ಥಾನಕ್ಕೆ ಎನ್. ಬಿರೇನ್ ಸಿಂಗ್ ರಾಜೀನಾಮೆ ಸಲ್ಲಿಸಿದ್ದರು. ಅವರ ನಂತರ ಅಲ್ಲಿ ಯಾರು ಸಿಎಂ ಆಗುತ್ತಾರೆಂಬುದು ತೀವ್ರ ಕುತೂಹಲಕ್ಕೆ ಕಾರಣವಾಗಿತ್ತು. ಆದರೆ, ಎರಡು ದಿನಗಳಾದರೂ ಮಣಿಪುರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಪಕ್ಷದ ಹೈಕಮಾಂಡ್ ಅಲ್ಲಿ ಸಿಎಂ ಆಗಿ ಯಾರನ್ನೂ ನೇಮಿಸಿರಲಿಲ್ಲ. ಆಗಲೇ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಯಾಗಬಹುದು ಎಂಬ ಗುಮಾನಿ ಎದ್ದಿತ್ತು ಈಗ ಆ ಅನುಮಾನ ನಿಜವಾಗಿದೆ.

ಈ ಮಧ್ಯೆ, ಬಿಜೆಪಿಯ ಈಶಾನ್ಯ ರಾಜ್ಯಗಳ ಉಸ್ತುವಾರಿಯಾಗಿರುವ ಸಂಬಿತ್ ಪಾತ್ರಾ, ಮಂಗಳವಾರ ಇಂಫಾಲ್‌ನಲ್ಲಿ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ ಅವರನ್ನು ಭೇಟಿ ಮಾಡಿ, ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿದ್ದರು. ಅದಾದ ಬಳಿಕ ರಾಷ್ಟ್ರಪತಿ ಆಳ್ವಿಕೆಯ ನಿರ್ಧಾರವನ್ನು ಕೇಂದ್ರ ತೆಗೆದುಕೊಂಡಿದೆ.

2024 – 25ರಲ್ಲಿ ಮಣಿಪುರದಲ್ಲಿ ಭುಗಿಲೆದ್ದಿದ್ದ ಹಿಂಸಾಚಾರವನ್ನು ತಡೆಯಲು ಅಲ್ಲಿನ ಬಿಜೆಪಿ ಸರ್ಕಾರಕ್ಕೆ ಆಗಿರಲಿಲ್ಲ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವೂ ಕೈ ಕಟ್ಟಿ ಕುಳಿತುಕೊಂಡಿತ್ತೆಂದು ವಿಪಕ್ಷಗಳು ಆರೋಪಿಸಿದ್ದವು. ಈಗ ಸಿಎಂ ಬಿರೇನ್ ಸಿಂಗ್ ಅವರ ರಾಜೀನಾಮೆ ಪಡೆಯುವ ಮೂಲಕ ಹಾಗೂ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಮೂಲಕ ಬಿಜೆಪಿ ಹೈಕಮಾಂಡ್ ತನ್ನ ಮೇಲಿನ ವಿವಾದಕ್ಕೆ ತೆರೆ ಎಳೆಯಲು ಪ್ರಯತ್ನಿಸಿದೆ. ಆದರೆ, ರಾಷ್ಟ್ರಪತಿ ಆಳ್ವಿಕೆಯ ನಿರ್ಧಾರ ಎಷ್ಟು ದಿನ ಇರಲಿದೆ, ಅಲ್ಲಿ ಮುಂದಿನ ಚಿತ್ರಣ ಹೇಗಾಗುತ್ತೆ ಎಂಬುದರ ಕುತೂಹಲ ಈಗ ಎಲ್ಲರಲ್ಲಿ ಮನೆಮಾಡಿದೆ.

ಸುಮಾರು 2 ವರ್ಷಗಳಿಂದ ತೀವ್ರ ಹಿಂಸಾಚಾರಕ್ಕೆ ಗುರಿಯಾಗಿದ್ದ ಮಣಿಪುರದಲ್ಲಿ ಮುಖ್ಯಮಂತ್ರಿ ವಿರುದ್ಧ ಬಿಜೆಪಿ ಶಾಸಕರೇ ತಿರುಗಿಬಿದ್ದಿದ್ದರು. ಪ್ರತಿಪಕ್ಷ ಕಾಂಗ್ರೆಸ್ ಸಿಎಂ ವಿರುದ್ಧ ಮಂಡಿಸುವ ಅವಿಶ್ವಾಸ ನಿರ್ಣಯಕ್ಕೆ ಬಿಜೆಪಿ ಶಾಸಕರೇ ಬೆಂಬಲ ಸೂಚಿಸುವ ಭೀತಿ ಹಿನ್ನೆಲೆಯಲ್ಲಿ ಸಿಎಂ ಬಿರೇನ್ ಸಿಂಗ್ ತಮ್ಮ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದರು.

ಈ ಸಂದರ್ಭದಲ್ಲಿ ಅವರು ವಿಧಾನಸಭೆ ಸ್ಪೀಕರ್ ತೊಕ್ಚಂ ಸತ್ಯಬ್ರತ, ಬಿರೇನ್ ಸಿಂಗ್ ಸಂಪುಟದಲ್ಲಿ ಸಚಿವರಾಗಿದ್ದ ಖೇಮ್‌ಚಂದ್ ಸಿಂಗ್, ತೌನೋಜಂ ಬಸಂತ್ ಕುಮಾರ್, ಶಾಸಕ ರಾಧೇಶ್ಯಾಮ್‌ರೊಂದಿಗೆ ಮುಂದಿನ ರಾಜಕೀಯ ಕಾರ್ಯತಂತ್ರ ಕುರಿತು ಚರ್ಚೆ ನಡೆಸಿದ್ದರು. ಮಣಿಪುರ ರಾಜ್ಯದ ಸಿಎಂ ಆಯ್ಕೆ ವಿಷಯದಲ್ಲಿ ಹೈಕಮಾಂಡ್ ತೆಗೆದು ಕೊಳ್ಳುವ ನಿರ್ಧಾರಕ್ಕೆ ಶಾಸಕರು ಬದ್ಧರಾಗಿದ್ದರು. ರಾಜ್ಯದಲ್ಲಿ ಎರಡು ವರ್ಷಗಳಿಂದ ನಡೆಯುತ್ತಿರುವ ಜನಾಂಗೀಯ ಸಂಘರ್ಷ ತಣಿಸುವುದು ನಮ್ಮ ಮುಂದಿನ ಗುರಿ ಎಂದು ಖೇಮ್‌ಚಂದ್ ಸಿಂಗ್ ಕೂಡ ಹೇಳಿದ್ದರು.

ಮೈಸೂರು ಹೃದಯಭಾಗದಲ್ಲೇ ಅಪಾಯಕಾರಿ ರಸ್ತೆ ಗುಂಡಿಗಳು!


ಮೈಸೂರಿನ ಇರ್ವಿನ್ ರಸ್ತೆಯಲ್ಲಿ ಕಮಾನು ಗೇಟ್ ಸಮೀಪ ದೊಡ್ಡ ಮಟ್ಟದ ಹಳ್ಳ ಉಂಟಾಗಿರುವುದು.


ಹುಣಸೂರು ರಸ್ತೆಯಲ್ಲಿ ಮಹರ್ಷಿ ವಾಲ್ಮೀಕಿ ರಸ್ತೆ ಜಂಕ್ಷನ್‌ನಲ್ಲಿ ದೊಡ್ಡ ಮಟ್ಟದ ಗುಂಡಿ ಬಿದ್ದಿರುವುದನ್ನು ಕಾಣಬಹುದು.

ಮೈಸೂರು,ಫೆ.13(ಪಿಎಂ)– ರಸ್ತೆಗಳಲ್ಲಿ ಹಳ್ಳ ಬಿದ್ದರೆ ತ್ವರಿತಗತಿಯಲ್ಲಿ ಒಂದಿಷ್ಟು ಡಾಂಬರು ಮೂಲಕ ತೇಪೆ ಹಾಕುವ ಪರಿಪಾಠವನ್ನೂ ಮಹಾನಗರ ಪಾಲಿಕೆ ಹೊಂದಿದಂತಿಲ್ಲ. ಮೈಸೂರಿನ ಇರ್ವಿನ್ ರಸ್ತೆಯಲ್ಲಿ (ಕಮಾನು ಗೇಟ್ ಸಮೀಪ) ದೊಡ್ಡ ಮಟ್ಟದ ಹಳ್ಳ ನಿರ್ಮಾಣವಾಗಿ ಹಲವು ದಿನಗಳೇ ಕಳೆದರೂ ಪಾಲಿಕೆಗೆ ಇದು ಗಮನಕ್ಕೆ ಬಂದಂತೆ ಕಾಣುತ್ತಿಲ್ಲ ಅಥವಾ ಬಂದೂ ಸುಮ್ಮನಿದ್ದಾರೋ ಗೊತ್ತಿಲ್ಲ.

ಇಲ್ಲಿ ಸಬ್‌ಅರ್ಬನ್ ಬಸ್ ನಿಲ್ದಾಣವಿರುವ ಹಿನ್ನೆಲೆಯಲ್ಲಿ ಬೆಳಗ್ಗೆ ಮಾತ್ರವಲ್ಲದೆ, ರಾತ್ರಿ ವೇಳೆಯಲ್ಲಿಯೂ ವಾಹನ ದಟ್ಟಣೆ ವ್ಯಾಪಕವಾಗಿರುತ್ತದೆ. ಹಾಗಾಗಿ ಇಲ್ಲಿನ ಸುತ್ತಮುತ್ತಲ ರಸ್ತೆಗಳನ್ನು ಸುಸ್ಥಿತಿಯಲ್ಲಿ ನಿರ್ವಹಣೆ ಮಾಡುವುದು ಅಗತ್ಯ. ಇಂತಹ ಪರಿಪಾಠ ಇದ್ದಲ್ಲಿ ರಸ್ತೆ ಅಪಘಾತ ತಡೆಯಲು ಸಾಧ್ಯವಾಗುತ್ತದೆ.

ನಗರದ ರಸ್ತೆಗಳಲ್ಲಿ ಹುಡುಕುತ್ತಾ ಹೋದರೆ ಹಳ್ಳಕೊಳ್ಳಗಳ ಸಂಖ್ಯೆಯೇನು ಕಡಿಮೆ ಇಲ್ಲ. ಆದರೆ ನಗರದ ಹೃದಯ ಭಾಗದ ಇಂತಹ ರಸ್ತೆಗಳಲ್ಲಿಯಾದರೂ ಪಾಲಿಕೆ ತ್ವರಿತ ಕ್ರಮ ವಹಿಸುವ ಅಗತ್ಯ ಅರಿಯಬೇಕಿದೆ. ಇನ್ನು ಇದೇ ರಸ್ತೆಯಲ್ಲಿ ಕಮಾನು ಗೇಟ್ ಜಂಕ್ಷನ್‌ನಿಂದ ಸರ್ಕಾರಿ ಆಯುರ್ವೇದ ಕಾಲೇಜು ವೃತ್ತದವರೆಗೆ ಇಲ್ಲಿರುವ ಒಳಚರಂಡಿಗಳ ಮೇಲ್ಮಟ್ಟವನ್ನು ರಸ್ತೆಗೆ ಸಮತಟ್ಟಾಗಿ ಡಾಂಬರು ಬಳಸಿ ಮುಚ್ಚಿಲ್ಲ. ಹಾಗಾಗಿ ಇಲ್ಲಿ ಸಂಚರಿಸುವಾಗ ವಾಹನ ಸವಾರರಿಗೆ ಒಂದು ರೀತಿಯಲ್ಲಿ ರಸ್ತೆ ಗುಂಡಿಯ ಮೇಲೆ ಹೋದ ಅನುಭವವೇ ಆಗುತ್ತಿದೆ. ಇಲ್ಲಿನ ಕೆಲ ಒಳಚರಂಡಿಗಳ ಸುತ್ತಲೂ ಡಾಂಬರು ಕಿತ್ತು ಬಂದಿದ್ದರೆ, ಕೆಲವುಗಳಲ್ಲಿ ಮೇಲ್ಮಟ್ಟ ರಸ್ತೆಯ ಮಟ್ಟವನ್ನು ಮೀರಿ ಮೇಲಿದ್ದು, ಇವು ಸಹ ರಸ್ತೆ ಗುಂಡಿಯಂತೆಯೇ ಸವಾರರಿಗೆ ಕಿರಿಕಿರಿ ಉಂಟು ಮಾಡುತ್ತಿವೆ.

ಹುಣಸೂರು ರಸ್ತೆಯಲ್ಲಿಯೂ ಮಹರ್ಷಿ ವಾಲ್ಮೀಕಿ ರಸ್ತೆ ಜಂಕ್ಷನ್‌ನಲ್ಲಿ ದೊಡ್ಡ ಮಟ್ಟದ ಗುಂಡಿ ನಿರ್ಮಾಣಗೊಂಡು ದಿನ ಕಳೆಯುತ್ತಿವೆ. ವಾಹನಗಳು ಗುಂಡಿಯ ಸಮೀಪಕ್ಕೆ ಬರುತ್ತಿದ್ದಂತೆ ವಾಹನ ಸವಾರರು ಪರದಾಡುವಂತಾಗಿದೆ. ಈ ಗುಂಡಿ ಇದ್ದಕ್ಕಿದ್ದಂತೆ ವಾಹನ ಸವಾರರಿಗೆ ಕಂಡಾಗ ಅವರು ಅದರ ಮೇಲೆ ವಾಹನ ಸಾಗುವುದನ್ನು ತಪ್ಪಿಸಲು ಎಡ ಅಥವಾ ಬಲಕ್ಕೆ ವಾಹನದ ತಿರುವು ತೆಗೆದುಕೊಳ್ಳಲು ಮುಂದಾಗುತ್ತಿದ್ದು, ಇದರಿಂದ ಈ ವಾಹನಗಳ ಹಿಂಬದಿಯಲ್ಲಿ ಬರುವ ವಾಹನಗಳು ಡಿಕ್ಕಿ ಹೊಡೆಯುವ ಸಂಭವವೂ ಇದೆ.

ಮೈಸೂರು ಮಹಾನಗರ ಪಾಲಿಕೆಯು ಈ ರಸ್ತೆ ಗುಂಡಿಗಳನ್ನು ಮುಚ್ಚಲು ಶೀಘ್ರದಲ್ಲಿ ಕ್ರಮವಹಿಸಬೇಕು. ಜೊತೆಗೆ ಪಾಲಿಕೆ ವಲಯ ಕಚೇರಿಗಳು ತಮ್ಮ ವ್ಯಾಪ್ತಿಯ ರಸ್ತೆಗಳನ್ನು ಆಗಾಗ್ಗೆ ಪರಿಶೀಲಿಸಿ ಗುಂಡಿಗಳನ್ನು ಮುಚ್ಚುವ ಪರಿಪಾಠ ಬೆಳೆಸಿಕೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.


ಸ್ವಾಮಿ ವಿವೇಕಾನಂದರ ಮೊಸಾಯಿಕ್ ಭಾವಚಿತ್ರ

ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಆಯ್ಕೆ

ಮೈಸೂರು, ಫೆ.13(ಎಂಕೆ)– ಸ್ವಾಮಿ ವಿವೇಕಾನಂದರ ಅತೀ ದೊಡ್ಡ ಮೊಸಾಯಿಕ್ ಕಲಾ ಭಾವಚಿತ್ರ ರಚಿಸಿದ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿ ಸಿ.ಎನ್.ಮೋಹನ್ ರಾಜ್ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಆಯ್ಕೆಯಾಗಿದ್ದಾರೆ.

ಶಾಲೆಯ ಗ್ರಂಥಪಾಲಕ ಪ್ರಸನ್ನ ಅವರ ಮಾರ್ಗದರ್ಶನದಲ್ಲಿ 200 ತುಂಡುಗಳಾಗಿ ಕತ್ತರಿಸಿದ 510 ಎ4 ಹಾಳೆಗಳನ್ನು ಬಳಸಿ 6*4 ಸುತ್ತಳತೆಯ ಸ್ವಾಮಿ ವಿವೇಕಾನಂದರ ಅತಿ ದೊಡ್ಡ ಮೊಸಾಯಿಕ್ ಕಲಾ ಭಾವಚಿತ್ರ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಆಯ್ಕೆಯಾಗಿದೆ.

ಶ್ರೀರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥರಾದ (ಕರೆಸ್ಪಾಂಡೆಂಟ್) ಸ್ವಾಮಿ ಯುಕ್ತೇಶಾನಂದಜೀ ಅವರು ವಿದ್ಯಾರ್ಥಿಯ ಸಾಧನೆಯನ್ನು ಶ್ಲಾಘಿಸಿದರು.


ಸ್ವಾಮಿ ವಿವೇಕಾನಂದರ ಅತಿ ದೊಡ್ಡ ಮೊಸಾಯಿಕ್ ಕಲಾ ಭಾವಚಿತ್ರ

ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್, ಗ್ರಂಥಪಾಲಕ ಪ್ರಸನ್ನ ಉಪಸ್ಥಿತರಿದ್ದರು.

ಸಣ್ಣ, ಅತಿ ಸಣ್ಣ ಹೊಸ ಘಟಕಗಳ ಸ್ಥಾಪನೆಗೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು,ಫೆ.13– ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ 2024–25 ನೇ ಸಾಲಿನ ನೇಕಾರರ ಪ್ಯಾಕೇಜ್– SCP/TSP ಯೊಜನೆಯಡಿ, ಮೈಸೂರು ಜಿಲ್ಲೆಗೆ ವಿಶೇಷ ಘಟಕದ ಯೋಜನೆಯಡಿ (SCP)04 ಮತ್ತು ಗಿರಿಜನ ಉಪಯೋಜನೆಯಡಿ (SME) 2 ಗುರಿಯನ್ನು ನಿಗದಿಪಡಿಸಲಾಗಿರುವುದರಿಂದ ಆಸಕ್ತ ಪರಿಶಿಷ್ಟ ಜಾತಿ, ಪಂಗಡದ ಉದ್ದಿಮೆದಾರರಿಂದ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (SME) ಹೊಸ ಘಟಕಗಳ ಸ್ಥಾಪನೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಫೆ.20 ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆ, ಸಿ.ಟಿ.ಐ. ಕಟ್ಟಡ, ಸಯ್ಯಾಜಿ ರಾವ್ ರಸ್ತೆ, ಮೈಸೂರು, ಇಲ್ಲಿಗೆ ಕಚೇರಿಯ ಕೆಲಸದ ಸಮಯದಲ್ಲಿ ಖುದ್ದಾಗಿ ಭೇಟಿ ನೀಡಿ ಅಥವಾ ಕಛೇರಿ ದೂ.ಸಂ: 0821–2441353 ನ್ನು ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮೈಸೂರಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್

ಮೈಸೂರು, ಫೆ13– ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಶುಕ್ರವಾರ ಮೈಸೂರಿಗೆ ಭೇಟಿ ನೀಡಲಿದ್ದಾರೆ. ಬೆಳಗ್ಗೆ 8.30ಕ್ಕೆ ಹುಣಸೂರು ಬೈಲುಕುಪ್ಪೆಗೆ ಭೇಟಿ ನೀಡಿ, ಬೌದ್ಧ ಧರ್ಮಗುರುಗಳಾದ ದಲೈಲಾಮ ಅವರನ್ನು ಭೇಟಿ ಮಾಡಿದ ಬಳಿಕ ಮಧ್ಯಾಹ್ನ 12.30ರ ವೇಳೆಗೆ ಮೈಸೂರಿಗೆ ಆಗಮಿಸಲಿದ್ದಾರೆ. ಈ ವೇಳೆ ಉದಯಗಿರಿ ಪೊಲೀಸ್ ಠಾಣೆಗೆ ಭೇಟಿ ನೀಡಿ, ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸುವ ಸಾಧ್ಯತೆ ಇದೆ.

ಬಬ್ಬೂರುಕಮ್ಮೆ ವಿದ್ಯಾರ್ಥಿಗಳಿಗೆ ಪುರಸ್ಕಾರ

ಮೈಸೂರು, ಫೆ. 13– ಬಬ್ಬೂರುಕಮ್ಮೆ ಸಂಘವು ಜನಾಂಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಿದೆ. ಆಸಕ್ತರು ಫೆ. 20 ರೊಳಗೆ ಮೊ. 96325 51192 ಸಂಪರ್ಕಿಸುವಂತೆ ಗೌರವ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರಿ ತೊರೆದ ಚಿರತೆ ಯಶಸ್ವಿ ಸೆರೆ; ಶೀಘ್ರ ಕಂಗಾಲಾದ ಮರಿಗಳು ತಾಯಿ ಮಡಿಲಿಗೆ

ಮೈಸೂರು,ಫೆ13(ಎಂಟಿವೈ)– ಬೇರ್ಪಟ್ಟಿದ್ದ ತಾಯಿ ಚಿರತೆ ಹಾಗೂ ಮೂರು ಮರಿಗಳು ಅರಣ್ಯ ಇಲಾಖೆ ಸಿಬ್ಬಂದಿಯ ಆರು ದಿನಗಳ ನಿರಂತರ ಪ್ರಯತ್ನದ ಫಲವಾಗಿ ಮತ್ತೆ ಒಂದಾಗಿವೆ.

ಮರಿಗಳ ಸುರಕ್ಷತೆ ಕಾರಣಕ್ಕೋ ಅಥವಾ ಮನುಷ್ಯರ ಮೇಲಿನ ಭಯದಿಂದಲೋ ಮರಿಗಳನ್ನು ಸೇತುವೆಯ ಪೈಪ್‌ನೊಳಗೆ ಬಿಟ್ಟು ಹೋಗಿದ್ದ ತಾಯಿ ಚಿರತೆ, ಆರು ದಿನಗಳ ಬಳಿಕ ಇಂದು ಮರಿಗಳಿದ್ದ ಸ್ಥಳಕ್ಕೆ ಬಂದಾಗ ಚಿರತೆ ಕಾರ್ಯಪಡೆ ಅದನ್ನು ಸೆರೆ ಹಿಡಿದಿದೆ. ಈ ಮೂಲಕ ದೂರವಾಗಿದ್ದ ಚಿರತೆ ಮರಿಗಳನ್ನು ತಾಯಿ ಮಡಿಲು ಸೇರಿಸುವಲ್ಲಿ ಯಶಸ್ವಿಯಾಗಿದೆ.

ಮೈಸೂರು ತಾಲೂಕು, ಭುಗತಗಳ್ಳಿ ಗ್ರಾಮದ ಖಾಸಗಿ ಬಡಾವಣೆಯಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯ ಪೈಪ್‌ನೊಳಗೆ ಫೆ.7ರಂದು ರಾತ್ರಿ ಎರಡು ಚಿರತೆ ಮರಿಗಳು ಪತ್ತೆಯಾಗಿದ್ದವು. ಈ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ತಿಳಿದ ಚಿರತೆ ಕಾರ್ಯಪಡೆ ಸಿಬ್ಬಂದಿ, ಚಿರತೆ ಮರಿಗಳನ್ನು ರಕ್ಷಣೆ ಮಾಡಿದ್ದರು. ಮರಿಗಳನ್ನು ಬಿಟ್ಟು ಹೋಗಿರುವ ತಾಯಿ ಚಿರತೆ ಮತ್ತೆ ಬರಬಹುದು ಎಂದು ಮುಂಜಾಗ್ರತೆ ವಹಿಸುವಂತೆ ಜನರಿಗೆ ತಿಳಿಸಿ, ಚಿರತೆ ಚಲನವಲನದ ಬಗ್ಗೆ ನಿಗಾ ವಹಿಸಿದ್ದರು. ಎರಡು ದಿನಗಳ ಬಳಿಕ ಅದೇ ಸ್ಥಳದಲ್ಲಿ ಮತ್ತೊಂದು ಮರಿ ಪತ್ತೆಯಾಗಿತ್ತು. ಮೂರು ಮರಿಗಳನ್ನೂ ಆರೈಕೆ ಮಾಡಿ, ತಾಯಿ ಚಿರತೆಗಾಗಿ ಕ್ಯಾಮರಾ ಟ್ರ್ಯಾಪ್ ಸಹಾಯದಲ್ಲಿ ಶೋಧ ಕಾರ್ಯ ನಡೆಸಲಾಗಿತ್ತು.


ಕೆಲ ದಿನಗಳ ಹಿಂದೆ ರಕ್ಷಿಸಿದ ಮೂರು ಚಿರತೆ ಮರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮರಿಗಳಿದ್ದ ಜಾಗದಲ್ಲೇ ಸೆರೆ: ತನ್ನ ಮರಿಗಳನ್ನು ಬಿಟ್ಟು ಹೋಗಿದ್ದ ಸ್ಥಳಕ್ಕೆ ಬಂದಿದ್ದ ತಾಯಿ ಚಿರತೆಯನ್ನು ಗುರುವಾರ ಬಡಾವಣೆ ನಿವಾಸಿಗಳ ಸಹಕಾರದೊಂದಿಗೆ ಸುರಕ್ಷಿತವಾಗಿ ಸೆರೆಹಿಡಿಯಲಾಗಿದೆ. ತಾಯಿ ಚಿರತೆ ಹಾಗೂ ಮರಿಗಳನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ದಿರುವ ಅರಣ್ಯ ಇಲಾಖೆ ಸಿಬ್ಬಂದಿ, ಆರೋಗ್ಯ ತಪಾಸಣೆಗೆ ಒಳಪಡಿಸಿದ್ದಾರೆ. ಕೆಲ ಪ್ರಾಣಿಗಳು ಜನ ಮುಟ್ಟಿದ ಮರಿಗಳನ್ನು ತಕ್ಷಣಕ್ಕೆ ತನ್ನೊಟ್ಟಿಗೆ ಸೇರಿಸಿಕೊಳ್ಳುವುದಿಲ್ಲ. ಆದ್ದರಿಂದ ಚಿರತೆ ಹಾಗೂ ಮರಿಗಳನ್ನು ಪ್ರತ್ಯೇಕ ಕೊಠಡಿಯಲ್ಲಿಟ್ಟು ಪರಸ್ಪರ ಎದುರುಗೊಳ್ಳುವಂತೆ ಮಾಡಲಾಗಿದೆ. ತಾಯಿ ಚಿರತೆ ಮರಿಗಳನ್ನು ಗುರುತಿಸಿ, ಪ್ರೀತಿ ತೋರಿದ ನಂತರವೇ ತಾಯಿ ಚಿರತೆ ಹಾಗೂ ಮೂರು ಮರಿಗಳನ್ನು ಒಟ್ಟಿಗೆ ಸೂಕ್ತ ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲಾಗುತ್ತದೆ.

ವರ್ಷದ ಹಿಂದೆ ಆಯರಹಳ್ಳಿಯಲ್ಲಿ ಒಂದು ಕಪ್ಪು ಮರಿ ಸೇರಿದಂತೆ ಮೂರು ಮರಿಗಳನ್ನು ರಕ್ಷಿಸಲಾಗಿತ್ತು. ಅವುಗಳನ್ನು 9 ದಿನದ ಬಳಿಕ ತಾಯಿ ಮಡಿಲಿಗೆ ಸೇರಿಸುವಲ್ಲಿ ಮೈಸೂರು ಅರಣ್ಯ ಸಿಬ್ಬಂದಿ ಯಶಸ್ವಿಯಾಗಿದ್ದರು. ಇದೀಗ ಮತ್ತೆ ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಡಾ.ಕೆ.ಎನ್.ಬಸವರಾಜು ಮಾರ್ಗದರ್ಶನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ, ಮೂರು ಮರಿಗಳನ್ನು ತಾಯಿ ಮಡಿಲಿಗೆ ಸೇರಿಸುವಲ್ಲಿ ಒಂದು ಹಂತಕ್ಕೆ ಸಫಲರಾಗಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆಟೋ ಡ್ರೈವರ್ : ಸಾರಿ ಸಾರ್... ಮೀಟರ್ ಹಾಕೋದು ಮರೆತೇ ಬಿಟ್ಟೆ...

ಗುಂಡ : ಪರವಾಗಿಲ್ಲ ಬಿಡಿ... ನಾನೂ ಕೂಡ ಪರ್ಸ್ ತರೋದು ಮರೆತೇ ಬಿಟ್ಟೆ!!

ಮೈಸೂರು ಮಿತ್ರ

ಶುಕ್ರವಾರ, 14 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೆಲವು ಜನರು ನಿಮ್ಮ ಜೀವನದಿಂದ ಬಿಟ್ಟು ಹೊರಟಿದ್ದಾರೆ ಅಂದರೆ ಅದು ನಿಮ್ಮ ಕಥೆಯ ಅಂತ್ಯವಲ್ಲ. ಅದು ನಿಮ್ಮ ಕಥೆಯಲ್ಲಿ ಅವರ ಭಾಗದ ಅಂತ್ಯವಾಗಿದೆ ಅಂದರ್ಥ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಭಾಷೆ ತಿಳಿಯದಿದ್ದರೂ ಹಾಸ್ಯಕ್ಕೆ ಕಡಿಮೆಯಿಲ್ಲ.

ನಿಮ್ಮ ಪತ್ರಗಳು

ಪೊಲೀಸರೆಂದರೆ ಸ್ವಲ್ಪವೂ ಭಯವಿಲ್ಲವೇ?

ಮಾನ್ಯರೆ,

ಮೈಸೂರಿನ ಉದಯಗಿರಿ ಬಡಾವಣೆಯಲ್ಲಿ ಕರ್ತವ್ಯನಿರತ ಪೊಲೀಸರ ಮೇಲೆ ಕೆಲವು ಯುವಕರು ಕಲ್ಲು ತೂರಾಟ ನಡೆಸಿರುವ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ, ಈ ಬಗ್ಗೆ ಪತ್ರಿಕೆಗಳಲ್ಲಿ ಬಂದ ಸುದ್ದಿಗಳನ್ನು ಓದಿದ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಬಂದ ಸುದ್ದಿಗಳನ್ನು ನೋಡಿದ ಮೈಸೂರಿನ ಜನತೆ ನಿಜಕ್ಕೂ ಗಾಬರಿಗೊಂಡಿದ್ದಾರೆ.

ಮೈಸೂರು, ಭಾರತದ ಕರ್ನಾಟಕ ರಾಜ್ಯದಲ್ಲಿ ಇದೆಯೋ ಅಥವಾ ಯಾವುದಾದರೂ ಭಯೋತ್ಪಾದಕ ರಾಷ್ಟ್ರದಲ್ಲಿ ಇದೆಯೋ ಎಂದು ಗಾಬರಿಯಾಗಿದ್ದಾರೆ. ಈ ಬಗ್ಗೆ ತಕ್ಷಣ ಘಟನೆ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು, ಪರಿಸ್ಥಿತಿಯನ್ನು ಅವಲೋಕಿಸಿ ಕಠಿಣ ಕ್ರಮ ತೆಗೆದುಕೊಳ್ಳಬೇಕಾದ ಗೃಹ ಮಂತ್ರಿಗಳು ದಾಳಿ ನಡೆಸಿದವರನ್ನು ಬಂಧಿಸುವಂತೆಯೂ, ದಾಂಧಲೆ ಎಬ್ಬಿಸಿದವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆಯೂ ಪೊಲೀಸರಿಗೆ ಸೂಚಿಸಿರುವುದು ಸ್ವಾಗತಾರ್ಹವೇ ಸರಿ. ಸರ್ಕಾರಿ ವಾಹನಗಳ ಮೇಲೆ ಮತ್ತು ಏನೂ ಅರಿಯದ ದಾರಿಹೋಕರ ಮೇಲೆ ಇಂತಹ ಕಲ್ಲು ತೂರಾಟ ನಡೆಸಿರುವುದು ಅಕ್ಷಮ್ಯ ಅಪರಾಧವೇ ಸರಿ.

ಕೇವಲ ಮತಗಳ ಮೇಲೆ ಕಣ್ಣಿಟ್ಟು ಒಂದು ಸಮುದಾಯದ ಓಲೈಕೆ ಅತಿಯಾಗಿರುವುದು ಸುಳ್ಳಲ್ಲ. ಈ ತರಹ ಓಲೈಕೆ ಸಾಮಾನ್ಯ ಜನರನ್ನು ಆಗಾಗ ಸಂಕಷ್ಟಕ್ಕೀಡು ಮಾಡುತ್ತದೆ ಎಂಬುದು ಗೃಹ ಮಂತ್ರಿಗಳಿಗೆ ತಿಳಿದಿಲ್ಲವೇ? ತಿಳಿದಿದ್ದರೂ ಈ ಬೇಜವಾಬ್ದಾರಿ ವರ್ತನೆ ಏತಕ್ಕೆ? ತಕ್ಷಣ ಉದಯಗಿರಿಗೆ ಖುದ್ದು ಭೇಟಿ ನೀಡಿ ಗಾಯಗೊಂಡ ಪೊಲೀಸರಿಗೆ ನಾಲ್ಕಾರು ಸಮಾಧಾನದ ಮಾತುಗಳನ್ನಾದರೂ ಆಡಬಹುದಿತ್ತಲ್ಲವೇ? ಇಂತಹ ಘಟನೆಗಳು ನಡೆದಾಗ ಅಲ್ಪಸಂಖ್ಯಾತರು ಗಾಯಗೊಂಡರೆ ಆಗಲೂ ಗೃಹ ಮಂತ್ರಿಗಳು ಸದರಿ ಜಾಗಕ್ಕೆ ಭೇಟಿ ನೀಡದೇ ಇರುತ್ತಿದ್ದರೆ? ಇಲ್ಲ ಖಂಡಿತ ಇಲ್ಲವೆಂದೇ ಹೇಳಬೇಕಾಗಿದೆ. ಸುಮಾರು ಇಪ್ಪತ್ತೈದು ಗೂಟದ ಕಾರುಗಳ ಜೊತೆ ಅವರು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ ತಮಗೆ ಬೇಕು ಬೇಕಾದವರಿಗೆ ಸಾಂತ್ವನ ಹೇಳಿ ತಕ್ಷಣ ಅಲ್ಲಿಯೇ ಪರಿಹಾರದ ಚೆಕ್‌ಗಳನ್ನು ವಿತರಿಸುತ್ತಿದ್ದರು ಅಲ್ಲವೇ?

ಇಲ್ಲಿ ಇನ್ನೊಂದು ಮುಖ್ಯ ವಿಷಯವನ್ನು ಗಮನಿಸಬೇಕಾಗಿದೆ. ಈ ಹಿಂದೆ ಹುಬ್ಬಳ್ಳಿಯಲ್ಲಿ ನಡೆದ ಗಲಾಟೆಯಲ್ಲಿ ಭಾಗವಹಿಸಿದವರಿಗೆ ಗೃಹ ಮಂತ್ರಿಗಳು ತಕ್ಷಣ ಪರಿಹಾರದ ಚೆಕ್‌ಗಳನ್ನು ವಿತರಿಸಿದ ನೆನಪು. ಈಗ ಉದಯಗಿರಿಯಲ್ಲಿ ಪೊಲೀಸ್ ಠಾಣೆಯ ಮೇಲೆ ನಡೆದಿರುವ ದಾಳಿಯು ಪೂರ್ವಯೋಜಿತ ಕೃತ್ಯವೆಂದು ಹಲವಾರು ಮಂದಿ ಹೇಳುತ್ತಿದ್ದಾರೆ. ಪೊಲೀಸರ ಮೇಲೆ ಕಲ್ಲು ತೂರಾಟ ಮತ್ತು ದಾಳಿಯ ದೃಶ್ಯಗಳು ಸಿಸಿ ಕ್ಯಾಮರಾದಲ್ಲಿ ದಾಖಲಾಗಿದೆಯೆಂದು ವರದಿಗಳು ತಿಳಿಸುತ್ತವೆ. ಇಂತಹ ಘಟನೆಗಳು ನಡೆದಾಗ ತಕ್ಷಣ ಕ್ರಮ ಕೈಗೊಳ್ಳಬೇಕಾದ ಗೃಹ ಮಂತ್ರಿಗಳು ಏನೂ ಕ್ರಮ ಕೈಗೊಳ್ಳದೆ ನಿರಾಸಕ್ತಿ ತಾಳುವುದೇಕೆ? ಇದಕ್ಕೆಲ್ಲಾ ಕಾಲವೇ ಉತ್ತರ ಹೇಳಬೇಕಾಗಿದೆ. **–ಬೇಲೂರು ದ.ಶಂ. ಪ್ರಕಾಶ್, ಮೈಸೂರು**

ಜನಪ್ರತಿನಿಧಿಗಳ ಪ್ರತಿಕ್ರಿಯೆ ಬೇಕು

ಮಾನ್ಯರೆ,

ಮೈಸೂರಿನ ಬನ್ನಿಮಂಟಪದ ಎಲ್‌ಐಸಿ ವೃತ್ತಕ್ಕೆ ಮರು ನಾಮಕರಣ ಬೇಡ. ಅದಕ್ಕೆ ಈಗಾಗಲೇ ಟಿಎನ್‌ಎನ್ ವೃತ್ತ ಎಂದು ನಾಮಕರಣವಾಗಿದೆ. ಈ ಬಗ್ಗೆ ಪಾಲಿಕೆ ಹಾಗೂ ಸಂಸದರು ಗಮನಿಸಬೇಕು ಎಂಬುದು ತಮ್ಮ ಅಭಿಪ್ರಾಯ ಎಂದು ಮಾಜಿ ಶಾಸಕರು, ಸಚಿವರೂ ಆದ ಎಂ ಶಿವಣ್ಣನವರು 'ಮೈಸೂರು ಮಿತ್ರ' ಓದುಗರ ಪತ್ರ ವಿಭಾಗಕ್ಕೆ 12.2.25. ರಂದು, ಪತ್ರ ಬರೆದು ತಿಳಿಸಿರುವುದನ್ನು ನೋಡಿ ಜನಪ್ರತಿನಿಧಿಗಳ ಕಾಳಜಿ ಹೆಮ್ಮೆ ಎನಿಸಿತು.

ಇದೇ ರೀತಿ ನಗರ, ಜಿಲ್ಲೆಯ ವಿವಿಧ ಸಮಸ್ಯೆಗಳು ನಿತ್ಯ ಓದುಗರ ಪತ್ರ, ಪತ್ರಿಕೆಯ ಸುದ್ದಿಗಳಲ್ಲಿ ಪ್ರಕಟವಾಗುತ್ತಿರುತ್ತವೆ. ಆದರೆ ಯಾವ ಜನಪ್ರತಿನಿಧಿಯಾಗಲೀ, ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಾಗಲೀ ಯಾವುದೇ ಪ್ರತಿಕ್ರಿಯೆ, ಉತ್ತರ ನೀಡದೇ ಗೊತ್ತಿದ್ದೂ ಗೊತ್ತಿಲ್ಲದಂತೆ ಇರುತ್ತಾರೆ. ಇನ್ನು ಮುಂದಾದರು ಸಂಬಂಧಪಟ್ಟವರು ಸೂಕ್ತ ಕ್ರಮ, ಪ್ರತಿಕ್ರಿಯೆ ನೀಡಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಮೊದಲು ಇದ್ದ ವ್ಯವಸ್ಥೆ ಜಾರಿಗೊಳಿಸಲಿ

ಮಾನ್ಯರೆ,

ಕಳೆದ ಮೂರು ವರ್ಷಗಳ ಹಿಂದೆ 'ಕೊರೊನಾ' ಸಾಂಕ್ರಾಮಿಕ ರೋಗ ದೇಶದೆಲ್ಲೆಡೆ ಹರಡಿದ ಸಂದರ್ಭದಲ್ಲಿ ಸಾರ್ವಜನಿಕರು ಸುಳ್ಳು ಸುದ್ದಿಗಳನ್ನು ಹೊರಡಿಸುತ್ತಾರೆಂದು ಭಾರತೀಯ ದೂರ ಸಂಪರ್ಕ ಪ್ರಾಧಿಕಾರ (TRAI), ಸಾರ್ವಜನಿಕರು ತಮ್ಮ ಮೊಬೈಲ್‌ನಿಂದ ಒಂದು ಬಾರಿಗೆ 5 ಜನರಿಗೆ ಮಾತ್ರ ಸಂದೇಶಗಳನ್ನು ಅಥವಾ ಸುದ್ದಿಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಆದರೆ ಈ ಹಿಂದೆ ಒಂದು ಬಾರಿಗೆ ಎಷ್ಟು ಜನರಿಗೆ ಬೇಕಾದರೂ ಸಂದೇಶಗಳನ್ನು ಕಳುಹಿಸುವ ವ್ಯವಸ್ಥೆ ಇತ್ತು. ಆದರೆ ಈಗ ದೇಶದಲ್ಲಿ ಕೊರೊನಾ ಸೋಂಕು ನಿವಾರಣೆ ಆಗಿರುವುದರಿಂದ, ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ ಈ ನಿರ್ಬಂಧಿತ ಆದೇಶವನ್ನು ಹಿಂಪಡೆದು, ಈ ಮೊದಲು ಇದ್ದ ವ್ಯವಸ್ಥೆಯನ್ನು ಜಾರಿಗೊಳಿಸಿ ಮೊಬೈಲ್ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಭಾರತೀಯ ದೂರಸಂಪರ್ಕ ಪ್ರಾಧಿಕಾರ ಕ್ರಮ ಕೈಗೊಳ್ಳಬೇಕು.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಆಕ್ಸಿಜನ್ ದುರಂತದ ಸಂತ್ರಸ್ತರಿಗೆ ನ್ಯಾಯ ಒದಗಿಸಿ

ಮಾನ್ಯರೆ,

ಚಾಮರಾಜನಗರದಲ್ಲಿ 4 ವರ್ಷಗಳ ಹಿಂದೆ ನಡೆದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ 36 ಮಂದಿಯ ಕುಟುಂಬಗಳಿಗೆ ನ್ಯಾಯ ಒದಗಿಸಿಕೊಡಲು ಇನ್ನೂ ಸಾಧ್ಯವಾಗದಿರುವುದು ದುರಂತವೇ ಸರಿ. ನಮ್ಮನ್ನಾಳುವ ಸರ್ಕಾರದ ಪ್ರತಿನಿಧಿಗಳು ಬರೀ ಆಶ್ವಾಸನೆ ನೀಡುವುದರಲ್ಲಿ ನಿಸ್ಸೀಮರು. ಯಾವುದೇ ಸಮಸ್ಯೆಗೆ ಪರಿಹಾರ ಕೊಡಿಸುವಲ್ಲಿ ವಿಳಂಬ ಧೋರಣೆ ಅನುಸರಿಸುವುದು ಒಳ್ಳೆಯದಲ್ಲ. ಸಂತ್ರಸ್ತ ಕುಟುಂಬಗಳು, ಸರ್ಕಾರ ನೀಡಿದ ಆಶ್ವಾಸನೆಯನ್ನು ನಂಬಿ ಇನ್ನೇನು ಕೆಲವೇ ದಿನಗಳಲ್ಲಿ ನಮ್ಮ ಬೇಡಿಕೆಗಳು ಈಡೇರಿಬಿಡುತ್ತವೆ ಎಂದು 4 ವರ್ಷಗಳಿಂದ ಕಾದು ಬಸವಳಿದು ಪ್ರತಿಭಟನೆಗೆ ಇಳಿದಿರುವುದು ಸ್ವಾಗತಾರ್ಹ. ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಸಂತ್ರಸ್ತರಿಗೆ ನ್ಯಾಯ ಕೊಡಿಸುವ ಭರವಸೆ ನೀಡಿದ್ದುದ್ದು ಸರಿಯಷ್ಟೆ, ಅವರ ಸರ್ಕಾರ ಅಧಿಕಾರಕ್ಕೆ ಬಂದರೂ ಇಲ್ಲಿಯ ತನಕ ನ್ಯಾಯ ಸಿಕ್ಕಿಲ್ಲ. ಇನ್ನಾದರೂ ಸರ್ಕಾರ ಎಚ್ಚೆತ್ತುಕೊಂಡು ಸಂತ್ರಸ್ತರ ಬೇಡಿಕೆಗಳು ಆದಷ್ಟು ಬೇಗನೆ ಈಡೇರಿಸುವುದು ಸೂಕ್ತ. **–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.**

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಅಮ್ಮನಿಗೇ ಅಮ್ಮನಾಗುವ ಮಗಳು..!!

ನಮ್ಮಲ್ಲಿ ಸಾಮಾನ್ಯವಾಗಿ ಆಗಾಗ್ಗೆ ಮಗ ಹೆಚ್ಚೋ, ಮಗಳು ಹೆಚ್ಚೋ ಎಂಬ ಚರ್ಚೆ ನಡೆಯುತ್ತಲೇ ಇರುತ್ತದೆ. ಮಗ ಹೆಚ್ಚು ಎನ್ನುವವರು ಅದಕ್ಕೆ ಪೂರಕವಾದ ಅಂಶಗಳನ್ನು ಮಂಡಿಸಿದರೆ, ಮಗಳು ಹೆಚ್ಚು ಎನ್ನುವವರು ಅದಕ್ಕೆ ತಕ್ಕಂತಹ ವಾದ ಮಂಡಿಸುತ್ತಾರೆ. ಮಗ ಇದ್ದರೆ ಅವನು ನಮ್ಮ ವಂಶ ಬೆಳೆಸುತ್ತಾನೆ, ನಮ್ಮನ್ನು ಕೊನೆಗಾಲದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾನೆ, ನಮ್ಮ ಕಷ್ಟಸುಖಗಳಲ್ಲಿ ಅವನು ಭಾಗಿಯಾಗುತ್ತಾನೆ. ಆದ್ದರಿಂದ ಮಗ ಇದ್ದರೆ ಒಳ್ಳೆಯದು. ಮಗಳು ಬೇರೆ ಮನೆಯನ್ನು ಬೆಳಗಲು ಹೋಗುತ್ತಾಳೆ. ಆದ್ದರಿಂದ ನಮ್ಮನ್ನು ಅವಳು ಕೊನೆಗಾಲದಲ್ಲಿ ನೋಡಿಕೊಳ್ಳಲಾಗುವುದಿಲ್ಲ ಎಂಬುದು ಅವರ ವಾದ. ಆದರೆ ಮಮತೆ ಹಾಗೂ ಸಹನೆ ಇರುವುದು ಮಗಳಿಗೆ ಮಾತ್ರ. ಆಕೆ ತನ್ನ ತವರಿನ, ತಂದೆ–ತಾಯಿಯ ಬಗ್ಗೆ ಯಾವತ್ತೂ ಅಭಿಮಾನ ಇಟ್ಟುಕೊಂಡಿರುತ್ತಾಳೆ. ಆದ್ದರಿಂದ ಮಗಳು ಹೆಚ್ಚು ಎಂಬುದು ಮತ್ತೊಬ್ಬರ ವಾದವಾಗಿರುತ್ತದೆ.

ಇಂದು ಪ್ರಪಂಚ ಬದಲಾಗಿದೆ. ಹೆಣ್ಣುಮಕ್ಕಳು ಇಂದು ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡಿದ್ದಾರೆ. ಆದ್ದರಿಂದ, ಹೆಣ್ಣು ಎಂದರೆ ಕಡಿಮೆ ಎಂದು ಭಾವಿಸಬಾರದು. ಇಂದು ಗಂಡಿಗಿಂತ ಹೆಣ್ಣಿಗೆ ಹೆಚ್ಚು ಬೆಲೆ ಎಂದು ಮತ್ತೊಬ್ಬರು ವಾದಿಸುತ್ತಾರೆ. ಒಟ್ಟಿನಲ್ಲಿ ಒಬ್ಬರ ಅಭಿಪ್ರಾಯವನ್ನು ಬದಲಿಸುವುದು ಅಷ್ಟು ಸುಲಭದ ಮಾತಲ್ಲ. ಹಾಗೆಂದು ನಮ್ಮ ವಾದವೇ ಸರಿ ಎಂದು ಅದನ್ನು ಮತ್ತೊಬ್ಬರ ಮೇಲೆ ಹೇರಬಾರದು. ಅದು ವೈಮನಸ್ಸಿಗೆ ಕಾರಣವಾಗಬಹುದು.

ಹೊಸದಾಗಿ ಮದುವೆಯಾದಾಗ, ಪತ್ನಿ ಗರ್ಭಿಣಿಯಾದಾಗ ಈ ಮಾತುಗಳು ಹೆಚ್ಚಾಗಿ ಕೇಳಿಬರುತ್ತದೆ. ಅತ್ತೆಯ ಮನೆಯವರು ಗಂಡು ಮಗುವೇ ಬೇಕು ಎಂದು ವಾದಿಸಿದಾಗ ಪತ್ನಿಗೆ ಗಾಬರಿಯಾಗುತ್ತದೆ. ಅಕಸ್ಮಾತ್ ಹೆಣ್ಣು ಮಗು ಹುಟ್ಟಿದರೆ ಏನು ಮಾಡುವುದು ಎಂಬ ಆತಂಕ ಆಕೆಗೆ ಉಂಟಾಗುತ್ತದೆ. ಅಂತಹ ಸಮಯದಲ್ಲಿ ಗಂಡನಾದವನು ಯಾವ ಮಗುವಾದರೂ ಆಗಲಿ, ಆರೋಗ್ಯ ಪೂರ್ಣವಾಗಿದ್ದರೆ ಸಾಕು ಎಂಬ ಮಾತು ಹೇಳಿದರೆ ಪತ್ನಿಗೆ ನೆಮ್ಮದಿಯಾಗುತ್ತದೆ. ಅತ್ತೆ–ಮಾವನವರ ಮಾನಸಿಕವಾಗಿ ಅದಕ್ಕೆ ಅಣಿಗೊಳಿಸುವುದು ಕಷ್ಟವಾಗಬಹುದು. ಇಲ್ಲಿ ಗಂಡನ ಪಾತ್ರ ಮಹತ್ವದ್ದಾಗಿರುತ್ತದೆ. ಅವನು ಪತ್ನಿಯನ್ನೂ ರಕ್ಷಿಸಬೇಕು ಹಾಗೂ ತನ್ನ ತಂದೆ–ತಾಯಿಯನ್ನೂ ಯಾವ ಮಗುವಾದರೂ ಪರವಾಗಿಲ್ಲ ಎಂಬ ಮನಸ್ಥಿತಿಗೆ ತರಬೇಕು.

ನಿಜ, ಇಂದು ಹೆಣ್ಣು ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲೂ ಮಹತ್ವದ ಸಾಧನೆ ಮಾಡಿದ್ದಾರೆ. ಹಾಗೆ ನೋಡಿದರೆ ಹಲವು ಕಡೆ ಅವರ ತಾಳ್ಮೆಯ ಮನೋಭಾವದಿಂದಾಗಿ ಗಂಡಸರು ಸಾಧಿಸಲು ಸಾಧ್ಯವಾಗದಿದ್ದನ್ನೂ ಸಾಧಿಸಿ ತೋರಿಸಿದ್ದಾರೆ. ಶಕ್ತಿಗಿಂತ ಯುಕ್ತಿಯ ಕೆಲಸಗಳಲ್ಲಿ ಅವರು ಸಾಮಾನ್ಯವಾಗಿ ಎಲ್ಲರಿಗಿಂತ ಮುಂದಿರುತ್ತಾರೆ. ಈ ಕಾರಣದಿಂದಾಗಿ ಇಂದು ಗಂಡು ಮಗು ಹೆಚ್ಚೋ, ಹೆಣ್ಣು ಮಗು ಹೆಚ್ಚೋ ಎಂಬ ವಾದ ಒಂದು ರೀತಿಯಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಗಂಡ ಮತ್ತು ಹೆಂಡತಿ ಈ ವಿಷಯದಲ್ಲಿ ಒಮ್ಮತದ ಅಭಿಪ್ರಾಯ ಹೊಂದುವುದು ಮುಖ್ಯವಾಗುತ್ತದೆ. ಹಡೆಯುವ ತಾಯಿಗೆ ಎಲ್ಲ ಮಕ್ಕಳು ಸಮಾನರೇ. ಆದರೆ ಗಂಡನ ಮನಸ್ಥಿತಿ ಮುಖ್ಯವಾಗುತ್ತದೆ.

ಇತ್ತೀಚೆಗೆ ಓದಿದ ಇಂತಹ ಒಂದು ಮನೋಭಾವದ ವಿಚಾರ ಉಲ್ಲೇಖನೀಯ. ಗರ್ಭಿಣಿ ಹೆಂಡತಿಯೊಬ್ಬಳು ತನ್ನ ಗಂಡನನ್ನು ಕುರಿತು ನೀನೇನು ಬಯಸುತ್ತೀಯೇ, ಗಂಡೋ... ಹೆಣ್ಣೋ... ಎಂದು ಕೇಳುತ್ತಾಳೆ. ಅದಕ್ಕೆ ಗಂಡ ಉತ್ತರಿಸುತ್ತಾನೆ; ಒಂದು ವೇಳೆ ಗಂಡು ಮಗು ಹುಟ್ಟಿದರೆ ಅವನಿಗೆ ಗಣಿತ ಕಲಿಸುತ್ತೇನೆ. ನನ್ನ ಕೆಲಸದ ಜೊತೆಗಾರನಾಗಿ ಮಾಡಿಕೊಳ್ಳುತ್ತೇನೆ. ಪೂಜೆ ಹೇಗೆ ಮಾಡಬೇಕು, ಹೇಗೆ ವ್ಯಾಪಾರ ಮಾಡಬೇಕು ಇತ್ಯಾದಿ ಹೇಳಿ ಕೊಡುತ್ತೇನೆ ಎನ್ನುತ್ತಾನೆ. ಆಗ ಪತ್ನಿಯು ಒಂದು ವೇಳೆ ಹೆಣ್ಣು ಮಗುವಾದರೆ ಏನು ಮಾಡುವೆ? ಎಂದಾಗ ಗಂಡನಲ್ಲಿ ಸಿದ್ಧ ಉತ್ತರವಿತ್ತು. ಆತ ಹೇಳು ತ್ತಾನೆ; ಹೆಣ್ಣಾದರೆ ನಾನು ಆ ಮಗುವಿಗೆ ಕಲಿಸುವುದು ಏನೂ ಇರು ವುದಿಲ್ಲ. ಆ ಮಗಳೇ ನನಗೆ ಎಲ್ಲವನ್ನೂ ಕಲಿಸುತ್ತಾಳೆ. ಹೇಗೆ ಬಟ್ಟೆ ಹಾಕಿಕೊಳ್ಳಬೇಕು, ಹೇಗೆ ಉಣ್ಣಬೇಕು, ನಡೆ ನುಡಿ ಹೇಗಿರಬೇಕು... ಎಂದೆಲ್ಲಾ ಅವಳು ತಿಳಿಸುತ್ತಾಳೆ. ಬಹುಬೇಗನೇ ಅವಳು ನನಗೆ ಎರಡನೇ ಅಮ್ಮನಾಗುತ್ತಾಳೆ. ನಾನು ವಿಶೇಷವಾಗಿ ಏನೂ ಮಾಡದಿದ್ದರೂ ಅವಳು ನನ್ನನ್ನು ಹೀರೋ ತರಹ ಪರಿಗಣಿಸುತ್ತಾಳೆ. ನಾನೇನೂ ಹೇಳದಿದ್ದರೂ ಅವಳು ಎಲ್ಲವನ್ನೂ ಗ್ರಹಿಸುತ್ತಾಳೆ ಮತ್ತು ನನ್ನಲ್ಲಿ ತನ್ನ ಭಾವಿ ಗಂಡ ಹೇಗಿರಬೇಕು ಎಂಬುದನ್ನು ನಿರ್ಧರಿಸುತ್ತಾಳೆ. ಅವಳಿಗೆ ಎಷ್ಟು ವಯಸ್ಸಾಯಿತು ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಅವಳು ಎಂದಿಗೂ ನಮ್ಮ ಮನೆಯ ರಾಜಕುಮಾರಿ. ಈ ಜಗತ್ತಿನಲ್ಲಿ ನನಗೋಸ್ಕರ ಅವಳು ಹೋರಾಡುತ್ತಾಳೆ. ಯಾರಾದರೂ ನನ್ನನ್ನು ನೋಯಿಸಿದರೆ ಅವರನ್ನು ಅವಳು ಎಂದೂ ಕ್ಷಮಿಸುವುದಿಲ್ಲ ಎಂದು ಹೇಳುತ್ತಾನೆ.



> ಇಂದಿಗೂ ಹೊರಗೆ ದುಡಿಯಲು ಹೋಗುವ ಹೆಣ್ಣು ಮಕ್ಕಳು ಮನೆಗೆ ಬಂದ ನಂತರ ಹಿಂದಿನಂತೆಯೇ ಮನೆಯ ಎಲ್ಲಾ ಕೆಲಸಗಳನ್ನೂ ಮಾಡಲೇಬೇಕಾಗುತ್ತದೆ. ಒಂದು ರೀತಿ ಮನೆಯಲ್ಲೂ ದುಡಿಯಬೇಕು, ಹೊರಗೂ ದುಡಿಯಬೇಕು ಎಂಬ ಅನಿವಾರ್ಯತೆ ಇಂದು ಜಾಸ್ತಿಯಾಗಿದೆ. ಆದರೆ ಆಕೆಯ ವಿಶೇಷ ಗುಣ ಆಕೆಗಿರುವ ಸಹನಾ ಶಕ್ತಿ. ಆಕೆ ಎಲ್ಲವನ್ನೂ ನಿಭಾಯಿಸಬಲ್ಲಳು. ಇದಕ್ಕೆ ಪ್ರತಿಫಲವಾಗಿ ಆಕೆ ಬಯಸುವುದು ಎಲ್ಲರಿಂದ ಪ್ರೀತಿ ಮಾತ್ರ. ಸಹನಾಶೀಲತೆ ಹೆಣ್ಣಿನ ಪ್ರಮುಖ ಗುಣ.

ಗಂಡನ ಉತ್ತರದಿಂದ ಹೆಂಡತಿ ತಬ್ಬಿಬ್ಬುಗೊಳ್ಳುತ್ತಾಳೆ. ಮತ್ತೆ ಕೇಳುತ್ತಾಳೆ. ಹಾಗಾದರೆ ನಿನ್ನ ಪ್ರಕಾರ ನಿನ್ನ ಮಗಳೂ ಎಲ್ಲಾ ಕೆಲಸ ಮಾಡುತ್ತಾಳೆ, ಮಗ ಮಾಡುವುದಿಲ್ಲ ಎಂದು ಅರ್ಥವೇ? ಇದಕ್ಕೆ ಗಂಡನ ಉತ್ತರ ಮನನೀಯವಾದುದು. ಆತ ಹೇಳುತ್ತಾನೆ; ಇಲ್ಲ ಇಲ್ಲ... ನನ್ನ ಮಗ ಕೂಡ ಇವೆಲ್ಲವನ್ನೂ ಮಾಡಬಲ್ಲ. ಆದರೆ, ಅದನ್ನು ಅವನು ಬದುಕಿನುದ್ದಕ್ಕೂ ಕಲಿಯುತ್ತಾ ಹೋಗುತ್ತಾನೆ. ಆದರೆ ಹೆಣ್ಣು ಮಗು ಜನ್ಮಜಾತವಾಗಿ ಈ ಗುಣಗಳಿಂದ ಜನಿಸಿರುತ್ತಾಳೆ. ಆದ್ದರಿಂದ ಹೆಣ್ಣು ಮಗುವಿನ ತಂದೆಯಾಗುವುದು ಎಂದರೆ ಅದು ಗಂಡಿಗೊಂದು ಹೆಮ್ಮೆ ಎನ್ನುತ್ತಾನೆ. ಆಗ ಯೋಚಿಸಿ ಹೆಂಡತಿ ಮತ್ತೊಂದು ಪ್ರಶ್ನೆ ಕೇಳುತ್ತಾಳೆ; ಎಲ್ಲಾ ಸರಿ! ಆದರೆ ಹೆಣ್ಣು ಮಗು ಯಾವತ್ತಿಗೂ ನಮ್ಮೊಂದಿಗೇ ಇರುವುದಿಲ್ಲವಲ್ಲಾ ಎಂದಾಗ, ಗಂಡ ಸಮಾಧಾನದಿಂದ ನುಡಿಯುತ್ತಾನೆ; ನೀನು ಹೇಳಿದ್ದು ನಿಜ, ಆದರೆ ಅವಳು ಎಲ್ಲೇ ಹೋದರೂ ಅವಳ ಹೃದಯದಲ್ಲಿ ನಾವಿರುತ್ತೇವೆ! ಹೆಣ್ಣು ಮಗುವೆಂದರೆ ದೇವತೆಯರು. ಅವರು ಹುಟ್ಟುತ್ತಲೇ ನಮ್ಮ ಬಗ್ಗೆ ಬೇಷರತ್ತಾದ ಪ್ರೀತಿ, ಕಾಳಜಿಯನ್ನು ಎಂದೆಂದಿಗೂ ಹೊಂದಿರುತ್ತಾರೆ ಎನ್ನುತ್ತಾನೆ. ಈ ಮಾತುಗಳು ಒಂದು ರೀತಿ ನೈಜತೆಯನ್ನು ಸೂಚಿಸುತ್ತದೆ. ಹಾಗೂ ಮುಂದೆ ತಂದೆ–ತಾಯಿಯಾಗುವವರಿಗೆ ಈ ಮಾತುಗಳು ಒಂದು ರೀತಿ ಮಾರ್ಗದರ್ಶನ ಮಾಡುತ್ತದೆ.

ಈ ಮಾತುಗಳಿಗೆ ಇಂಬು ನೀಡುವಂತಹುದನ್ನು ಗಮನಿಸುವ ಅವಕಾಶ ಇತ್ತೀಚೆಗೆ ಒದಗಿ ಬಂದಿತ್ತು. ಒಬ್ಬ ಆಪ್ತರಿಗೆ ಒಂದು ಶಸ್ತ್ರಚಿಕಿತ್ಸೆಯಾಗಬೇಕಾಯಿತು. ಅದಕ್ಕೆ ಪೂರ್ವದಲ್ಲಿ ಏಕೆ ಹಾಗೂ ಯಾವುದರ ಶಸ್ತ್ರಚಿಕಿತ್ಸೆ ಎಂಬ ಬಗ್ಗೆ ಸ್ವಲ್ಪ ಗೊಂದಲವಿತ್ತು. ಯಾರಲ್ಲಿ ಕೇಳಿದರೂ ಹೀಗೆ ಮಾಡಿ, ಹಾಗೆ ಮಾಡಿ ಎಂದು ತಮಗೆ ತೋಚಿದಂತೆ ಹೇಳುತ್ತಿದ್ದರು. ಒಂದು ರೀತಿಯ ಗೊಂದಲದ ಮನಸ್ಥಿತಿ ಉಂಟುಮಾಡಿತ್ತು. ಅವರಿಗೆ ಒಬ್ಬ ಮಗ ಹಾಗೂ ಒಬ್ಬ ಮಗಳಿದ್ದಾಳೆ. ವಿಷಯ ತಿಳಿಯುತ್ತಿದ್ದಂತೆಯೇ ತನ್ನೆಲ್ಲಾ ಕೆಲಸ ಬಿಟ್ಟು ಬಂದವಳು ಮಗಳು. ತಾಯಿಯು ಅನುಭವಿಸುತ್ತಿರುವ ನೋವನ್ನು ಅವಳು ಸಹಿಸದಾದಳು. ಕೆಲವರನ್ನು ಕೇಳಿದಳು. ಯಾರೋ ಫಿಸಿಯೋಥೆರಪಿ ಮಾಡಿಸಿ ಎಂದರು, ಅದೂ ಆಯಿತು. ಯಾರೋ ಮಾಸ್ಟರ್ ಚೆಕ್‌ಅಪ್ ಎಂದು ಹೇಳುತ್ತಾರೆ, ಅದನ್ನೂ ಮಾಡುತ್ತಾರೆ. ಅದರಲ್ಲಿ ತುರ್ತಾಗಿ ಒಂದು ಶಸ್ತ್ರಚಿಕಿತ್ಸೆ ಆಗಬೇಕು ಎಂದು ಗೊತ್ತಾಯಿತು. ಹಾಗಾಗಿ ಕೂಡಲೇ ಒಂದು ಪ್ರತಿಷ್ಠಿತ ಆಸ್ಪತ್ರೆಗೆ ದಾಖಲಿಸಲಾಯಿತು. ತುರ್ತಾಗಿ ಶಸ್ತ್ರಚಿಕಿತ್ಸೆಯೂ ಆಯಿತು. ಒಂದೆರಡು ದಿನಕ್ಕೆಂದು ಬಂದಿದ್ದ ಮಗಳು ವಾರಗಟ್ಟಲೇ ಉಳಿಯುವಂತಾಯಿತು. ಆದರೆ ಆಕೆ ಒಂದು ಸ್ವಲ್ಪವೂ ಬೇಸರಿಸದೆ ತಾಯಿಯ ಆರೈಕೆಗೆ ನಿಂತಳು. ಆಸ್ಪತ್ರೆಯಿಂದ ಬಿಡುಗಡೆಯಾಗಿ ಬರುವವರೆಗೂ ಆಕೆ ಆಸ್ಪತ್ರೆಯಲ್ಲೇ ಇದ್ದಳು. ಶಸ್ತ್ರಚಿಕಿತ್ಸೆ ನಂತರ ತೀವ್ರ ನಿಗಾ ಘಟಕದಲ್ಲಿ ತಾಯಿಯನ್ನು ಇರಿಸಿದಾಗ, ಆಕೆ ಹೊರಬರುವವರೆಗೂ ಚಡಪಡಿಸುತ್ತಾ ಅದರ ಬಾಗಿಲಲ್ಲೇ ಕುಳಿತಿದ್ದಳು. ಆಸ್ಪತ್ರೆ ಸಿಬ್ಬಂದಿ ತೀವ್ರ ನಿಗಾ ಘಟಕದಲ್ಲಿ ನಾವೇ ಎಲ್ಲಾ ನೋಡಿಕೊಳ್ಳುತ್ತೇವೆ, ಅಗತ್ಯವಿದ್ದರೆ ತಿಳಿಸುತ್ತೇವೆ. ನಿಮ್ಮ ಮೊಬೈಲ್ ನಂಬರ್ ಕೊಟ್ಟು ಹೋಗಿ ಎಂದರೂ ಅಲ್ಲೇ ಕುಳಿತು ನಿರೀಕ್ಷಿಸುತ್ತಿದ್ದಳು ಆ ಮಗಳು.

ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಬಂದ ನಂತರವೂ ಆ ಮಗಳ ಚಡಪಡಿಕೆ ಕಡಿಮೆಯಾಗಲಿಲ್ಲ. ಏನು ಊಟ ಮಾಡಬೇಕು, ಹೇಗೆ ಔಷಧಿ ತೆಗೆದುಕೊಳ್ಳಬೇಕು, ಏನು ಮುಂಜಾಗರೂಕತೆ ವಹಿಸಬೇಕು ಇತ್ಯಾದಿಗಳನ್ನೆಲ್ಲಾ ಆಕೆ ತಾನು ತಿಳಿದುಕೊಂಡು ತಾಯಿಗೆ ಹೇಳಿಕೊಡುತ್ತಿದ್ದಳು. ದೂರದಿಂದ ನೋಡಿದಾಗ ಇದರಲ್ಲಿ ತಾಯಿ ಯಾರು ಮಗಳು ಯಾರು ಎಂಬ ಅನುಮಾನ ಕಾಡುವಂತೆ ಆಕೆ ತಾಯಿಯನ್ನು ನೋಡಿಕೊಳ್ಳುತ್ತಿದ್ದಳು. ಆಗ ಅನಿಸಿದ್ದು ಮಗಳು ತಾಯಿಗೇ ತಾಯಿಯಾಗಬಲ್ಲಳು ಎಂದು. ಆಕೆ ತನ್ನ ತಾಯಿಯ ಜೊತೆಗೆ ಆ ಆಸ್ಪತ್ರೆಗೆ ಬಂದ ಇತರೆ ರೋಗಿಗಳ ಬಗ್ಗೆಯೂ ತೋರಿಸುತ್ತಿದ್ದ ಕಾಳಜಿ ಎಲ್ಲರ ಅತೀವ ಮೆಚ್ಚುಗೆಗೆ ಪಾತ್ರವಾಯಿತು.

ಈ ಸ್ವಭಾವ ಸಾಮಾನ್ಯವಾಗಿ ಹೆಣ್ಣು ಮಕ್ಕಳಲ್ಲಿ ಕಂಡುಬರುತ್ತದೆ. ಗಂಡು ಮಕ್ಕಳಲ್ಲಿ ಇಂತಹ ಮನೋಭಾವ ಇರುವುದಿಲ್ಲ ಎಂದಲ್ಲ. ಆದರೆ, ಗಂಡು ಮಕ್ಕಳ ಆದ್ಯತೆ ಬೇರೆಯೇ ಇರುತ್ತದೆ. ಅವರ ಮಗ ಕೇಳುತ್ತಿದ್ದುದು, ಆಸ್ಪತ್ರೆಯ ಬಿಲ್ಲು ಎಷ್ಟಾಗುತ್ತದೆ, ನಂತರ ಅವರು ತಿಳಿಸುವ ಔಷಧಿಗೆ ಎಷ್ಟು ಖರ್ಚಾಗುತ್ತದೆ, ಮುಂದೆ ಬರಬಹುದಾದ ವೆಚ್ಚಗಳು ಯಾವುವು? ಅದನ್ನು ಹೇಗೆ ಹೊಂದಿಸುವುದು ಇತ್ಯಾದಿಯಾಗಿರುತ್ತದೆ. ಇದೂ ಬೇಕು, ಇಲ್ಲವೆಂದಲ್ಲ. ಆದರೆ ಮಗಳು ತಾಯಿಯಂತೆ ಆರೈಕೆ ಮಾಡುವುದು. ವಿಶೇಷ ಅಲ್ಲವೇ?

ಇಂದು ನಮ್ಮ ಆದ್ಯತೆಗಳು ಬದಲಾಗುತ್ತಿವೆ. ಗಂಡಸು ಇಂತಹ ಕೆಲಸ ಮಾಡಬೇಕು; ಅವನು ಹೊರಗೆ ದುಡಿಯಬೇಕು, ಹೆಂಗಸು ಮನೆ ಕೆಲಸ ಮಾಡಬೇಕು; ಆಕೆ ಎಲ್ಲರ ಯೋಗಕ್ಷೇಮ ನೋಡಿಕೊಳ್ಳಬೇಕು ಎಂಬ ಹಿಂದಿನ ಮನೋಭಾವ ಇಂದು ಕಡಿಮೆಯಾಗಿದೆ. ಇಷ್ಟಾದರೂ ಇಂದಿಗೂ ಹಿಂದಿನಂತೆ ಹೆಣ್ಣಿನ ಮೇಲೆ ಒತ್ತಡ ಇದ್ದೇ ಇದೆ. ಮನೆಯಲ್ಲಿ ಎಲ್ಲರಿಗೂ ಬೇಕಾದ್ದನ್ನು ಗ್ರಹಿಸಿ, ಅದರಂತೆಯೇ ಅವರಿಗೆ ಕಲ್ಪಿಸುವ ಕೆಲಸ ಒತ್ತಡದ್ದೇ ಆಗಿರುತ್ತದೆ. ಇಂದಿಗೂ ಹೊರಗೆ ದುಡಿಯಲು ಹೋಗುವ ಹೆಣ್ಣು ಮಕ್ಕಳು ಮನೆಗೆ ಬಂದ ನಂತರ ಹಿಂದಿನಂತೆಯೇ ಮನೆಯ ಎಲ್ಲಾ ಕೆಲಸಗಳನ್ನೂ ಮಾಡಲೇ ಬೇಕಾಗುತ್ತದೆ. ಒಂದು ರೀತಿ ಮನೆಯಲ್ಲೂ ದುಡಿಯಬೇಕು, ಹೊರಗೂ ದುಡಿಯಬೇಕು ಎಂಬ ಅನಿವಾರ್ಯತೆ ಇಂದು ಜಾಸ್ತಿಯಾಗಿದೆ. ಆದರೆ ಆಕೆಯ ವಿಶೇಷ ಗುಣ ಆಕೆಗಿರುವ ಸಹನಾ ಶಕ್ತಿ. ಆಕೆ ಎಲ್ಲವನ್ನೂ ನಿಭಾಯಿಸಬಲ್ಲಳು. ಇದಕ್ಕೆ ಪ್ರತಿಫಲವಾಗಿ ಆಕೆ ಬಯಸುವುದು ಎಲ್ಲರಿಂದ ಪ್ರೀತಿ ಮಾತ್ರ. ಸಹನಾಶೀಲತೆ ಹೆಣ್ಣಿನ ಪ್ರಮುಖ ಗುಣ. ಅದು ಸಾಮಾನ್ಯವಾಗಿ ಗಂಡಸರಲ್ಲಿ ಕಡಿಮೆ. ಹೀಗಾಗಿ ಹೆಣ್ಣು ಮಗು ತನ್ನ ತಾಯಿಗೆ ತಾಯಾಗಬಲ್ಲಳು, ಆದರೆ ಮಗ ತಂದೆಗೆ ತಂದೆಯಾಗುವಂತಹ ಗುಣ ಸ್ವಲ್ಪ ಕಡಿಮೆಯೇ. ಹೀಗಾಗಿಯೇ ಇಂದು ವರ್ಷಕ್ಕೊಮ್ಮೆ ಮಹಿಳಾ ದಿನಾಚರಣೆ ಮಾಡಿ, ಹೆಣ್ಣಿಗೆ ಗೌರವ ಸಲ್ಲಿಸಲಾಗುತ್ತದೆ. ಆಕೆಯ ಕೋರಿಕೆ ತನ್ನ ಬಗ್ಗೆ ತಾತ್ಸಾರ ಬೇಡ ಎಂಬುದೇ ಆಗಿದೆ.

ಜನರ ಆಗ್ರಹಕ್ಕೆ ತಲೆಬಾಗಿದ ನಮ್ಮ ಮೆಟ್ರೋ: ಆಯ್ದ ಕಡೆ ಟಿಕೆಟ್ ದರ ಇಳಿಸಲು ನಿರ್ಧಾರ

ಬೆಂಗಳೂರು,ಫೆ.13–ನಮ್ಮ ಮೆಟ್ರೋ ರೈಲು ಟಿಕೆಟ್ ದರ ಏರಿಕೆಯಿಂದ ಜನರಿಗೆ ಆಗಿರುವ ತೊಂದರೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ನಮ್ಮ ಮೆಟ್ರೋ ಸಾರಿಗೆಯ ನಿಗದಿತ ಅಂತರದಲ್ಲಿ ಎಲ್ಲೆಲ್ಲಿ ಸಾಧ್ಯವೋ ಆಯಾಯ ಅಂತರದ ಪ್ರಯಾಣದ ದರಗಳನ್ನು ಇಳಿಕೆ ಮಾಡುತ್ತೇವೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಫೆ. 13ರ ಮಧ್ಯಾಹ್ನ 2.30ರ ಸುಮಾರಿಗೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಸಲಿಗೆ ನಮ್ಮ ಮೆಟ್ರೋ ನಿರ್ವಹಣೆಯ ವೆಚ್ಚ, ಸಾಲ ಹಾಗೂ ಅದರ ಬಡ್ಡಿ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ನಾವು ಟಿಕೆಟ್ ಬೆಲೆ ಏರಿಕೆ ಮಾಡಿದ್ದೆವು. ಆದರೆ, ಅದಕ್ಕೆ ಸಾಮಾಜಿಕ ವಲಯದಿಂದ ತೀವ್ರ ಆಕ್ಷೇಪಗಳು ಕೇಳಿಬಂದವು. ಜನರ ಸಮಸ್ಯೆಗೆ ಸ್ಪಂದಿಸುತ್ತಿದ್ದೇವೆ. ಸ್ಟೇಜ್ ಬೈ ಸ್ಟೇಜ್ ದರ ಹೆಚ್ಚಳವನ್ನು ಪರಿಶೀಲಿಸುತ್ತೇವೆ. ಯಾವ ಸ್ಟೇಜ್‌ಗಳ ನಡುವೆ ದರ ತುಂಬಾ ಹೆಚ್ಚಾಗಿದೆಯೋ ಆ ಸ್ಟೇಜ್‌ಗಳ ದರಗಳನ್ನು ಮರ್ಜ್ ಮಾಡುತ್ತೇವೆ ಅಷ್ಟೆ ಎಂದು ಹೇಳಿದರು.

ನಂತರ ಮಾತು ಮುಂದುವರೆಸಿದ ಅವರು, ನಮ್ಮ ಮೆಟ್ರೋ ನಿರ್ವಹಣಾ ವೆಚ್ಚ, ಸುಮಾರು 10 ಸಾವಿರ ಕೋಟಿ ರೂ.ಗಳಿಗೂ ಅಧಿಕ. ಸಾಲದ ಹೊರೆ ಹಾಗೂ ಅದಕ್ಕೆ ಬೀಳುತ್ತಿರುವ ಬಡ್ಡಿಯನ್ನು ಮುಂದಿನ ಆರೇಳು ವರ್ಷಗಳಲ್ಲಿ ತೀರಿಸುವ ಬಾಧ್ಯತೆ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ನಾವು ದರ ಏರಿಕೆ ಮಾಡಿದ್ದೆವು. ಆದರೆ, ಈಗ ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ನಾವು ದರಗಳನ್ನು ಕಡಿಮೆ ಮಾಡುವ ಬಗ್ಗೆ ಚರ್ಚೆ ಮಾಡುತ್ತೇವೆ. ಶೀಘ್ರದಲ್ಲೇ ಈ ಬಗ್ಗೆ ಪ್ರಕಟಣೆ ಹೊರಡಿಸಲಾಗುತ್ತದೆ. ಪ್ರಯಾಣದ ದರ ಕನಿಷ್ಠ 10 ರೂ., ಗರಿಷ್ಟ 90 ರೂ. ಹಾಗೇ ಮುಂದುವರಿಯಲಿದೆ. ಈ ಎರಡೂ ದರಗಳ ನಡುವಿನ ದರಗಳನ್ನು ಸ್ಟೇಜ್ ಬೈ ಸ್ಟೇಜ್ ಅಧ್ಯಯನ ಮಾಡಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಕಡಿಮೆ ಮಾಡುತ್ತೇವೆ ಎಂದು ಮಹೇಶ್ವರ್ ರಾವ್ ಸ್ಪಷ್ಟಪಡಿಸಿದರು.





ಇತ್ತೀಚೆಗೆ ನಮ್ಮ ಮೆಟ್ರೋ ರೈಲಿನ ಟಿಕೆಟ್ ದರ ಹೆಚ್ಚಳ ಮಾಡಿದ್ದು ದೊಡ್ಡ ಮಟ್ಟದಲ್ಲಿ ಚರ್ಚೆಯಾಗಿತ್ತು. ಟಿಕೆಟ್ ಬೆಲೆಗಳು ದುಪ್ಪಟ್ಟು ಏರಿಕೆಯಾಗಿದ್ದನ್ನು ಸಾರ್ವಜನಿಕರು ತೀವ್ರವಾಗಿ ಖಂಡಿಸಿದ್ದರು. ಅದರ ಪರಿಣಾಮವಾಗಿ, ಪೀಕ್ ಹವರ್ ಬಿಟ್ಟು ಉಳಿದ ಸಂದರ್ಭಗಳಲ್ಲಿ ನಮ್ಮ ಮೆಟ್ರೋದಲ್ಲಿ ಪ್ರಯಾಣಿಸುವವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿತ್ತು. ನಿರ್ವಹಣಾ ವೆಚ್ಚ, ಸಿಬ್ಬಂದಿ ವೇತನ, ಇಂಧನ, ಇನ್ನಿತರೆ ಸಾಮಗ್ರಿ ವೆಚ್ಚ ಹೆಚ್ಚಳವಾಗಿರುವ ಕಾರಣ ನೀಡಿದ್ದ ಬಿಎಂಆರ್‌ಸಿಎಲ್ ಶೇ.47 ರಷ್ಟು ಪ್ರಯಾಣ ದರ ಏರಿಸಿತ್ತು. ಕೆಲವೆಡೆ ಶೇ.80ರಿಂದ 100ರಷ್ಟು ದರ ಹೆಚ್ಚಾಗಿದೆ. ಕಡಿಮೆ ಅಂತರದ ಪ್ರಯಾಣ ಮಾಡುವವರಿಗೆ ಶೇ.100 ರಷ್ಟು ಏರಿಕೆಯಾಗಿತ್ತು. 30 ಕಿ.ಮೀ. ಗಿಂತಲೂ ದೂರ ಪ್ರಯಾಣಿಸುವವರಿಗೆ ಶೇ.70ರಷ್ಟು ಏರಿಕೆಯಾಗಿತ್ತು. ಕಡಿಮೆ ದೂರದವರೆಗೆ ಪ್ರಯಾಣಿಸುವವರು 30 ರೂ. ಕೊಡುವ ಜಾಗದಲ್ಲಿ 57.50 ಅಥವಾ 58 ರೂ.ಗಳನ್ನು (ಸುಮಾರು 60 ರೂ.) ಕೊಡುವಂತಾಗಿತ್ತು.

ಮಹಾ ಕುಂಭಮೇಳದಲ್ಲಿ ನಾಲ್ಕು ಗಿನ್ನಿಸ್ ದಾಖಲೆಗೆ ತಯಾರಿ

ಪ್ರಯಾಗ್‌ರಾಜ್,ಫೆ.13–ಕಳೆದೊಂದು ತಿಂಗಳಿಂದ ನಡೆಯುತ್ತಿರುವ ವಿಶ್ವದ ಅತಿದೊಡ್ಡ ಧಾರ್ಮಿಕ ಉತ್ಸವ ಮಹಾ ಕುಂಭಮೇಳದಲ್ಲಿ ನಾಲ್ಕು ಹೊಸ ದಾಖಲೆಗಳನ್ನು ಮಾಡಲು ಉತ್ತರಪ್ರದೇಶ ಸರ್ಕಾರ ತಯಾರಿ ಮಾಡಿಕೊಂಡಿದ್ದು, ಇದಕ್ಕಾಗಿ ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ತಂಡವೂ ಪ್ರಯಾಗ್‌ರಾಜ್ ತಲುಪಿದೆ.



ಇಲ್ಲಿಯವರೆಗೆ ತ್ರಿವೇಣಿ ಸಂಗಮದಲ್ಲಿ 48 ಕೋಟಿಗೂ ಹೆಚ್ಚು ಜನರು ಪುಣ್ಯ ಸ್ನಾನ ಮಾಡಿದ್ದಾರೆ. ಇದು ಈಗಾಗಲೇ ವಿಶ್ವದ ಅತಿದೊಡ್ಡ ದಾಖಲೆಯಾಗಿದೆ. ಇದರ ನಡುವೆ ಫೆ.14ರಿಂದ 17ರ ನಡುವೆ 4 ಹೊಸ ದಾಖಲೆಗಳನ್ನು ನಿರ್ಮಿಸಲು ಸ್ಥಳೀಯ ಆಡಳಿತ ಸಜ್ಜಾಗಿದೆ. ಮೊದಲ ದಿನ ಫೆ.14ರಂದು 15,000 ನೈರ್ಮಲ್ಯ ಕಾರ್ಮಿಕರು ಸಂಗಮ ಪ್ರದೇಶದಲ್ಲಿ ಗಂಗಾ ನದಿಯ ದಡದ 10 ಕಿ.ಮೀ. ಉದ್ದವನ್ನು ಏಕಕಾಲದಲ್ಲಿ ಸ್ವಚ್ಛಗೊಳಿಸಲಿದ್ದಾರೆ. 2019ರ ಕುಂಭಮೇಳದಲ್ಲಿ 10 ಸಾವಿರ ನೈರ್ಮಲ್ಯ ಕಾರ್ಮಿಕರು ಒಟ್ಟಾಗಿ ಗುಡಿಸುವ ಮೂಲಕ ದಾಖಲೆ ನಿರ್ಮಿಸಿದ್ದರು. ಫೆ.15ರಂದು 300 ಉದ್ಯೋಗಿಗಳು ನದಿಗೆ ಇಳಿದು ಸ್ವಚ್ಛತಾ ಅಭಿಯಾನವನ್ನು ವೇಗಗೊಳಿಸಲಿದ್ದಾರೆ.

ಫೆ.16ರಂದು ತ್ರಿವೇಣಿ ಮಾರ್ಗದಲ್ಲಿ 1000 ಇ–ರಿಕ್ಷಾಗಳನ್ನು ಓಡಿಸಿದ ದಾಖಲೆ ನಿರ್ಮಾಣವಾಗಲಿದೆ. ಫೆ.17 ರಂದು 10 ಸಾವಿರ ಜನರ ಕೈ ಮುದ್ರೆಗಳನ್ನು ತೆಗೆದುಕೊಳ್ಳುವ ದಾಖಲೆಯನ್ನು ಸಹ ಮಾಡಲಾಗುವುದು. ನಾಲ್ಕು ದಾಖಲೆಗಳನ್ನು ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಮೇಳದ ಅಧಿಕಾರಿ ವಿಜಯ್ ಕಿರಣ್ ಆನಂದ್ ತಿಳಿಸಿದ್ದಾರೆ.

2019ರಲ್ಲಿ ಮೂರು ದಾಖಲೆ: 2019ರ ಪ್ರಯಾಗರಾಜ್‌ನಲ್ಲಿ ನಡೆದ ಕುಂಭಮೇಳದಲ್ಲಿ ಮೂರು ದಾಖಲೆಗಳನ್ನು ಮಾಡಲಾಗಿದ್ದು, ಇವು ಗಿನ್ನೆಸ್ ವಿಶ್ವ ದಾಖಲೆಯಲ್ಲಿ ಸ್ಥಾನ ಪಡೆದಿವೆ. ಇದರಲ್ಲಿ 500ಕ್ಕೂ ಹೆಚ್ಚು ಶಟಲ್ ಬಸ್‌ಗಳನ್ನು ಓಡಿಸುವ ಮೂಲಕ ಅತೀ ದೊಡ್ಡ ಸಾರಿಗೆ ವ್ಯವಸ್ಥೆಯನ್ನು ನಿರ್ವಹಿಸುವ ದಾಖಲೆಯನ್ನು ಸೃಷ್ಟಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಗ್ರಾಮೀಣ ಯುವಜನರ ನಗರ ವಲಸೆ ಹೆಚ್ಚುತ್ತಲೇ ಇದೆ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆತಂಕ



ರಾಜ್ಯಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತನಾಡಿದರು.

ನವದೆಹಲಿ: ಅನಾರೋಗ್ಯದ ನಡುವೆಯೂ ರಾಜ್ಯಸಭೆಯಲ್ಲಿ ಗುರುವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು, ಈ ಬಾರಿ ಇಡೀ ರಾಷ್ಟ್ರದ ಎಲ್ಲಾ ವರ್ಗಗಳ ಜನರಿಗೆ ಶಕ್ತಿ ತುಂಬುವ ಆಯವ್ಯಯ ಮಂಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆ ಸಂದರ್ಭದಲ್ಲಿ ಸದನದಲ್ಲಿಯೇ ಹಾಜರಿದ್ದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಮಾಜಿ ಪ್ರಧಾನಿಗಳು, ಎಲ್ಲರಿಗೂ ಅನುಕೂಲ ಆಗುವಂತಹ, ದೇಶದ ಅಭಿವೃದ್ಧಿಗೆ ದೂರದೃಷ್ಟಿಯ ಕೊಡುಗೆ ನೀಡುವಂತಹ ಬಜೆಟ್ ಮಂಡಿಸಿದ್ದೀರಿ ಎಂದರು.

ಜನರ ಹಿತಾಸಕ್ತಿಯನ್ನು ಕಾಪಾಡಲು ವಿತ್ತ ಸಚಿವರು ತಮ್ಮ ಕೈಲಾದ ಎಲ್ಲವನ್ನೂ ಮಾಡಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ ಎಂದು ಹೇಳಿದರು.

ನಗರಗಳಿಗೆ ವಲಸೆ ಬಗ್ಗೆ ಕಳವಳ: ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದಿಂದ ಯುವಜನರು ನಗರಗಳಿಗೆ ವಲಸೆ ಬರುವುದು ಹೆಚ್ಚುತ್ತಲೇ ಇದೆ ಎಂದು ಕಳವಳ ವ್ಯಕ್ತಪಡಿಸಿದರು.

ಬೆಂಗಳೂರಿನ ಜನಸಂಖ್ಯೆ ಈಗ 1.4 ಕೋಟಿಗೆ ಮುಟ್ಟಿದೆ. ಎಲ್ಲಾ ಯುವಕರು ತಮ್ಮ ವಿದ್ಯಾಭ್ಯಾಸ ಮುಗಿದ ತಕ್ಷಣ ಹಳ್ಳಿಗಳನ್ನು ತೊರೆದು ನಗರಗಳಿಗೆ ಬಂದು ಸೇರುತ್ತಿದ್ದಾರೆ. ಇದು ಜೀವನೋಪಾಯದ ಸಮತೋಲನವನ್ನು ತಪ್ಪಿಸುತ್ತಿದೆ. ಯುವಕರಿಗೆ ತಮ್ಮ ಪ್ರದೇಶಗಳಲ್ಲಿಯೇ ಹೆಚ್ಚೆಚ್ಚು ಉದ್ಯೋಗಾವಕಾಶ ಕಲ್ಪಿಸುವ ಅಗತ್ಯವಿದೆ ಎಂದು ಮಾಜಿ ಪ್ರಧಾನಿಗಳು ಸಲಹೆ ನೀಡಿದರು.

ಸಮತೋಲಿತ ಜೀವನೋಪಾಯ ಸೃಷ್ಟಿ ಮಾಡುವ ನಿಟ್ಟಿನಲ್ಲಿ ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು (MSME) ಬೆಂಬಲಿಸಲು ಹೆಚ್ಚು ಸೂಕ್ತವಾದ ಉಪಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವನ್ನು ಮಾಜಿ ಪ್ರಧಾನಿಗಳು ಒತ್ತಿ ಹೇಳಿದರು.

ಹಣಕಾಸು ಬೆಂಬಲ ಪಡೆಯುವಲ್ಲಿ ಅತೀಸಣ್ಣ, ಸಣ್ಣ ಕೈಗಾರಿಕೆಗಳು ಮಧ್ಯಮ ಗಾತ್ರದ ಕೈಗಾರಿಕೆಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ಉದ್ದೇಶಕ್ಕಾಗಿ ಪ್ರತ್ಯೇಕ ನೀತಿ, ಕಾರ್ಯಕ್ರಮಗಳನ್ನು ರೂಪಿಸುವ ಅಗತ್ಯ ತುಂಬಾ ಇದೆ ಎಂದು ಹೇಳಿದರು.

ಅತೀ ಸಣ್ಣ, ಸಣ್ಣ ಕೈಗಾರಿಕೆಗಳಿಗೆ ಸಾಲದ ಅನುಮೋದನೆ ನೀಡುವಾಗ ಸಿಬಿಲ್ (CIBIL) ಸ್ಕೋರ್ ಮಾನದಂಡವನ್ನು ಪರಿಗಣಿಸಬಾರದು. ಬಡ್ಡಿದರಗಳನ್ನು ಶೇ.7ರಿಂದ 8ಕ್ಕೆ ಇಳಿಸಬೇಕು ಮತ್ತು ಆರಂಭಿಕ ಸಾಲ ಮರುಪಾವತಿಗಾಗಿ ಸ್ವತ್ತುಗಳ ಮರುಸ್ವಾಧೀನ ದಂಡ ಪ್ರಯೋಗವನ್ನು ಕೈಬಿಡಬೇಕು ಎಂದು ದೇವೇಗೌಡರು ಸರಕಾರವನ್ನು ಒತ್ತಾಯಿಸಿದರು.

ಹಲಸಿನ ಹಣ್ಣು, ನೇರಳೆ, ಹುಣಸೆ ಹಣ್ಣು ಮಂಡಳಿ ರಚಿಸಿ: ಕೃಷಿ ಉತ್ಪನ್ನಗಳಿಗೆ ನಾವು ಹೆಚ್ಚು ಬೆಂಬಲ ನೀಡುವುದನ್ನು ಮುಂದುವರಿಸಬೇಕು. ಬಿಹಾರದಲ್ಲಿ ಮಖಾನಾ ಮಂಡಳಿ ರಚನೆ ಮಾಡಿರುವುದನ್ನು, ನಾನು ಸ್ವಾಗತ ಮಾಡುತ್ತೇನೆ ಎಂದ ದೇವೇಗೌಡರು, ಅದೇ ರೀತಿ ಹಲಸಿನ ಹಣ್ಣು, ನೇರಳೆ, ಹುಣಸೆ ಹಣ್ಣು ಮಂಡಳಿ ರಚಿಸಬೇಕು ಎಂದು ಒತ್ತಾಯ ಮಾಡಿದರು.

ತಮ್ಮ ಭಾಷಣದ ಕೊನೆಯಲ್ಲಿ ದೀರ್ಘಾವಧಿಯ ಆರ್ಥಿಕ ಸ್ಥಿರತೆಯತ್ತ ಗಮನಹರಿಸುವಂತೆ ಸರಕಾರಕ್ಕೆ ಸಲಹೆ ನೀಡಿದರಲ್ಲದೆ, ನಾವು ಅಲ್ಪಾವಧಿಯ ಜನಪರ ಕ್ರಮಗಳನ್ನು ಮೀರಿ ಮುನ್ನಡೆಯಬೇಕು ಮತ್ತು ಭವಿಷ್ಯದ ಪೀಳಿಗೆಗೆ ಆಸ್ತಿಗಳನ್ನು ನಿರ್ಮಿಸಬೇಕು ಎಂದರು. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ, ಸಣ್ಣ ಅತೀ ಸಣ್ಣ ಕೈಗಾರಿಕೆಗಳಿಗೆ ಬೆಂಬಲ ಹಾಗೂ ಅತ್ಯಂತ ಪ್ರಮುಖವಾದ ನೀರಿನ ಭದ್ರತೆಗೆ ಸರಕಾರದ ಕಡೆಯಿಂದ ತಕ್ಷಣದ ಕ್ರಮಗಳು ಆಗಬೇಕಿದೆ ಎಂದು ಅವರು ಪ್ರತಿಪಾದಿಸಿದರು.

ಅಮೆರಿಕಾದಲ್ಲಿ ಪ್ರಧಾನಿ ಮೋದಿ: ಅನಿವಾಸಿ ಭಾರತೀಯರಿಂದ ಅದ್ದೂರಿ ಸ್ವಾಗತ



ಅಮೆರಿಕಾ ಗುಪ್ತಚರ ವಿಭಾಗದ ಮುಖ್ಯಸ್ಥೆ ತುಳಸಿ ಗಬ್ಬಾರ್ಡ್ ಭೇಟಿ



ವಾಷಿಂಗ್ಟನ್, ಫೆ.13– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ 2 ದಿನಗಳ ಯುಎಸ್ ಪ್ರವಾಸವನ್ನು ಬುಧವಾರ ಪ್ರಾರಂಭಿಸಿದ್ದು, ಜಾಯಿಂಟ್ ಆಂಡ್ರ್ಯೂಸ್ ಬೇಸ್‌ಗೆ ಬಂದಿಳಿದ ಅವರಿಗೆ ಅನಿವಾಸಿ ಭಾರತೀಯರು ಆತ್ಮೀಯ ಸ್ವಾಗತವನ್ನು ಕೋರಿದರು.

ಅಮೆರಿಕಕ್ಕೆ ಬಂದಿಳಿದ ಬಳಿಕ ಮೋದಿ ಬ್ಲೇರ್ ಹೌಸ್‌ಗೆ ಭೇಟಿ ನೀಡಿದ್ದರು. ಇದೇ ವೇಳೆ ಭಾರತೀಯ ಸಮುದಾಯದವರು ಮೋದಿ ಅವರನ್ನು ಸ್ವಾಗತಿಸಿದ್ದರು. 'ಭಾರತ್ ಮಾತಾ ಕಿ ಜೈ', 'ಮೋದಿ.. ಮೋದಿ..' ಎಂದು ಘೋಷಣೆ ಕೂಗಿದರು.

ಶೀತ ಗಾಳಿ ಮತ್ತು ಮಳೆಯ ನಡುವೆಯೇ ಸಾಕಷ್ಟು ಮಂದಿ ಅನಿವಾಸಿ ಭಾರತೀಯರ ಪ್ರಧಾನಿ ಮೋದಿ ಅವರನ್ನು ಕಾಣಲು ಆಗಮಿಸಿದ್ದರು.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮೋದಿಯವರು, ಚಳಿಗಾಲದ ಚಳಿಯಲ್ಲಿ ಬೆಚ್ಚಗಿನ ಸ್ವಾಗತ. ಶೀತ ಹವಾಮಾನದ ಹೊರತಾಗಿಯೂ, ವಾಷಿಂಗ್ಟನ್ ಡಿಸಿಯಲ್ಲಿರುವ ಭಾರತೀಯ ಸಮುದಾಯದವರು ನನ್ನನ್ನು ವಿಶೇಷ ಸ್ವಾಗತದೊಂದಿಗೆ ಸ್ವಾಗತಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು ಎಂದು ಹೇಳಿದ್ದಾರೆ.

ಈ ನಡುವೆ ಭಾರತದ ಪ್ರಧಾನಿಯವರ ಅಮೆರಿಕ ಭೇಟಿಯನ್ನು ಗುರುತಿಸಲು ಬ್ಲೇರ್ ಹೌಸ್‌ನಲ್ಲಿ ಭಾರತದ ತ್ರಿವರ್ಣ ಧ್ವಜಗಳನ್ನು ಹಾಕಲಾಗಿದ್ದು, ಮೋದಿಯವರು ಬ್ಲೇರ್ ಹೌಸ್‌ನಲ್ಲಿ ತಂಗಿದ್ದಾರೆ, ಬ್ಲೇರ್ ಹೌಸ್ ಅಮೆರಿಕಾ ಅಧ್ಯಕ್ಷರ ಅಧಿಕೃತ ಅತಿಥಿಗೃಹವಾಗಿದೆ.

ಅಮೆರಿಕಾಗೆ ಭೇಟಿ ನೀಡಿರುವ ಮೋದಿಯವರು, ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ (ಡಿಎನ್‌ಐ) ತುಳಸಿ ಗಬ್ಬಾರ್ಡ್ ಅವರನ್ನು ಭೇಟಿ ಮಾಡಿದ್ದು, ಈ ವೇಳೆ ಭಾರತ–ಅಮೆರಿಕ ನಡುವಿನ ಬಾಂಧವ್ಯದ ಬಗ್ಗೆ ಚರ್ಚೆ ನಡೆಸಿದ್ದಾರೆ.

ಪ್ರಧಾನಿ ಮೋದಿ ಮತ್ತು ಗಬ್ಬಾರ್ಡ್ ಪರಸ್ಪರ ಹಸ್ತಲಾಘವ ನೀಡುವ ಮೂಲಕ ಆತ್ಮೀಯವಾಗಿ ಶುಭಾಶಯ ಕೋರಿದ್ದಾರೆ. ಮಂಗಳವಾರ ಶ್ವೇತಭವನದಲ್ಲಿ ನಡೆದ ಪ್ರಮಾಣ ವಚನ ಸಮಾರಂಭದಲ್ಲಿ ಗಬ್ಬಾರ್ಡ್ ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಇದಾದ ಕೆಲವೇ ಗಂಟೆಗಳ ನಂತರ ಮೋದಿ ಅವರೊಂದಿಗೆ ಸಭೆ ನಡೆಸಿದ್ದಾರೆ.

ಭೇಟಿ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮೋದಿಯವರು, ಅಮೆರಿಕದ ರಾಷ್ಟ್ರೀಯ ಗುಪ್ತಚರ ವಿಭಾಗದ ನಿರ್ದೇಶಕಿ ತುಲಸಿ ಗಬ್ಬಾರ್ಡ್ ಅವರನ್ನು ವಾಷಿಂಗ್ಟನ್ ಡಿಸಿಯಲ್ಲಿ ಭೇಟಿಯಾಗಿದ್ದು, ಅವರಿಗೆ ಅಭಿನಂದನೆ ಸಲ್ಲಿಸಿದ್ದೇನೆ. ಭಾರತ–ಅಮೆರಿಕ ನಡುವಿನ ಬಾಂಧವ್ಯದ ಬಗ್ಗೆ ಚರ್ಚೆ ನಡೆಸಿದ್ದೇವೆ ಎಂದು ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಎರಡು ದಿನಗಳ ಭೇಟಿಗಾಗಿ ಅಮೆರಿಕಕ್ಕೆ ಬಂದಿಳಿದಿದ್ದಾರೆ.

ಅಮೆರಿಕದಲ್ಲಿರುವ ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಸೇರಿದಂತೆ ಇತರ ಅಧಿಕಾರಿಗಳು ಮೋದಿ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದ್ದರು. ಡೊನಾಲ್ಡ್ ಟ್ರಂಪ್ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡ ನಂತರ ಪ್ರಧಾನಿ ಮೋದಿ ಅವರ ಮೊದಲ ಅಮೆರಿಕ ಭೇಟಿ ಇದಾಗಿದೆ.

ಪ್ರಧಾನಿ ಮೋದಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಈ ಭೇಟಿಯು ಭಾರತ ಹಾಗೂ ಅಮೆರಿಕ ನಡುವಣ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

ಪೊಲೀಸರು ಕೆಲವು ಅಮಾಯಕರ ಬಂಧಿಸಿದ್ದಾರೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ

- ಪ್ರಕರಣ ದಾಖಲಿಸಲು ಪೊಲೀಸರು ವಿಳಂಬ
- ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ತಪ್ಪು ಮಾಹಿತಿ
- ಪೊಲೀಸ್ ಠಾಣೆಯಲ್ಲಿ ಬಿಜೆಪಿ ನಾಯಕರ ಸಭೆ



ಮೈಸೂರು, ಫೆ.13(ಬಿಎಲ್‌ಯು)– ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ ಪ್ರಕರಣದಲ್ಲಿ ಪೊಲೀಸರು ಕೆಲವು ಅಮಾಯಕರನ್ನು ಬಂಧಿಸಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮಾಯಕರನ್ನು ಬಂಧಿಸಿರುವ ಕಾರಣ ಅವರ ನೆರವಿಗೆ ನಾವು ವಕೀಲರ ತಂಡ ರಚಿಸಿದ್ದೇವೆ ಎಂದು ತಿಳಿಸಿದರು.

ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಪೊಲೀಸರಿಗೆ ಧಮ್ಕಿ ಹಾಕಿದ್ದಾರೆ. ಇದರಿಂದ ಪೊಲೀಸರು ಅಶೋಕ್‌ಗೆ ಹೆದರಿ ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಆಪಾದಿಸಿದರು.

ಪೊಲೀಸ್ ಠಾಣೆ ಒಳಗೆ ಹೋಗಲು ನಮಗೆ ಅವಕಾಶ ನೀಡದ ಪೊಲೀಸರು, ಬಿಜೆಪಿ ನಾಯಕರಿಗೆ ಬಿಟ್ಟಿದ್ದಾರೆ. ಬಿಜೆಪಿ ನಾಯಕರು ಪೊಲೀಸ್ ಠಾಣೆಯಲ್ಲಿ ಸಭೆ ನಡೆಸಿದ್ದು, ಇದಕ್ಕೆ ಅವಕಾಶ ಇದೆಯೇ ಎಂದು ಲಕ್ಷ್ಮಣ್ ಪ್ರಶ್ನಿಸಿದರು.

ಗಲಾಟೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ವಿಳಂಬ ಮಾಡಿದ್ದಾರೆ. ಬೆಳಿಗ್ಗೆ ದೂರು ನೀಡಿದರೆ ಸಂಜೆ ನಂತರ ಪ್ರಕರಣ ದಾಖಲಿಸುತ್ತಾರೆ. ಈ ವಿಚಾರದ ಬಗ್ಗೆ ಪರಾಮರ್ಶೆ ಮಾಡಬೇಕಿದೆ. ನಿಷ್ಪಕ್ಷಪಾತ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.

ಪೊಲೀಸರ ಕಾರ್ಯವೈಖರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿದ ಲಕ್ಷ್ಮಣ್, ಪ್ರಾಯಶಃ ಡಿ.ಕೆ.ಶಿವಕುಮಾರ್ ಅವರಿಗೆ ಪೊಲೀಸರು ತಪ್ಪು ಮಾಹಿತಿ ನೀಡಿರಬಹುದು ಎಂದು ಹೇಳಿದರು.

ರಾಹುಲ್ ಗಾಂಧಿ, ಅಖಿಲೇಶ್ ಯಾದವ್, ಅರವಿಂದ್ ಕೇಜ್ರಿವಾಲ್ ಭಾವಚಿತ್ರ ಹಾಕಿರುವುದಕ್ಕೆ ಈ ಗಲಾಟೆ ನಡೆದಿಲ್ಲ. ಬದಲಿಗೆ ಧರ್ಮಗುರುಗಳ ಬಗ್ಗೆ ಅವಹೇಳನ ಮಾಡಿರುವುದಕ್ಕೆ ಗಲಾಟೆ ನಡೆದಿದೆ. ಆದ ಕಾರಣ ನಾನು ಈ ವಿಚಾರದ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದು ತಿಳಿಸಿದರು.

ಈಗಾಗಲೇ ಹಲವರನ್ನು ಪೊಲೀಸರು ಬಂಧಿಸಿದ್ದು, ಮತ್ತಷ್ಟು ಆರೋಪಿಗಳ ಬಂಧನಕ್ಕೆ ಮುಂದಾಗಿದ್ದಾರೆ. ಆದರೆ ಪೊಲೀಸರು ಅಮಾಯಕರಿಗೆ ತೊಂದರೆ ನೀಡಬಾರದು ಎಂದು ಮನವಿ ಮಾಡಿದರು.

ಯಾರೇ ಗಲಾಟೆ ಮಾಡಿದರೂ ಕ್ರಮ ಕೈಗೊಳ್ಳಲು ನಮ್ಮ ಅಭ್ಯಂತರವಿಲ್ಲ. ಆದರೆ ಅಮಾಯಕರು ಇದರ ವ್ಯೂಹಕ್ಕೆ ಸಿಲುಕಬಾರದು ಎಂದು ಹೇಳಿದರು.

ಉದಯಗಿರಿ ಪೊಲೀಸ್ ಠಾಣೆ ಬಳಿ ಗಲಾಟೆಗೆ ಕಾರಣನಾದ ಸುರೇಶ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರನ್ನು ಆರ್‌ಎಸ್‌ಎಸ್‌ನವರು ಚಡ್ಡಿ ತೊಳೆಯಲು ಇಟ್ಟುಕೊಂಡಿದ್ದಾರೆ. ಜೊತೆಗೆ ಕಾಂಗ್ರೆಸ್ ನಾಯಕರನ್ನು ಟೀಕಿಸಲು ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಲಕ್ಷ್ಮಣ್ ಗೇಲಿ ಮಾಡಿದರು.

ಪ್ರಕರಣ ದಾಖಲಿಸುವಲ್ಲಿ ಪೊಲೀಸರು ವಿಳಂಬ ಮಾಡಿದ್ದಾರೆ

ಶಾಸಕ ತನ್ವೀರ್ ಸೇಠ್ ಪ್ರತಿಕ್ರಿಯೆ



ಮೈಸೂರು, ಫೆ.13(ಆರ್‌ಕೆ)– ಅವಹೇಳನಕಾರಿ ಪೋಸ್ಟರ್ ಹಾಕಿದ ಬಗ್ಗೆ ಪ್ರಕರಣ ದಾಖಲಿಸುವಲ್ಲಿ ಪೊಲೀಸರು ವಿಳಂಬ ಮಾಡಿದ್ದಾರೆ ಎಂದು ಶಾಸಕ ತನ್ವೀರ್ ಸೇಠ್ ಇಂದಿಲ್ಲಿ ಆರೋಪಿಸಿದ್ದಾರೆ.

ಉದಯಗಿರಿ ಠಾಣೆ ಬಳಿ ಉದ್ವಿಗ್ನ ಪರಿಸ್ಥಿತಿ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ಅಖಿಲೇಶ್ ಯಾದವ್, ರಾಹುಲ್ ಗಾಂಧಿ ಫೋಟೋ ಹಾಕಿದ್ದಕ್ಕೆ ಈ ಘಟನೆ ನಡೆದಿಲ್ಲ. ಪ್ರವಾದಿ ಬಗ್ಗೆ ಅವಹೇಳನವಾಗಿ ಬರೆದಿರುವುದು ಇದಕ್ಕೆ ಕಾರಣ. ಸಾವಿನ ಮನೆಯಲ್ಲಿ ನಾನು ರಾಜಕಾರಣ ಮಾಡುವುದಿಲ್ಲ. ಘಟನೆ ನಡೆದು ಹೋಗಿದೆ. ಅದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದರು.

ಯಾರದ್ದೋ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಈ ವಿಷಯದಲ್ಲಿ ಪಕ್ಷ, ವ್ಯಕ್ತಿ ಮುಖ್ಯವಾಗುವುದಿಲ್ಲ. ಬೆಳಗ್ಗೆ ದೂರು ನೀಡಿದರೆ ಪೊಲೀಸರು ಸಂಜೆ ಪ್ರಕರಣ ದಾಖಲಿಸಿದ್ದಾರೆ. ಈ ಎಲ್ಲದರ ಬಗ್ಗೆ ಪರಾಮರ್ಶೆ ಮಾಡಬೇಕಿದೆ. ಅಮಾಯಕರಿಗೆ ತೊಂದರೆ ಕೊಡಬೇಡಿ ಎಂದಷ್ಟೇ ಪೊಲೀಸರಿಗೆ ತಿಳಿಸಿದ್ದೇನೆ ಎಂದ ಅವರು, ಅದಕ್ಕಾಗಿ ವಕೀಲರ ತಂಡ ರಚಿಸಿದ್ದೇವೆ. ಕೆಲವರನ್ನು ಬಂಧಿಸಿದ ತಕ್ಷಣ ಅವರ ತಂದೆ–ತಾಯಿ ಅಳಲು ತೋಡಿಕೊಳ್ಳುತ್ತಿರುವುದರಿಂದ ವಕೀಲರ ತಂಡ ರಚಿಸಲಾಗಿದೆ ಎಂದರು.

ಅವಹೇಳನಕಾರಿ ಚಿತ್ರ ಸಿದ್ಧಪಡಿಸಿದ್ದಲ್ಲಿ, ಪ್ರಚೋದನೆ ಮಾಡಿದವರ್ಯಾರು ಎಂಬುದರ ಬಗ್ಗೆ ತನಿಖೆಯಾಗಬೇಕಿದೆ. ಗೃಹ ಸಚಿವರೊಂದಿಗೆ ಚರ್ಚೆ ಮಾಡುತ್ತೇನೆ ಎಂದ ತನ್ವೀರ್ ಸೇಠ್, ಉದಯಗಿರಿಗೆ ಮತ್ತೊಂದು ಪೊಲೀಸ್ ಠಾಣೆ ಬೇಕೆಂದು ನಾನು ಕಳೆದ ಐದು ವರ್ಷಗಳಿಂದ ಬೇಡಿಕೆ ಇಟ್ಟಿದ್ದೇನೆ ಎಂದು ಹೇಳಿದರು.

ಈ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸಾಮಾಜಿಕ, ಆರ್ಥಿಕ ನ್ಯಾಯ ಇಲ್ಲ

ಬಿಎಸ್ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಆರೋಪ



ಮೈಸೂರು, ಫೆ.13(ಎಂಟಿವೈ)– ಕೇಂದ್ರದ ಈ ಬಾರಿಯ ಬಜೆಟ್‌ನಲ್ಲಿ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಕಾಣೆಯಾಗಿದ್ದು, ಬಡ ಮತ್ತು ಮಧ್ಯಮ ವರ್ಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಅನ್ಯಾಯವಾಗಿದೆ ಎಂದು ಬಿಎಸ್ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಪ್ರಸಕ್ತ ಸಾಲಿನ ಬಜೆಟ್ 50.65 ಲಕ್ಷ ಕೋಟಿ ರೂ.ಗಳ ಬಜೆಟ್ ಆಗಿದ್ದರೂ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಕಾಣೆಯಾಗಿದೆ. ಇದರಲ್ಲಿ 12 ಲಕ್ಷ ರೂ.ವರೆಗೆ ತೆರಿಗೆ ಕಟ್ಟುವಂತಿಲ್ಲ ಎಂಬ ವಿಷಯಕ್ಕೇ ಹೆಚ್ಚು ಪ್ರಚಾರ ನೀಡಲಾಗುತ್ತಿದೆ. ಆದರೆ ಇಷ್ಟು ತೆರಿಗೆ ಪ್ರಮಾಣ ಹೊಂದಿರುವವರ ಸಂಖ್ಯೆ ಕಡಿಮೆ ಇದೆ. 12 ಲಕ್ಷ ಆದಾಯ ಹೊಂದಿರುವವರಂತೆ ಬಡ ಜನರೂ ಪೆಟ್ರೋಲ್, ಡೀಸೆಲ್ ಹಾಗೂ ಇನ್ನಿತರ ಅಗತ್ಯ ವಸ್ತುಗಳಿಗೆ ಅಷ್ಟೇ ದರ ನೀಡಬೇಕಾಗಿದೆ. ಹೀಗಾಗಿ ಕೇಂದ್ರದ ಬಿಜೆಪಿ ಸರ್ಕಾರ ಸುಳ್ಳು ಹೇಳುವ ಮೂಲಕ ಪ್ರಚಾರ ತೆಗೆದುಕೊಳ್ಳುತ್ತಿದೆ ಎಂದು ಕಿಡಿಕಾರಿದರು.

ಸ್ವಾತಂತ್ರ್ಯ ಬಂದು 75 ವರ್ಷವಾದರೂ ದೇಶದಲ್ಲಿ ಸುಮಾರು 80 ಕೋಟಿ ಜನ ಪಡಿತರ ಅಂಗಡಿಗಳ ಎದುರು ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಆದರೆ ಈ ಬಜೆಟ್‌ನಲ್ಲಿ ಬಡತನ ರೇಖೆಗಿಂತ ಕೆಳಗಿನವರಿಗೆ ಸ್ವಾವಲಂಬನೆ ನೀಡುವ ಯಾವುದೇ ವಿಷಯ ಪ್ರಸ್ತಾಪಿಸಿಲ್ಲ. ಮುಂದಿನ 5 ವರ್ಷಗಳಲ್ಲಿ ಐದು ಲಕ್ಷ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರನ್ನು ಉದ್ಯಮಿಗಳನ್ನಾಗಿಸಲು ತಲಾ 2 ಕೋಟಿ ಸಾಲ ನೀಡಲಾಗುವುದು ಎಂದು ತಿಳಿಸಿದ್ದಾರೆ. ಆದರೆ ಈ ಯೋಜನೆಗೆ ಹಣವನ್ನೇ ಒದಗಿಸಿಲ್ಲ. ಒಟ್ಟಾರೆಯಾಗಿ ಇಡೀ ಬಜೆಟ್ ವೋಟ್ ಮಾಡಿಕೊಳ್ಳುವ, ಶ್ರೀಮಂತ ಉದ್ಯಮಿಗಳನ್ನು ಮತ್ತಷ್ಟು ಶ್ರೀಮಂತರನ್ನಾಗಿಸುವ ದಿಸೆಯಲ್ಲಿ ಸಿದ್ಧಗೊಂಡಿದೆ ಎಂದು ದೂರಿದರು. ಗೋಷ್ಠಿಯಲ್ಲಿ ಬಿಎಸ್ಪಿ ಮುಖಂಡರಾದ ಚಂದ್ರಶೇಖರ್, ಪುಟ್ಟಬಸವಯ್ಯ, ಮಹದೇವಸ್ವಾಮಿ, ಬಸವಣ್ಣ, ಶಶಿಕುಮಾರ್, ರಾಜೇಶ್, ಶಿವಸಿಂಹ ಇದ್ದರು.

ವಧು–ವರರ ಸಮಾವೇಶ

ಮೈಸೂರು,ಫೆ.13–ಜೆಎಸ್‌ಎಸ್ ವಿವಾಹ ವೇದಿಕೆ ಆಶ್ರಯದಲ್ಲಿ ಫೆ.16ರಂದು ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ಭವನದ ಸಭಾಂಗಣದಲ್ಲಿ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ. ಜೆಎಸ್‌ಎಸ್ ವಿವಾಹ ವೇದಿಕೆಯಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಪ್ರವೇಶ. ಸಮಾವೇಶವು ಬೆಳಗ್ಗೆ 10ರಿಂದ ಮಧ್ಯಾಹ್ನ 1 ರವರೆಗೆ ನಡೆಯಲಿದೆ. ಮಾಹಿತಿಗೆ ದೂ.0821–2430322, 8310121328 ಸಂಪರ್ಕಿಸಬಹುದು.

ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ

ಮೈಸೂರು: ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.20ರವರೆಗೆ ಶಿಬಿರವು ಬೆಳಗ್ಗೆ 9ರಿಂದ 4.30ರವರೆಗೆ ಮಕ್ಕಳಲ್ಲಿ ಕಂಡು ಬರುವ ದೂರದೃಷ್ಟಿ, ಸಮೀಪದೃಷ್ಟಿ ದೋಷ, ಕಣ್ಣಿನಿಂದ ನೀರು ಸೋರುವುದು, ಕೆಂಪಾಗುವುದು, ಕಣ್ಣಿನ ನವೆ, ಕಣ್ಣಿನ ಅಲರ್ಜಿ ಹಾಗೂ ಇತರೆ ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 9448211075, ದೂ. 0821–2548231.

ಪ್ರಶಂಸನಾ ಪತ್ರ...





ಸ್ವಚ್ಛತಾ ಸರ್ವೇಕ್ಷಣಾ ಸಂಬಂಧ ಮೈಸೂರು ಮಹಾನಗರ ಪಾಲಿಕೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು ಹಸಿರೀಕರಣಕ್ಕೆ ಹಲವು ವರ್ಷಗಳಿಂದ ಸಾವಿರಾರು ಸಸಿಗಳನ್ನು ನೆಟ್ಟು, ಸಂರಕ್ಷಿಸುವ ಮೂಲಕ ಮಹಾ ಕೊಡುಗೆ ನೀಡುತ್ತಾ ಬಂದಿರುವ ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ಎನ್. ರಾಘವನ್ ಅವರನ್ನು ಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್ ಅಭಿನಂದಿಸಿ, ಸ್ವಚ್ಛತಾ ಚಾಂಪಿಯನ್ ಪ್ರಶಂಸಾ ಪತ್ರವನ್ನು ನೀಡಲಾಯಿತು. ಜಿಲ್ಲಾ ರೆಸಿಡೆಂಟ್ ಕಮೀಷನರ್ (ಸ್ಕೌಟ್ಸ್) ಮತ್ತು ಪ್ರಗತಿ ಪ್ರತಿಷ್ಠಾನ ಸಂಸ್ಥಾಪಕರಾದ ಡಾ. ಬಿ.ಕೆ. ಅಜಯ್‌ಕುಮಾರ್ ಜೈನ್ ಅವರಿಗೂ (ಬಲಚಿತ್ರ) ಪ್ರಮಾಣಪತ್ರ ನೀಡಲಾಯಿತು.

ಉದ್ಯೋಗ ಮೇಳ

ಮೈಸೂರು,ಫೆ.13–ರಂಗೋಲಿ ಪತ್ರಿಕೆ, ಗಂಗೋತ್ರಿ ಪಬ್ಲಿಕ್ ಸ್ಕೂಲ್, ಪಿಯು ಕಾಲೇಜು ಸಹಯೋಗದೊಂದಿಗೆ ಗಂಗೋತ್ರಿ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜಿನಲ್ಲಿ ಫೆ.23ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2ರವರೆಗೆ ಉದ್ಯೋಗ ಮೇಳ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ.9448 492842, 7411901778 ಸಂಪರ್ಕಿಸಿ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಡಿ.ಆರ್.ಜಯಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಹರಿಜನ್ ಗೋಪಾಲ್ ಯಾಮ್ನಾಪ್ಪ ಅವರು ಹಿಂದಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಚಾಮುಂಡೇಶ್ವರಿ ದೇವಸ್ಥಾನದ ಅರ್ಚಕರ ಮೇಲೆ ಡ್ರಗ್ಗಿಸ್ಟ್ ದಾಳಿ; ಚಾಕು ತೋರಿಸಿ ಸುಲಿಗೆ ಯತ್ನ



ಚಾಮುಂಡೇಶ್ವರಿ ದೇವಸ್ಥಾನದ ಅರ್ಚಕ ದೇವಪ್ರಸಾದ್ ದೀಕ್ಷಿತ್ ಚಿಕಿತ್ಸೆ ಪಡೆದು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ.

ಮೈಸೂರು, ಫೆ.13(ಆರ್‌ಕೆ)– ಮೈಸೂರಿನ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಅರ್ಚಕರೊಬ್ಬರ ಮೇಲೆ ದಾಳಿ ಮಾಡಿದ ಡ್ರಗ್ಗಿಸ್ಟ್ ಯುವಕ ಸುಲಿಗೆ ಯತ್ನ ನಡೆಸಿದ್ದಾನೆ. ಈ ಘಟನೆ ಸಿದ್ಧಾರ್ಥ ನಗರದ ಅಪಾರ್ಟ್‌ಮೆಂಟ್‌ವೊಂದರಲ್ಲಿ ಕಳೆದ ಸೋಮವಾರ ನಡೆದಿದೆ.

ಚಾಮುಂಡೇಶ್ವರಿ ದೇವಸ್ಥಾನದ ಅರ್ಚಕ ದೇವಪ್ರಸಾದ್ ದೀಕ್ಷಿತ್, ಯುವಕನ ದಾಳಿಗೊಳಗಾದವರಾಗಿದ್ದು, ಗಾಯಗೊಂಡಿರುವ ಅವರು ಚಿಕಿತ್ಸೆ ಪಡೆದು ಇದೀಗ ಚೇತರಿಸಿಕೊಂಡಿದ್ದಾರೆ. ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸ ಮಾಡುತ್ತಿರುವ ದೇವಪ್ರಸಾದ್ ಮನೆಗೆ ಕಳೆದ ಸೋಮವಾರ ರಾತ್ರಿ 9.30 ಗಂಟೆ ಸುಮಾರಿಗೆ ಧಾವಿಸಿದ ಅಪರಿಚಿತ ಯುವಕನೋರ್ವ ಬಾಗಿಲು ತಟ್ಟಿದ್ದಾನೆ. ತಮ್ಮ ಮಗ ಬಂದಿರಬಹುದೆಂದು ಭಾವಿಸಿ, ಅವರ ಪತ್ನಿ ಸುಮಾ ಅವರು ಬಾಗಿಲು ತೆರೆಯುತ್ತಿದ್ದಂತೆಯೇ ಒಳ ನುಗ್ಗಿದ ಆತ ಬೋಲ್ಟ್ ಹಾಕಿ ಚಾಕು ತೋರಿಸಿದ್ದಾನೆ. ಈ ಸಂದರ್ಭ ಪ್ರತಿರೋಧ ವ್ಯಕ್ತಪಡಿಸಿದ ದೇವಪ್ರಸಾದ್ ದೀಕ್ಷಿತ್ ಅವರಿಗೆ ಚಾಕುವಿನಿಂದ ಇರಿಯಲು ಯತ್ನಿಸಿದ್ದಾನೆ. ಈ ವೇಳೆ 10 ಸಾವಿರ ರೂ. ಹಣ ಕೊಡುವಂತೆ ಒತ್ತಾಯಿಸಿದ್ದಾನೆ. ಅಲ್ಲದೆ ದೇವಪ್ರಸಾದ್ ಅವರ ಮುಖಕ್ಕೆ ಗುದ್ದಿದಾಗ ಅವರ ಹಲ್ಲು ಜಖಂಗೊಂಡಿದೆ.

ಅವರ ಚೀರಾಟ ಕೇಳುತ್ತಿದ್ದಂತೆಯೇ ಅಪಾರ್ಟ್‌ಮೆಂಟ್‌ನಲ್ಲಿದ್ದ ನೆರೆ ಹೊರೆವಾಸಿಗಳು ಹಾಗೂ ಮಗ ಸುದೇವ್ ದೀಕ್ಷಿತ್ ಧಾವಿಸಿ, ಅಪರಿಚಿತ ಯುವಕನನ್ನು ಹಿಡಿದು ಪ್ರಶ್ನಿಸಿದಾಗ ಆತ ಸಿದ್ಧಾರ್ಥ ಬಡಾವಣೆಯಲ್ಲೇ ವಾಸವಾಗಿದ್ದು, ಶಾಲೆಯೊಂದನ್ನು ನಡೆಸುತ್ತಿರುವ ಪ್ರಾಧ್ಯಾಪಕರೊಬ್ಬರ ಮಗ ಎಂಬುದು ತಿಳಿಯಿತು. ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿ ಆತನನ್ನು ಒಪ್ಪಿಸಲಾಯಿತು. ಆದರೆ ಆತನ ತಂದೆ–ತಾಯಿ ದೇವಪ್ರಸಾದ್ ಮತ್ತು ಸುಮಾ ಅವರ ಬಳಿ ಪರಿಪರಿಯಾಗಿ ಬೇಡಿಕೊಂಡ ಹಿನ್ನೆಲೆಯಲ್ಲಿ ತಾವು ದೂರು ನೀಡದೆ, ಎಫ್‌ಐಆರ್ ಆಗುವುದನ್ನು ತಡೆದು, ಕೇವಲ ತಪ್ಪೊಪ್ಪಿಗೆ ಮುಚ್ಚಳಿಕೆ ಬರೆಸಿಕೊಂಡು ಬಿಡುವಂತೆ ಪೊಲೀಸರಲ್ಲಿ ಮನವಿ ಮಾಡಿದ್ದರು ಎಂದು ತಿಳಿದುಬಂದಿದೆ.

ಲಿಖಿತ ದೂರು ನೀಡದೆ ದೇವಪ್ರಸಾದ್ ಮತ್ತು ಸುಮಾ ಅವರು ಮನವಿ ಮಾಡಿದ ಹಿನ್ನೆಲೆಯಲ್ಲಿ ಯುವಕನಿಗೆ ತಾಕೀತು ಮಾಡಿ ಮುಂದೆ ಇಂತಹ ಕೃತ್ಯವೆಸಗಿದಲ್ಲಿ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಎಚ್ಚರಿಕೆ ನೀಡಿ ಪೊಲೀಸರು ಕಳುಹಿಸಿದರು ಎಂದು ಹೇಳಲಾಗಿದೆ. ಕಳೆದ 15 ದಿನಗಳ ಹಿಂದೆಯೂ ಇದೇ ರೀತಿ ಅವರ ಮನೆಗೆ ಬಂದು ಹಣಕ್ಕೆ ಒತ್ತಾಯ ಮಾಡಿದ್ದನು. ಆತ ಯಾರೆಂಬುದೇ ಗೊತ್ತಿಲ್ಲದ ಕಾರಣ ನಾವು ಹಣ ಕೊಡುವುದಿಲ್ಲ ಎಂದು ಹೇಳಿ ಕಳುಹಿಸಿದ್ದೆವು ಅಷ್ಟೇ ಎಂದೂ ದೇವಪ್ರಸಾದ್ ಮತ್ತು ಸುಮಾ ತಿಳಿಸಿದ್ದಾರೆ.

ಖೋ ಖೋ ವಿಶ್ವಕಪ್ ಆಟಗಾರ್ತಿ ಚೈತ್ರಾರ ಶಿಕ್ಷಣ, ತರಬೇತಿಯ ಸಂಪೂರ್ಣ ವೆಚ್ಚ ನಾವೇ ಭರಿಸುತ್ತೇವೆ

- ಕನಕಪುರ ಶ್ರೀ ದೇಗುಲಮಠದ ಎಸ್‌ಎನ್‌ಎಸ್ ಶಾಲಾ ವಾರ್ಷಿಕೋತ್ಸವದಲ್ಲಿ ಶ್ರೀ ಚನ್ನಬಸವ ಸ್ವಾಮೀಜಿ ಘೋಷಣೆ
- ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಶಾಲೆ ವಿದ್ಯಾರ್ಥಿಗೆ ಒಂದು ಲಕ್ಷ ರೂ. ಪುರಸ್ಕಾರ



ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಆಲನಹಳ್ಳಿ ಎಸ್‌ಎನ್‌ಎಸ್ ಶಾಲೆಯ ವಾರ್ಷಿಕೋತ್ಸವವನ್ನು ಕನಕಪುರ ದೇಗುಲ ಮಠದ ಕಿರಿಯ ಶ್ರೀಗಳಾದ ಚನ್ನಬಸವ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು, ಫೆ.13–ಖೋ ಖೋ ವಿಶ್ವಕಪ್ ವಿಜೇತ ತಂಡದ ಆಟಗಾರ್ತಿ ಬಿ.ಚೈತ್ರಾ ಅವರ ಮುಂದಿನ ಶಿಕ್ಷಣ ಹಾಗೂ ತರಬೇತಿಯ ಸಂಪೂರ್ಣ ವೆಚ್ಚವನ್ನು ತಮ್ಮ ಸಂಸ್ಥೆ ವತಿಯಿಂದ ಭರಿಸಲಾಗುವುದು ಎಂದು ಕನಕಪುರ ಶ್ರೀ ದೇಗುಲ ಮಠದ ಕಿರಿಯ ಶ್ರೀಗಳು ಹಾಗೂ ಶ್ರೀ ನಿರ್ವಾಣಸ್ವಾಮಿ ಕೃಪಾ ವಿದ್ಯಾಪೀಠದ ಅಧ್ಯಕ್ಷರೂ ಆದ ಶ್ರೀ ಚನ್ನಬಸವ ಸ್ವಾಮೀಜಿ ಪ್ರಕಟಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ತಮ್ಮ ಸಂಸ್ಥೆಗೆ ಸೇರಿದ ಆಲನಹಳ್ಳಿಯ ಎಸ್‌ಎನ್‌ಎಸ್ ಶಾಲೆಯ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಚೈತ್ರಾ ಅವರು ನಮ್ಮ ಸಂಸ್ಥೆಯು ಕುರುಬೂರಿನಲ್ಲಿ ನಡೆಸುತ್ತಿರುವ ಪ್ರಿಯದರ್ಶಿನಿ ಕಾನ್ವೆಂಟ್‌ನ ಹಿರಿಯ ವಿದ್ಯಾರ್ಥಿನಿಯಾಗಿದ್ದು, ಆಕೆಯ ಸಾಧನೆಗೆ ಎಲ್ಲಾ ರೀತಿಯ ನೆರವು ನೀಡುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಕುರುಬೂರಿನಲ್ಲಿ ಸಂಸ್ಥೆಯ ವತಿಯಿಂದ ಹಾಗೂ ಟಿ.ನರಸೀಪುರಲ್ಲಿ ವಿವಿಧ ಸಂಘಟನೆಗಳು ನಡೆಸಿದ ಸಮಾರಂಭದಲ್ಲಿ ತಾವು ಭಾಗವಹಿಸಿದ್ದಾಗಲೇ ಈ ವಿಷಯವನ್ನು ಹೇಳಬೇಕಿತ್ತು. ಆದರೆ ಎಲ್ಲರೂ ತವರಿಗೆ ಬಂದ ಚೈತ್ರಾಳನ್ನು ಅಭಿನಂದಿಸುವುದರಲ್ಲಿ ನಿರತರಾಗಿದ್ದರಿಂದ ಈಗ ಪ್ರಕಟಿಸುತ್ತಿರುವುದಾಗಿ ಹೇಳಿದರು.

ಲಕ್ಷ ರೂ. ಪುರಸ್ಕಾರ: ಅದೇ ರೀತಿ ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗೆ ಒಂದು ಲಕ್ಷ ರು. ನಗದು ಪುರಸ್ಕಾರ ನೀಡಲಾಗುವುದು. 1ರಿಂದ 4ನೇ ತರಗತಿವರೆಗೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಎಲ್ಲಾ ರೀತಿಯ ಚಟುವಟಿಕೆಗಳನ್ನು ಕಲಿಸಲಾಗುವುದು. ವಿದ್ಯಾರ್ಥಿಗಳಲ್ಲಿರುವ ವಿಶೇಷ ಪ್ರತಿಭೆ ಗುರುತಿಸಿ, ಒಂದ್ಯೈದು ವರ್ಷ ತರಬೇತಿಯನ್ನು ನೀಡಲಾಗುವುದು ಎಂದರು.

ಗುರಿ ಮುಖ್ಯ : ಖೋ ಖೋ ಮಹಿಳಾ ವಿಶ್ವಕಪ್ ವಿಜೇತ ತಂಡದ ಆಟಗಾರ್ತಿ ಬಿ.ಚೈತ್ರಾ ಮಾತನಾಡಿ, ನನ್ನ ಸಾಧನೆಗೆ ನಮ್ಮೂರಿನಲ್ಲಿ ಶ್ರೀದೇಗುಲ ಮಠ ನಡೆಸುತ್ತಿರುವ ಶಾಲೆ., ಕಿರಿಯ ಶ್ರೀಗಳ ಉತ್ತೇಜನ ಹಾಗೂ ತರಬೇತುದಾರ ಮಂಜುನಾಥ್ ಅವರು ಕಾರಣ ಎಂದು ಕೃತಜ್ಞತೆ ಸಲ್ಲಿಸಿದರು. ಪ್ರತಿಯೊಬ್ಬರೂ ಮುಂದೆ ಗುರಿ ಹಾಗೂ ಗುರು ಇಟ್ಟುಕೊಂಡು ಸಾಧನೆ ಮಾಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಚಿತ್ರನಟ ನಾಗಭೂಷಣ್ ಮಾತನಾಡಿ, ವಿದ್ಯಾರ್ಥಿಗಳು ಚೆನ್ನಾಗಿ ಓದಬೇಕು. ಪೋಷಕರಿಗೆ ಹೊರೆಯಾಗಬಾರದು. ಮೊಬೈಲ್ ಬಿಟ್ಟು, ಪುಸ್ತಕ ಓದಬೇಕು. ಕನ್ನಡ ಸಾಹಿತ್ಯ ಓದಬೇಕು. ಕಥೆಗಳನ್ನು ಓದಬೇಕು. ಒಳ್ಳೆಯ ಸಿನಿಮಾ ನೋಡಬೇಕು. ಆ ಮೂಲಕ ಕನ್ನಡ ಭಾಷೆಯ ಬೆಳವಣಿಗೆಯಾಗುತ್ತದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಓದಿನ ಜೊತೆಗೆ ಉತ್ತಮ ಕೌಶಲ ರೂಪಿಸಿಕೊಳ್ಳಿ. ಅದೇ ರೀತಿ ಉತ್ತಮ ಸಂಸ್ಕಾರ ಬೆಳೆಸಿಕೊಂಡು ಗುರು–ಹಿರಿಯರಿಗೆ ಗೌರವ ನೀಡಿ. ಇವತ್ತು ಸಾಕಷ್ಟು ಅವಕಾಶಗಳು ಸಿಗುತ್ತಿದ್ದು, ಅವುಗಳನ್ನು ಬಳಸಿಕೊಳ್ಳಿ ಎಂದರು.

ವಿದ್ಯಾರ್ಥಿಗಳಾದ ಹೇಮಶ್ರೀ ಹಾಗೂ ಪೃಥ್ವಿ ನಿರೂಪಿಸಿದರು. ಶಿಕ್ಷಕಿಯರಾದ ಪುಷ್ಪಾ, ಪುಷ್ಪಾವತಿ ಹಾಗೂ ಉಮಾ ಪ್ರಾರ್ಥಿಸಿದರು. ಮುಖ್ಯ ಶಿಕ್ಷಕ ಎಚ್.ಸಿ.ನಾಗೇಂದ್ರ ಸ್ವಾಗತಿಸಿದರು. ಎ.ಆರ್.ಮಮತಾಶ್ರೀ ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಿನ್ಸಿಪಾಲ್ ಬಿ.ಮಹದೇವಸ್ವಾಮಿ ವಾರ್ಷಿಕ ವರದಿ ಓದಿದರು. ಮಧುಕುಮಾರ್ ವಂದಿಸಿದರು.

ನಕಲಿ ಅಂಕಪಟ್ಟಿ ನೀಡಿ ನೇಮಕ; ಮಂಡ್ಯ ಜಿಲ್ಲೆ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕನ ಆಯ್ಕೆ ರದ್ದು

ಮಂಡ್ಯ ಪಶ್ಚಿಮ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲು

ಮಂಡ್ಯ, ಫೆ.13– ನಕಲಿ ಅಂಕಪಟ್ಟಿ ನೀಡಿ ಮಂಡ್ಯ ಜಿಲ್ಲೆ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಹುದ್ದೆ ಗಿಟ್ಟಿಸಿಕೊಂಡಿದ್ದ ವ್ಯಕ್ತಿ ವಿರುದ್ಧ ಮಂಡ್ಯ ಪಶ್ಚಿಮ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ನೆಲಮಂಗಲ ತಾಲೂಕು ಅರಿಶಿಣಕುಂಟೆ ಗ್ರಾಮದ ಆರ್ಯ ನಗರ ನಿವಾಸಿ ವಿ.ವಿನೋದ್ ಎಂಬಾತನೇ ನಕಲಿ ಅಂಕಪಟ್ಟಿ ನೀಡಿ ಹುದ್ದೆ ಗಿಟ್ಟಿಸಿಕೊಂಡವನಾಗಿದ್ದು, ಜಿಲ್ಲಾ ನಿರ್ಮಿತಿ ಕೇಂದ್ರ ಆಡಳಿತ ಮಂಡಳಿ ಸಭೆಯಲ್ಲಿ ಈತನ ಆಯ್ಕೆಯನ್ನು ರದ್ದುಪಡಿಸಲಾಗಿದೆ.

ವಿವರ: ಮಂಡ್ಯ ಜಿಲ್ಲೆ ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ಹುದ್ದೆಗೆ ಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಳ್ಳಲು ನಿರ್ಮಿತಿ ಕೇಂದ್ರದ ಸದಸ್ಯ ಕಾರ್ಯದರ್ಶಿಗಳು 2022ರ ಸೆ.23ರಂದು ಪ್ರಕಟಣೆ ಹೊರಡಿಸಿದ್ದರು.

ವಿ.ವಿನೋದ್ 2022ರ ಅ.13ರಂದು ಮಂಡ್ಯ ಜಿಲ್ಲಾಧಿಕಾರಿಗಳಿಗೆ ಯೋಜನಾ ವ್ಯವಸ್ಥಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ತಾನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಎಂ.ಟೆಕ್ ಇನ್ ಸಿವಿಲ್ ಇಂಜಿನಿಯರಿಂಗ್ ಸ್ನಾತಕೋತ್ತರ ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪಾಸ್ ಆಗಿರುವುದಾಗಿ 2016ರ ಪದವಿ ಅಂಕಪಟ್ಟಿಯನ್ನು ಸಲ್ಲಿಸಿದ್ದ.

ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ರಚಿಸಿದ್ದ ಆಯ್ಕೆ ಸಮಿತಿಯು 2023ರ ಸೆ.8ರಂದು ಸದರಿ ಹುದ್ದೆಗೆ ವಿ.ವಿನೋದ್‌ನನ್ನು ಆಯ್ಕೆ ಮಾಡಿತ್ತು ಈ ಮಧ್ಯೆ ಬೆಂಗಳೂರಿನ ಜಯನಗರದ ಗ್ರೇಡ್–1 ಗುತ್ತಿಗೆದಾರ ರವಿಕುಮಾರ್ ಎಂಬುವರು ವಿ.ವಿನೋದ್ ಕೇವಲ ಬಿ.ಇ. ಸಿವಿಲ್ ಇಂಜಿನಿಯರಿಂಗ್ ಪದವಿ ಮಾತ್ರ ಮಾಡಿದ್ದು, ಎಂ.ಟೆಕ್ ಪದವಿ ಪಡೆದಿಲ್ಲ ಎಂದು ಮಂಡ್ಯ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ವಿನೋದ್ ಸಲ್ಲಿಸಿದ್ದ ಅಂಕಪಟ್ಟಿಯ ನೈಜತೆ ಪರಿಶೀಲನೆಗಾಗಿ ಮುಕ್ತ ವಿವಿಗೆ ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದು, ವಿ.ವಿನೋದ್ ಎಂಬುವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಎಂ.ಟೆಕ್ ಇನ್ ಸಿವಿಲ್ ಇಂಜಿನಿಯರಿಂಗ್ ಸ್ನಾತಕೋತ್ತರ ಪದವಿ ಪಡೆದಿರುವುದಿಲ್ಲ ಎಂದು ಮುಕ್ತ ವಿವಿ ಉಪ ಕುಲಸಚಿವರು (ಪರೀಕ್ಷಾಂಗ) 2023ರ ಸೆ.19 ರಂದು ಜಿಲ್ಲಾಧಿಕಾರಿಗಳಿಗೆ ಸ್ಪಷ್ಟಪಡಿಸಿದ್ದರು.

ಈ ಆಧಾರದ ಮೇರೆಗೆ 2023ರ ಅ.11 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ನಿರ್ಮಿತಿ ಕೇಂದ್ರದ ಆಡಳಿತ ಮಂಡಳಿ ಸಭೆಯಲ್ಲಿ ವಿ.ವಿನೋದ್ ಅವರನ್ನು ಯೋಜನಾ ವ್ಯವಸ್ಥಾಪಕರ ಹುದ್ದೆಗೆ ಆಯ್ಕೆ ಮಾಡಿದ್ದ ನಿರ್ಣಯವನ್ನು ರದ್ದುಪಡಿಸಲಾಗಿದೆ. ಆದರೆ ಜಿಲ್ಲಾಡಳಿತಕ್ಕೆ ನಕಲಿ ಅಂಕಪಟ್ಟಿ ಸಲ್ಲಿಸಿ, ಹುದ್ದೆ ಪಡೆದಿದ್ದ ವಿನೋದ್ ವಿರುದ್ಧ ಈವರೆಗೂ ಜಿಲ್ಲಾಡಳಿತದಿಂದಾಗಲೀ, ಜಿಲ್ಲಾ ನಿರ್ಮಿತಿ ಕೇಂದ್ರದ ವತಿಯಿಂದಲಾಗಲೀ ಪೊಲೀಸ್ ಠಾಣೆಗೆ ದೂರು ಸಲ್ಲಿಸಿಲ್ಲ.

ಇದನ್ನು ಗಮನಿಸಿದ ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ ಅವರು ಮಾಹಿತಿ ಹಕ್ಕು ಕಾಯಿದೆಯಡಿ ಎಲ್ಲಾ ದೃಢೀಕೃತ ದಾಖಲೆಗಳನ್ನು ಪಡೆದು ಮಂಡ್ಯ ಪಶ್ಚಿಮ ಠಾಣೆಗೆ ಫೆ.12ರಂದು ದೂರು ಸಲ್ಲಿಸಿದ್ದು, ಪೊಲೀಸರು ವಿ.ವಿನೋದ್ ವಿರುದ್ಧ ಭಾರತೀಯ ದಂಡ ಸಂಹಿತೆ 420, 467, 486, 471ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ವಿ.ವಿನೋದ್ ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿರ್ಮಿತಿ ಕೇಂದ್ರದ ಅಸಿಸ್ಟೆಂಟ್ ಪ್ರಾಜೆಕ್ಟ್ ಮ್ಯಾನೇಜರ್ ಆಗಿ 5 ವರ್ಷ ಹಾಗೂ ಯೋಜನಾ ನಿರ್ದೇಶಕರಾಗಿ ಮತ್ತು ಕೆಆರ್‌ಐಡಿಎಲ್‌ನಲ್ಲೂ ಕರ್ತವ್ಯ ನಿರ್ವಹಿಸಿರುವುದಾಗಿ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದ್ದು, ಅವರು ಆ ಹುದ್ದೆಗಳನ್ನೂ ಕೂಡ ನಕಲಿ ಅಂಕಪಟ್ಟಿ ನೀಡುವ ಮೂಲಕ ಪಡೆದಿರಬಹುದು ಎಂದು ತಮ್ಮ ದೂರಿನಲ್ಲಿ ರವೀಂದ್ರ ಸಂಶಯ ವ್ಯಕ್ತಪಡಿಸಿ, ಕಾನೂನು ಕ್ರಮಕ್ಕೆ ಕೋರಿದ್ದಾರೆ.

ಮನೆಗೆ ನುಗ್ಗಿ ಗೃಹಿಣಿಗೆ ಲೈಂಗಿಕ ಕಿರುಕುಳ ಕೊಟ್ಟ ಕಾಮುಕ

ಪಾಂಡವಪುರ, ಫೆ.13– ಗೃಹಿಣಿಯೊಬ್ಬರು ಒಂಟಿಯಾಗಿ ಮನೆಯಲ್ಲಿ ಸ್ನಾನ ಮಾಡುತ್ತಿದ್ದ ವೇಳೆ ಕಾಮುಕನೋರ್ವ ಸ್ನಾನದ ಮನೆಗೆ ನುಗ್ಗಿ ಲೈಂಗಿಕ ಕಿರುಕುಳ ನೀಡಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಘಟನೆ ಸಂಬಂಧ ನೊಂದ ಗೃಹಿಣಿ ಪಾಂಡವಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ತಾಲೂಕಿನ ತಾಳಶಾಸನ ಗ್ರಾಮದ ಬಾವಪುರದ ಸತೀಶ್ ಎಂಬ ಕಾಮುಕ ಫೆ.10 ರಂದು ಅದೇ ಗ್ರಾಮದ ಗೃಹಿಣಿಯೊಬ್ಬರು ತಮ್ಮ ಮನೆಯ ಹಿಂಭಾಗ ಸ್ನಾನದ ಮನೆಯಲ್ಲಿ ಸ್ನಾನ ಮಾಡುತ್ತಿದ್ದ ವೇಳೆ ಗುದ್ದಲಿ ಕೇಳುವ ನೆಪದಲ್ಲಿ ಮನೆಯೊಳಗೆ ನುಗ್ಗಿ ಮಹಿಳೆಯ ಕೆನ್ನೆಗೆ ಮುತ್ತುಕೊಟ್ಟಿದ್ದಾನೆ. ಈ ವೇಳೆ ಮಹಿಳೆ ಜೋರಾಗಿ ಕಿರುಚಾಡಿಕೊಂಡ ತಕ್ಷಣ ಆಕೆಯನ್ನು ತಳ್ಳಿ ಸ್ಥಳದಿಂದ ಪರಾರಿಯಾಗಿದ್ದಾನೆ. ಅದಾದ ಮಾರನೆ ದಿನವೂ ಮತ್ತೆ ಮನೆಯ ಬಳಿ ಬಂದು ಮಹಿಳೆಯೊಂದಿಗೆ ಅಸಭ್ಯವಾಗಿ ಮಾತನಾಡಿದ್ದಾನೆ.

ಈ ಬಳಿಕ ಮಹಿಳೆ ಮನೆಯವರಿಗೆ ವಿಷಯ ಮುಟ್ಟಿಸಿ, ಫೆ.12ರಂದು ಪಾಂಡವಪುರ ಪೊಲೀಸ್ ಠಾಣೆಗೆ ಆಗಮಿಸಿ ದೌರ್ಜನ್ಯ ನಡೆಸಿರುವ ಕಾಮುಕ ಬಾವಪುರದ ಸತೀಶ್ ವಿರುದ್ಧ ದೂರು ನೀಡಿದ್ದಾಳೆ. ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗುತ್ತಿದ್ದಂತೆಯೇ ಕಾಮುಕ ಸತೀಶ್ ಊರಿಂದ ಪರಾರಿಯಾಗಿದ್ದಾನೆ. ಪೊಲೀಸರು ದೂರು ದಾಖಲಿಸಿಕೊಂಡು ಆರೋಪಿಯ ಹುಡುಕಾಟಕ್ಕಾಗಿ ಕ್ರಮಕೈಗೊಂಡಿದ್ದಾರೆ.

ಬಿಜೆಪಿ ಮಹಿಳಾ ಜಿಲ್ಲಾಧ್ಯಕ್ಷೆ ಭೇಟಿ: ವಿಷಯ ತಿಳಿದ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳ ನವೀನ್‌ಕುಮಾರ್, ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ ಅವರು ಗುರುವಾರ ತೆರಳಿ ಸಂತ್ರಸ್ತ ಮಹಿಳೆಗೆ ಸಾಂತ್ವನ ಹೇಳಿದರು. ಬಳಿಕ ಪೊಲೀಸ್ ಠಾಣೆಗೂ ಭೇಟಿ ಕೊಟ್ಟು ಕೃತ್ಯವೆಸಗಿರುವ ಆರೋಪಿ ಸತೀಶ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಬೇಕೆಂದು ಒತ್ತಾಯಿಸಿದರು.

ವಿದ್ಯುತ್ ಸ್ಪರ್ಶದಿಂದ ರೈತ ಸಾವು

ಪಾಂಡವಪುರ, ಫೆ13– ಜಮೀನಿನಲ್ಲಿ ಬೆಳೆಗೆ ನೀರು ಹಾಯಿಸುತ್ತಿದ್ದ ಸಂದರ್ಭದಲ್ಲಿ ವಿದ್ಯುತ್



ತಂತಿ ತಗುಲಿ ರೈತನೋರ್ವ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ತಾಲೂಕಿನ ಹಿರೇಮರಳಿ ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ.

ಹಿರೇಮರಳಿ ಗ್ರಾಮದ ಲೇಟ್. ಹೊನ್ನೇಗೌಡರ ಪುತ್ರ ಹೊನ್ನೇಗೌಡ(47) ಸಾವನ್ನಪ್ಪಿರುವ ರೈತ.

ಗ್ರಾಮದ ಹೊರವಲಯದಲ್ಲಿರುವ ತಮ್ಮ ಜಮೀನು ಎಲೆ ತೋಟಕ್ಕೆ ನೀರು ಹಾಯಿಸುತ್ತಿದ್ದ ಸಂದರ್ಭದಲ್ಲಿ ವಿದ್ಯುತ್ ತಂತಿ ಸ್ಕಿನ್ ಆಗಿ ವಿದ್ಯುತ್ ಸ್ಪರ್ಶವಾಗಿ ರೈತ ಹೊನ್ನೇಗೌಡ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅಕ್ಕಪಕ್ಕದ ಜಮೀನಿನವರು ಪೊಲೀಸರಿಗೆ ವಿಷಯ ಮುಟ್ಟಿಸಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಪಾಂಡವಪುರ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿ ಶವಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು. ಮೃತರಿಗೆ ಪತ್ನಿ ಗೀತಾ, ಒಂದು ಹೆಣ್ಣು ಹಾಗೂ ಗಂಡು ಮಗುವಿದೆ. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರೊ.ಸಿ.ಸುನೀತ ಅವರಿಗೆ ಡಾಕ್ಟರೇಟ್ ಪದವಿ

ಭಾರತೀನಗರ.ಫೆ13–ಇಲ್ಲಿನ ಜಿ.ಮಾದೇ



ಗೌಡ ತಾಂತ್ರಿಕ ಮಹಾವಿದ್ಯಾನಿಲಯದಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ ಸಿ.ಸುನೀತ ಅವರಿಗೆ ಪಿಹೆಚ್.ಡಿ ಪದವಿ ಲಭಿಸಿದೆ.

ಬಿಜಿಎಸ್ ತಾಂತ್ರಿಕ ಮಹಾವಿದ್ಯಾನಿಲಯದ ಡಾ.ಎಂ.ಬಿ.ಆನಂದರಾಜುರವರ ಮಾರ್ಗದರ್ಶದಲ್ಲಿ ಸಂಶೋಧನೆ ಕೈಗೊಂಡಿದ್ದರು. ಇವರು ನಿಟ್ಟೂರು ಗ್ರಾಮದ ಚಂದ್ರಪ್ಪ ಮತ್ತು ಪದ್ಮಮ್ಮ ದಂಪತಿ ಪುತ್ರಿ.

ವಿಜೃಂಭಣೆಯ ನಿಮಿಷಾಂಭ ದೇವಿ ರಥೋತ್ಸವ

ಕಾವೇರಿಯಲ್ಲಿ ಸಾವಿರಾರು ಭಕ್ತರಿಂದ ಮಾಘ ಸ್ನಾನ





ಸಾವಿರಾರು ಭಕ್ತರು ಕಾವೇರಿ ನದಿಯಲ್ಲಿ ಮಾಘ ಸ್ನಾನ ಮಾಡಿದರು ಮತ್ತೊಂದು ಚಿತ್ರದಲ್ಲಿ ರಥೋತ್ಸವವನ್ನು ಕಾಣಬಹುದುದು.

ಶ್ರೀರಂಗಪಟ್ಟಣ, ಫೆ.13– ಪಟ್ಟಣ ಸಮೀಪದ ಗಂಜಾಂನ ಪ್ರಸಿದ್ಧ ಶ್ರೀ ನಿಮಿಷಾಂಬ ದೇವಾಲಯದಲ್ಲಿ ಮಾಘ ಶುದ್ಧ ಹುಣ್ಣಿಮೆ ಅಂಗವಾಗಿ ನಡೆದ ರಥೋತ್ಸವಕ್ಕೆ ರಾಜ್ಯದ ವಿವಿಧೆಡೆಗಳಿಂದ ಸಾವಿರಾರು ಭಕ್ತರು ಆಗಮಿಸಿ, ಕಾವೇರಿ ನದಿಯಲ್ಲಿ ಮಾಘ ಸ್ನಾನ ಮಾಡಿ ವಿಶೇಷ ಪೂಜೆ ಸಲ್ಲಿಸಿದರು.

ದೇವಾಲಯದಲ್ಲಿ ಮಂಗಳವಾರ ಮಧ್ಯರಾತ್ರಿಯಿಂದಲೇ ದೇವಿಗೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದ್ದು, ದೇವಾಲಯದ ಪ್ರಧಾನ ಅರ್ಚಕ ಸೂರ್ಯನಾರಾಯಣ ಭಟ್ ನೇತೃತ್ವದಲ್ಲಿ ದೇವಿಗೆ ಪಂಚಾಮೃತ ಅಭಿಷೇಕ, ಪೂರ್ವಕ ಮಹಾಭಿಷೇಕ ಸೇವೆ, ಗಣಹೋಮ, ನಕ್ಷತ್ರ ಹೋಮ, ದುರ್ಗಾ ಹೋಮ ಹಾಗೂ ಸತ್ಯನಾರಾಯಣ ಪೂಜೆಗಳನ್ನು ನೆರವೇರಿಸಲಾಯಿತು.

ದೇವಾಲಯದ ಆವರಣದಲ್ಲಿ ವಿಶೇಷ ವಿದ್ಯುತ್ ದೀಪಾಲಂಕಾರ, ಗೋಪುರಕ್ಕೆ ಈ ಬಾರಿ ವಿಶೇಷವಾಗಿ ವಿದ್ಯುತ್ ದೀಪಗಳಿಂದ ಕಂಗೊಳಿಸುವಂತೆ ಮಾಡಲಾಯಿತು. ಭಕ್ತರು ಸ್ನಾನ ಮಾಡಲು ನದಿ ತೀರದಲ್ಲಿ ಬ್ಯಾರಿಕೇಡ್ ಅಳವಡಿಸಿ ನದಿ ಸುರಕ್ಷತೆ ಕಾಪಾಡಿಕೊಳ್ಳಲಾಯಿತು. ಇದರ ಜೊತೆ ಮಹಿಳೆಯರು ಸ್ನಾನ ಮಾಡಿ ಬಟ್ಟೆ ಬದಲಿಸಿಕೊಳ್ಳುವ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯೋಜನೆ ಮಾಡಲಾಗಿತ್ತು.

ಇದೇ ಮೊದಲ ಬಾರಿಗೆ ದೇವಾಲಯದ ವತಿಯಿಂದ ಮಾಘ ಶುದ್ಧ ಹುಣ್ಣಿಮೆಯ ಅಂಗವಾಗಿ ರಥೋತ್ಸವವನ್ನು ಆರಂಭಿಸಲಾಯಿತು. ರಥದಲ್ಲಿ ಶ್ರೀನಿಮಿಷಾಂಬ ದೇವಿಯ ಉತ್ಸವ ಮೂರ್ತಿಯನ್ನು ಪ್ರತಿಸ್ಥಾಪಿಸಿ, ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ ವಿಶೇಷ ಪೂಜೆಯೊಂದಿಗೆ ಜಿಲ್ಲಾಧಿಕಾರಿ ಡಾ. ಕುಮಾರ್, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ತಹಶೀಲ್ದಾರ್ ಪರುಶುರಾಮ್ ಸತ್ತಿಗೇರಿ, ದೇವಾಲಯದ ಎಒ ಸಿ.ಜಿ. ಕೃಷ್ಣ ನೇತೃತ್ವದಲ್ಲಿ ದೇವಾಲಯದ ಆವರಣದಲ್ಲಿ ಬೆಳಗಿನ 5–30ರ ಸಮಯದಲ್ಲಿ ರಥೋತ್ಸವವನ್ನು ಎಳೆಯುವ ಮೂಲಕ ಚಾಲನೆ ನೀಡಿದರು. ನಂತರ ಭಕ್ತರು ದೇವಾಲಯದ ಆವರಣದಲ್ಲಿ ಒಂದು ಸುತ್ತು ಮಂಗಳ ವಾದ್ಯದೊಂದಿಗೆ ರಥೋತ್ಸವದ ಮೆರವಣಿಗೆ ಮಾಡಿ ನಂತರ ಮೊದಲಿದ್ದ ಸ್ಥಳಕ್ಕೆ ತಂದು ರಥವನ್ನು ನಿಲ್ಲಿಸಲಾಯಿತು.

ದೇವಾಲಯದ ಆವರಣದ ಮುಂಭಾಗದಲ್ಲಿ ಸಾಂಸ್ಕೃತಿಕ ವೇದಿಕೆ ನಿರ್ಮಿಸಿ, ವಿವಿಧ ಸಾಂಸ್ಕೃತಿಕ ಕಲಾತಂಡಗಳಿಂದ ರಾತ್ರಿಯಿಡೀ ಭಕ್ತಿ ಸಂಗೀತ ಕಾರ್ಯಕ್ರಮಗಳು ಜರುಗಿದವು. ಈ ಕಾರ್ಯಕ್ರಮಗಳು ಇಡೀ ರಾತ್ರಿ ಆಗಮಿಸಿದ ಭಕ್ತರಿಗೆ ರಸದೌತಣ ನೀಡಿತು.

ದೇವಾಲಯಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರಿಗೆ ಮಂಗಳವಾರ ಮಧ್ಯರಾತ್ರಿಯಿಂದ ಬುಧವಾರ ಸಂಜೆವರೆಗೂ ನಿರಂತರವಾಗಿ ಪ್ರಸಾದ ರೂಪದಲ್ಲಿ ಅನ್ನಸಂತರ್ಪಣೆಯನ್ನು ಬೆಂಗಳೂರಿನ ದಾನಿಯೊಬ್ಬರು ನೆರವೇರಿಸಿದರು.

ಭಕ್ತರ ವಾಹನಗಳಿಗೆ ಅಲ್ಲಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಯಿತು. ಸರಾಗವಾಗಿ ವಾಹನ ಚಾಲನೆ ಮಾಡಲು ಪೊಲೀಸರು ಏಕಮುಖ ಸಂಚಾರ ನಿಯೋಜನೆ ಮಾಡಿ ಭಾರಿ ಬಿಗಿ ಭದ್ರತೆ ಒದಗಿಸಿದ್ದರು.

ಶಾಸಕ ರಮೇಶ ಬಂಡಿಸಿದ್ದೇಗೌಡ ದಂಪತಿಯೊಂದಿಗೆ ಆಗಮಿಸಿ ದೇವಿಗೆ ಪೂಜೆ ಸಲ್ಲಿಸಿದ್ದು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಇತರ ಜನಪ್ರತಿನಿಧಿಗಳು ಭಾಗವಹಿಸಿದ್ದರು.

ಮದ್ದೂರಿನಲ್ಲಿ ರೇಣುಕಾ ಎಲ್ಲಮ್ಮದೇವಿ ಜಾತ್ರಾ ಮಹೋತ್ಸವ ಯಶಸ್ವಿ

ಮದ್ದೂರು, ಫೆ.13– ಪಟ್ಟಣದ ಹೊಳೆ ಬೀದಿಯಲ್ಲಿರುವ, ಚಿಕ್ಕಸವದತ್ತಿ ಎಂದೇ ಪ್ರಸಿದ್ಧಿಯಾಗಿರುವ ಶ್ರೀ ರೇಣುಕಾ ಎಲ್ಲಮ್ಮ ದೇವಿಯವರ ಜಾತ್ರಾ ಮಹೋತ್ಸವವು ಬುಧವಾರ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನೆರವೇರಿತು.

ಮಹೋತ್ಸವ ಅಂಗವಾಗಿ ಬೆಳಿಗ್ಗೆ 26ನೇ ವರ್ಷದ ಮಹಾಚಂಡಿಕಾಯಾಗ ನಡೆಯಿತು. ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಹಾಗೂ ಮುತ್ತೈದೆಯರಿಂದ ತಂಬಿಟ್ಟಿನ ಆರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಮಧ್ಯಾಹ್ನ 1 ರಿಂದ 4 ರವರೆಗೆ ಸಹಸ್ರಾರು



ಭಕ್ತಾದಿಗಳಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. 4.15ರಿಂದ ಸಂಜೆ 5.30ರವರೆಗೆ ನಿಂಬೆಹಣ್ಣಿನ ದೀಪದ ಆರತಿ ಮತ್ತು ಉಯ್ಯಾಲೋತ್ಸವವನ್ನು ದೇವಸ್ಥಾನದ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ರಾತ್ರಿ 7ಕ್ಕೆ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭಿಸಿ ದೇವಿಯವರ ಮುತ್ತಿನ ಪಲ್ಲಕ್ಕಿ ಉತ್ಸವ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿದಾಗ ಭಕ್ತಾದಿಗಳು ಪೂಜೆ ಮಾಡಿ ಬರಮಾಡಿಕೊಂಡರು.

ಈ ವೇಳೆ ತಿರುಪತಿ ತಿರುಮಲ ದೇವಸ್ಥಾನದ ಮಂಜು ಬಾಲಾಜಿ ಅವರ ವಾದ್ಯಗೋಷ್ಠಿ, ಮಂಗಳೂರಿನ ಯಕ್ಷಗಾನ,. ಕೇರಳದ ಚಂಡೆಮೇಳ, ತಮಿಳುನಾಡಿನ ಬ್ಯಾಂಡ್ ಸೆಟ್ ಸೇರಿದಂತೆ ಮದ್ದೂರಮ್ಮ ನವರ ಪೂಜಾ ಕುಣಿತ, ದಂಡಿನಮಾರಮ್ಮ ನವರ ಪೂಜಾ ಕುಣಿತ, ಕಲಾವಿದರಿಂದ ತಮಟೆ, ನಗಾರಿ, ಜಾನಪದ ಮೇಳ ಸೇರಿ ದಂತೆ ಹಲವು ಪ್ರಾಕಾರಗಳು ಸಾಗಿ ಮೆರವಣಿಗೆಯಲ್ಲಿ ಸಾರ್ವಜನಿಕರ ಗಮನ ಸೆಳೆಯಿತು.

ಒಂದನೇ ಪುಟದಿಂದ

ಇದುವರೆಗೆ 16 ಜನರ ಸೆರೆ

ಕಳೆದ ಸೋಮವಾರ ರಾತ್ರಿ ಉದಯಗಿರಿ ಪೊಲೀಸ್ ಠಾಣೆ ಬಳಿ ನಡೆದ ಕಲ್ಲು ತೂರಾಟ ಪ್ರಕರಣದಲ್ಲಿ ಭಾಗಿಯಾಗಿರುವುದಾಗಿ ಒಪ್ಪಿಕೊಂಡಿ ದ್ದಾರೆ. ಇದೇ ವೇಳೆ ವೀಡಿಯೋ ಕ್ಯಾಮರಾ ಮತ್ತು ಫೋಟೋ ಕ್ಲಿಪ್ಪಿಂಗ್‌ಗಳನ್ನು ಆರೋಪಿಗಳಿಗೆ ತೋರಿಸಿ ದೃಢಪಡಿಸಿಕೊಂಡಿರುವ ತನಿಖಾ ಅಧಿಕಾರಿಗಳು ಇಂದು ಸಂಜೆವರೆಗೂ ಸುದೀರ್ಘ ವಿಚಾರಣೆ ನಡೆಸಿದರು. ಈಗಾಗಲೇ ಸುಮಾರು 50ಕ್ಕೂ ಹೆಚ್ಚು ಮಂದಿ ಶಂಕಿತರನ್ನು ಗುರುತಿಸಲಾಗಿದ್ದು, ಅಂದಿನ ಘಟನೆಯಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಜಮಾಯಿಸಿದ್ದರು. ಅವರಲ್ಲಿ ಬಹು ತೇಕರು ಠಾಣೆಗೆ

ಹಾಗೂ ಪೊಲೀಸ್ ವಾಹನಗಳಿಗೆ ಕಲ್ಲು ತೂರಿದ್ದರಿಂದ 7 ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಗಾಯಗೊಂಡು, ಡಿಸಿಪಿ ಎಂ.ಮುತ್ತುರಾಜು ಕಾರು ಸೇರಿದಂತೆ 5ಕ್ಕೂ ಹೆಚ್ಚು ವಾಹನಗಳು ಜಖಂಗೊಂಡು, ಕಿಟಿಕಿ ಗಾಜು ಪುಡಿಪುಡಿಯಾಗಿದ್ದವು. ಆ ಸಂದರ್ಭ ಸಿಸಿ ಕ್ಯಾಮರಾ ದೃಶ್ಯಾವಳಿ ಮೂಲಕ ಬಂಧಿತ ಆರೋಪಿಗಳು ಸ್ಥಳ ದಲ್ಲಿದ್ದರು ಎಂಬುದನ್ನು ಪೊಲೀಸರು ದೃಢಪಡಿಸಿದ್ದಾರೆ. ವಾಟ್ಸಾಪ್, ಮೊಬೈಲ್ ಸಂದೇಶ ಅಥವಾ ಇನ್ನಿತರ ಸಾಮಾಜಿಕ ಜಾಲತಾಣಗಳ ಮೂಲಕ ಸಂಪರ್ಕಿಸಿ, ಠಾಣೆ ಬಳಿಗೆ ಬರುವಂತೆ ಪ್ರೇರೇಪಣೆ ನೀಡಿದ್ದವರು ಸೇರಿದಂತೆ ಸಾವಿರಕ್ಕೂ ಹೆಚ್ಚು ಮಂದಿ ಈ ಕೃತ್ಯದಲ್ಲಿ ಪಾಲ್ಗೊಂಡಿದ್ದರು ಎಂದು ಪೊಲೀಸರು ದಾಖಲಿಸಿರುವ ಎಫ್‌ಐಆರ್ ನಲ್ಲಿ ನಮುದಿಸಲಾಗಿದೆ.

ಬೇರೆಡೆಯಿಂದ ಕಲ್ಲುಗಳನ್ನು ಸಂಗ್ರಹಿಸಿ, ಚೀಲಗಳಲ್ಲಿ ತುಂಬಿಕೊಂಡು ಬಂದು ಠಾಣೆ ಮೇಲೆ ತೂರಾಟ ಮಾಡಲು ಹಲವರು ಸಹಕರಿಸಿದ್ದಾರೆ ಎಂಬುದು ಸಿಸಿಟಿವಿ ಫುಟೇಜ್‌ಗಳ ಮೂಲಕ ದೃಢಪಟ್ಟಿದೆ. ವಿಡಿಯೋ ಕ್ಲಿಪ್ಪಿಂಗ್‌ಗಳು, ಸಿಸಿ ಕ್ಯಾಮರಾ ಫುಟೇಜ್‌ಗಳು ಮತ್ತು ಪೊಲೀಸರು ತೆಗೆದಿರುವ ಫೋಟೋಗಳ ಆಧಾರದ ಮೇಲೆ ಅಂದು ಭಾಗಿಯಲ್ಲಿದ್ದವ ರನ್ನು ಯಾರೆಂದು ಗುರುತಿಸುವ ಪ್ರಕ್ರಿಯೆಯಲ್ಲಿ ತೊಡಗಿರುವ ಪೊಲೀಸರು, ಸ್ಥಳೀಯ ಎನ್.ಆರ್., ಲಷ್ಕರ್, ನಜರ್‌ಬಾದ್ ಠಾಣೆಗಳ ಪೊಲೀ ಸರ ನೆರವಿನಿಂದ ತೀವ್ರ ಶೋಧ ಕಾರ್ಯ ನಡೆದಿದ್ದು, ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದಾರೆ.

ಅಂದಿನ ಕಲ್ಲು ತೂರಾಟ ಪ್ರಕರಣದಲ್ಲಿ ಭಾಗಿಯಾಗಿದ್ದವರ ಮಾಹಿತಿ ಯನ್ನು ಪಡೆದುಕೊಂಡಿರುವ ಪೊಲೀಸರು ಉದಯಗಿರಿ, ಗೌಸಿಯಾ ನಗರ, ಶಾಂತಿನಗರ, ಅಜೀಜ್‌ಸೇಠ್ ನಗರ, ರಾಜೀವ್ ನಗರ ಸೇರಿದಂತೆ ಸುತ್ತಲಿನ ಬಡಾವಣೆಯಲ್ಲಿ ವಾಸ ಮಾಡುವ ಶಂಕಿತರ ಮನೆಗಳಿಗೆ ತೆರಳಿದರೆ, ಕೆಲವರು ಮನೆಯಲ್ಲಿಲ್ಲ ಎಂದು, ಮತ್ತೆ ಕೆಲವರು ಕಳೆದ ಒಂದು ವಾರದಿಂದ ಮನೆಯಲ್ಲೇ ಇರಲಿಲ್ಲ ಎಂದು ಹೇಳಿ ಕಳುಹಿಸುತ್ತಿದ್ದಾರಲ್ಲದೆ, ಇನ್ನೂ ಕೆಲವರು ತಮ್ಮ ಮನೆಗಳಿಗೆ ಬೀಗ ಹಾಕಿಕೊಂಡು ಹೊರಗೆ ಹೋಗಿರುವುದು ಕಂಡುಬರುತ್ತಿದೆ.

ಒಟ್ಟಾರೆ ಉದಯಗಿರಿ ಠಾಣೆ ಮೇಲಿನ ಪ್ರಕರಣ ವನ್ನು ಗಂಭೀರವಾಗಿ ಪರಿಗಣಿಸಿರುವ ನಜರ್‌ಬಾದ್ ಮತ್ತು ಸಿಸಿಬಿ ಪೊಲೀಸರು ತಲೆಮರೆಸಿ ಕೊಂಡಿರುವ ಆರೋಪಿಗಳ ಪತ್ತೆಗಾಗಿ ತೀವ್ರ ಶೋಧ ನಡೆಸುತ್ತಿದ್ದಾರೆ. ಅದಕ್ಕೆ ತಂತ್ರಜ್ಞಾನವನ್ನು ಬಳಸಿಕೊಂಡು ಸಮಗ್ರ ತನಿಖೆ ನಡೆಸುತ್ತಿದ್ದಾರೆ.

ಏನೂ ಪಾತ್ರವಿಲ್ಲ

ಪ್ರಶ್ನೆಗಳಿಗೂ ತನಿಖಾಧಿಕಾರಿ ತಮ್ಮ ವರದಿಯಲ್ಲಿ ಉತ್ತರಿಸಿದ್ದಾರೆ. ಮುಡಾಗೆ ಸಂಬಂಧಿಸಿದ ಲೋಕಾ ಯುಕ್ತ ತನಿಖಾ ವರದಿಯಲ್ಲಿ ಒಟ್ಟು 550 ಪುಟ ಗಳಿದ್ದು, 5 ಭಾಗಗಳಾಗಿ ವಿಂಗಡಿಸಲಾಗಿದೆ. ದೇವರಾಜು ಅವರಿಗೆ ಜಮೀನು ಹೇಗೆ ದೊರೆಯಿತು, ಡಿನೋಟಿಫಿಕೇಷನ್, ಭೂ ಪರಿವರ್ತನೆ, ಮುಖ್ಯಮಂತ್ರಿ ಪತ್ನಿ ಪಾರ್ವತಿ ಅವರ ಜಮೀನು ಸ್ವಾಧೀನ ಹಾಗೂ ಬದಲಿ ನಿವೇಶನ ಹಂಚಿಕೆ ಕುರಿತು ವಿವರಗಳನ್ನು ದಾಖಲೆ ಸಹಿತ ತಿಳಿಸಲಾಗಿದೆ. ಭೂಸ್ವಾಧೀನಕ್ಕೆ ಬದಲಿಗೆ ನೀಡಿದ ನಿವೇಶನಗಳನ್ನು ಹಿಂತಿರುಗಿಸಿದ್ದು, ನಂತರದ ಬೆಳವಣಿಗೆಗಳನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮುಖ್ಯಮಂತ್ರಿ ಕುಟುಂಬದ ಹೆಸರಿನ ಭೂ ದಾಖಲೆಗಳು, 100ಕ್ಕೂ ಹೆಚ್ಚು ಅಧಿಕಾರಿಗಳಿಂದ ಕಲೆ ಹಾಕಿದ ಮಾಹಿತಿ ಹಾಗೂ ನಡೆಸಿದ ವಿಚಾರಣೆ ತನಿಖೆ ಒಳಗೊಂಡಿದೆ. ಅಲ್ಲದೆ, ಮುಡಾದ ಮಾಜಿ ಆಯುಕ್ತರು, ಮಾಜಿ ತಹಶೀಲ್ದಾರ್ ಹಾಗೂ ಅಧಿಕಾರಿ ಗಳ ಹೇಳಿಕೆ, ಆರೋಪಿಗಳ ಹೇಳಿಕೆ ಕುರಿತು ನಮೂದಿಸಲಾಗಿದೆ. ಐಜಿಪಿ ಡಾ.ಎ. ಸುಬ್ರಹ್ಮಣ್ಯೇಶ್ವರರಾವ್ ಹಾಗೂ ಎಡಿಜಿಪಿ ಮನೀಷ್ ಕರ್ಬಿಕರ್ ಲೋಕಾಯುಕ್ತ ತನಿಖಾ ವರದಿ ಪರಿಶೀಲಿಸುತ್ತಿದ್ದು, ಮುಂದಿನ ಕ್ರಮ ಕುರಿತು ಅಧಿಕಾರಿಗಳು ನೀಡುವ ಅಭಿಪ್ರಾಯ ಪಡೆದು ನ್ಯಾಯಾಲಯಕ್ಕೆ ಒಂದು ವಾರದಲ್ಲಿ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದಾಳಿಗೆ ಮೂವರು ಬಲಿ

ಕುರುಹು ಕಂಡು ಬಂದಿದೆ ಎಂದು ಗ್ರಾಮಸ್ಥರು ಆರೋಪಿಸಿ, ಪ್ರತಿಭಟನೆ ನಡೆಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಲಯ ಅರಣ್ಯಾಧಿಕಾರಿ ಬಿ.ಜಿ.ಯತೀಶ್, ಡಿಎಫ್‌ಓ ಸೌರಬ್ ಕುಮಾರ್, ಸಿಸಿಎಫ್ ಏಳುಕುಂಡಲ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಹಾಸನ ಜಿಲ್ಲಾಧಿಕಾರಿ ಸತ್ಯಭಾಮ ಪರಿಶೀಲಿಸಿ ಮೃತರ ಕುಟುಂಬದವರಿಗೆ 15 ಲಕ್ಷ ರೂ. ಪರಿಹಾರ ಧನದ ಚೆಕ್ ವಿತರಿಸಿದರು.

ಸರಗೂರು: ಕಾಡಾನೆ ದಾಳಿಗೆ ಯುವಕ ಬಲಿಯಾಗಿರುವ ಘಟನೆ ತಾಲೂಕಿನ ಬಂಡೀ ಪುರ ಅರಣ್ಯ ಪ್ರದೇಶದ ಎನ್.ಬೇಗೂರು ಅರಣ್ಯ ವಲಯ ವ್ಯಾಪ್ತಿಯ ಕಂದೇಗಾಲ ಸಮೀಪದ ಗದ್ದೆಹಳ್ಳ ಗ್ರಾಮದಲ್ಲಿ ಗುರುವಾರ ಬೆಳಗ್ಗೆ ನಡೆದಿದೆ. ಗ್ರಾಮದ ನಿವಾಸಿ ಹುಚ್ಚನಾಯಕ ಅವರ ಪುತ್ರ ಅವಿನಾಶ್(23) ಸಾವನ್ನಪ್ಪಿದವರು. ಗುರುವಾರ ಮುಂಜಾನೆ ಜಮೀನಿನಲ್ಲಿ ಬೆಳಗ್ಗೆ ನೀರು ಹಾಯಿಸುತ್ತಿದ್ದ ವೇಳೆ ಕಾಡಾನೆ ಏಕಾಏಕಿ ಅವಿನಾಶ್ ಮೇಲೆ ದಾಳಿ ನಡೆಸಿದ್ದರಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇದನ್ನು ಗಮನಿಸಿದ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತರು ಕೂಗಿಕೊಂಡಿದ್ದರಿಂದ ಹೆದರಿದ ಕಾಡಾನೆ ಮತ್ತೆ ಅರಣ್ಯಕ್ಕೆ ಓಡಿ ಹೋಗಿದ್ದು, ಬಳಿಕ ರೈತರು ಎನ್.ಬೇಗೂರು ವಲಯ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ಬಳಿಕ ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಪ್ರತಿಭಟನೆ: ಕಾಡಾನೆ ದಾಳಿಯಿಂದ ಅವಿನಾಶ್ ಸಾವನ್ನಪ್ಪುತ್ತಿದ್ದಂತೆಯೇ ಸ್ಥಳದಲ್ಲಿ ಜಮಾಯಿಸಿದ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ಕಾಡಂಚಿನ ಗ್ರಾಮಗಳ ರೈತರಿಗೆ ಸೂಕ್ತ ರಕ್ಷಣೆ ಇಲ್ಲದಾಗಿದೆ. ಜಮೀನಿನಲ್ಲಿ ಜೀವ ಹಿಡಿದುಕೊಂಡು ಕೆಲಸ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಹೀಗಾಗಿ ಕಾಡು ಪ್ರಾಣಿಗಳು ರೈತರ ಜಮೀನಿಗೆ ಬಾರದಂತೆ ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ವಹಿಸಿ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಗ್ರಾಮಸ್ಥರನ್ನು ಸಮಾಧಾನ ಪಡಿಸಿ ಸಿಎಫ್ ಪ್ರಭಾಕರನ್, ಎಸಿಎಫ್ ಸತೀಶ್ ಅವರೊಂದಿಗೆ ಮಾತನಾಡಿ ಕಾಡಂಚಿನ ಗ್ರಾಮಸ್ಥರಿಗೆ ರಕ್ಷಣೆ ನೀಡಬೇಕು. ಅಲ್ಲದೇ ರೈತರ ಬೆಳೆಗಳ ರಕ್ಷಣೆಗೆ ಮುಂದಾಗಬೇಕು. ಅವಿನಾಶ್ ಕುಟುಂಬಕ್ಕೆ ಅರಣ್ಯ ಇಲಾಖೆಯಿಂದ ಸೂಕ್ತ ಪರಿಹಾರದ ಜೊತೆಗೆ ಕುಟುಂಬ ಸದಸ್ಯರೊಬ್ಬರಿಗೆ ಕೆಲಸ ನೀಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರೈತ ಕಲ್ಯಾಣ ಸಂಘ ಅಧ್ಯಕ್ಷ ಭೂಮಿ ಪುತ್ರ ಚಂದನ್‌ಗೌಡ ಮಾತನಾಡಿದರು. ಇದೇ ವೇಳೆ ಅರಣ್ಯ ಇಲಾಖೆ ವತಿಯಿಂದ ಮೃತ ಅವಿನಾಶ್ ಕುಟುಂಬಕ್ಕೆ 15 ಲಕ್ಷ ರೂ.ಗಳ ಪರಿಹಾರದ ಚೆಕ್ ವಿತರಿಸಲಾಯಿತು. 5 ವರ್ಷಗಳವರೆಗೆ ಮಾಸಿಕ 4 ಸಾವಿರ ರೂ. ಹಾಗೂ ಕುಟುಂಬ ಸದಸ್ಯರೊಬ್ಬರಿಗೆ ಮೇಲಧಿಕಾರಿಗಳ ಗಮನಕ್ಕೆ ತಂದು ಕೆಲಸ ನೀಡುವ ಭರವಸೆ ನೀಡಿದರು. ನಂತರ ಶವವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ಕುಟುಂಬದವರಿಗೆ ಹಸ್ತಾಂತರಿಸಿದರು.

ಈ ವೇಳೆ ತಹಸೀಲ್ದಾರ್ ಮೋಹನಕುಮಾರಿ, ಸರಗೂರು ಠಾಣೆ ಸಿಪಿಐ ಪ್ರಸನ್ನ ಕುಮಾರ್, ಕೋಟೆ ಠಾಣೆಯ ಶಬ್ಬೀರ್ ಹುಸೇನ್, ಸಂತೋಷ್ ಕಶ್ಯಪ್, ಲೋಲಾಕ್ಷಿ, ಅರಕ್ಷಕ ಉಪ ನಿರೀಕ್ಷಕರಾದ ಆರ್.ಕಿರಣ್, ಗೋಪಾಲ್, ಚಂದ್ರಹಾಸ ನಾಯಕ್, ಆರ್‌ಎಫ್ ಮಂಜುನಾಥ್, ಅಮೃತೇಶ್, ಹನುಮಂತರಾಜ್, ಜಿಪಂ ಮಾಜಿ ಸದಸ್ಯ ಚಿಕ್ಕವೀರ ನಾಯಕ, ಪಿ.ರವಿ, ಬಸವರಾಜು, ಹೆಗ್ಗನೂರು ಗ್ರಾಪಂ ಅಧ್ಯಕ್ಷ ಸುಧೀರ್, ಮುಖಂಡರಾದ ರಾಜನಾಯಕ, ನಾಗರಾಜು, ಮಹದೇವನಾಯಕ, ಅಂಕಪ್ಪನಾಯಕ, ದಾಸನಾಯಕ, ಮಹೇಂದ್ರ, ರೈತ ಕಲ್ಯಾಣ ಸಂಘ ಜಿಲ್ಲಾ ಉಪಾಧ್ಯಕ್ಷ ಎಸ್.ಬಿ.ಸಮಂತ್, ತಾಲೂಕು ಅಧ್ಯಕ್ಷ ಲೋಕೇಶ್, ಕೋಟೆ ಅಧ್ಯಕ್ಷ ಉಮೇಶ್, ಸತೀಶ್, ಮಣಿ, ಮಂಚಯ್ಯ, ಶ್ರೀನಿವಾಸ್, ಮಹೇಶ್, ಪಟೇಲ್, ರಾಜನಾಯಕ, ಬಸವರಾಜು ಸೇರಿದಂತೆ ಗ್ರಾಮಸ್ಥರಿದ್ದರು.

ಬಾಳಾಜಿಯಲ್ಲಿ ಕಾರ್ಮಿಕ ಮಹಿಳೆ ಸಾವು: ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಮಹಿಳೆ ಕಾಡಾನೆ ದಾಳಿಯಿಂದ ಮೃತಪಟ್ಟಿರುವ ಘಟನೆ ಗೋಣಿಕೊಪ್ಪದ ಮಾಯಮುಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಳಾಜಿ ಗ್ರಾಮದಲ್ಲಿ ಗುರುವಾರ ನಡೆದಿದೆ. ಬಾಳಾಜಿ ಗ್ರಾಮದ ನಿವಾಸಿ ಜಾನಕಿ (52) ಮೃತ ಕಾರ್ಮಿಕ ಮಹಿಳೆ. ಈಕೆ ಗ್ರಾಮದ ಮನೆಯಪಂಡ ಕಾರ್ಯಪ್ಪ ಅವರ ಕಾಫಿ ತೋಟದಲ್ಲಿ ಸಂಜೆ 4 ಗಂಟೆಯಲ್ಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಕಾಡಾನೆ ದಾಳಿ ನಡೆಸಿದೆ. ಇದರಿಂದ ತಲೆಯ ಭಾಗಕ್ಕೆ ಗಂಭೀರವಾಗಿ ಪೆಟ್ಟಾಗಿ ಜಾನಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ತಿತಿಮತಿ ಎಸಿಎಫ್ ಗೋಪಾಲ್ ತೆರಳಿ ಪರಿಶೀಲನೆ ನಡೆಸಿದರು. ನಂತರ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ಕುಟುಂಬಸ್ಥರಿಗೆ ನೀಡಿದರು.

ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಲ್ಲಿ ಸಭೆ

ಸೋಮವಾರ(ಫೆ.10) ಸಂಜೆ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದು ಮೊಬೈಲ್‌ನ ವಾಟ್ಸಾಪ್ ಸ್ಟೇಟಸ್‌ನಲ್ಲಿದ್ದ ಪ್ರಚೋದನಕಾರಿ, ತಪ್ಪು ತಿಳುವಳಿಕೆ ಮತ್ತು ದುರದೃಷ್ಟಕರ ಚಿತ್ರವನ್ನು ಕೆಲವರು ಪೊಲೀಸರಿಗೆ ತೋರಿಸಿದ್ದಾರೆ. ಅದು ಫೇಸ್‌ಬುಕ್‌ನಿಂದ ಬಂದಿದ್ದೆಯಾ, ಎಲ್ಲಿಂದ ಬಂತು, ಯಾರು ಎಡಿಟ್ ಮಾಡಿದರು ಎಂಬುದನ್ನು ಸಿಸಿಬಿ ಪೊಲೀಸರು ತನಿಖೆ ನಡೆಸುತ್ತಿದ್ದು, ವಾಟ್ಸಾಪ್ ಸ್ಟೇಟಸ್‌ಗೆ ಹಾಕಿಕೊಂಡಿದವರನ್ನು ಈಗಾಗಲೇ ವಶಕ್ಕೆ ಪಡೆದು, ನ್ಯಾಯಾಂಗ ಬಂಧಕ್ಕೆ ಒಪ್ಪಿಸಲಾಗಿದೆ ಎಂದರು.

ಅವಹೇಳನಕಾರಿ ಪೋಸ್ಟರ್ ವೈರಲ್ ಆಗುತ್ತಿದ್ದಂತೆ ಒಂದು ಗುಂಪು ಠಾಣೆಗೆ ಬಂದು ಅರ್ಜಿ ಬರೆದುಕೊಟ್ಟರೆ, ಮತ್ತೊಂದು ಗುಂಪು ಕಂಪ್ಲೇಂಟ್ ಕೊಡಲು ಬಂದಿತ್ತು. ಅದರ ಜೊತೆಗೆ ಇನ್ನೊಂದು ಗುಂಪು ನಮ್ಮಲ್ಲಿ ಹೈಕೋರ್ಟ್, ಸುಪ್ರೀಂಕೋರ್ಟ್ ಜಡ್ಜ್ ಇದ್ದು, ಯಾವ ರೀತಿಯಲ್ಲಿ ಪ್ರಕರಣ ದಾಖಲಿಸಬೇಕು ಎಂದಿದ್ದಾರೆಯೇ ಹೊರತು ಯಾವ ಗುಂಪಿನವರು ಕಂಪ್ಲೇಂಟ್ ನೀಡಿಲ್ಲ. ಅದಕ್ಕೂ ಮೊದಲೇ ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸರು, ಸುಮೋಟೋ ಪ್ರಕರಣ ದಾಖಲಿಸಿ ಅವಹೇಳನಕಾರಿ ಪೋಸ್ಟರ್ ಅನ್ನು ವಾಟ್ಸಾಪ್ ಸ್ಟೇಟಸ್‌ಗೆ ಹಾಕಿಕೊಂಡಿದ್ದವರನ್ನು ವಶಕ್ಕೆ ಪಡೆದಿದ್ದರು. ಪೊಲೀಸರ ನಿರ್ಧಾರ ಈ ಭಾಗದ ಹಿರಿಯ ಮುಖಂಡರಿಗೂ ಸಮಾಧಾನ ತಂದಿತ್ತು. ಆದರೆ, ಕೆಲವರು ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ ಎಂದರು.

ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ತಿರುಗುವಷ್ಟರಲ್ಲಿ ಪೊಲೀಸರು ಮಧ್ಯ ಪ್ರವೇಶ ಮಾಡಿ ಟಿಯರ್ ಗ್ಯಾಸ್ ಬಳಸಿ, ಜನರನ್ನು ಚದುರಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಠಾಣೆ ಮೇಲೆ ಕಲ್ಲು ತೂರಾಟ ನಡೆಸಿದವರನ್ನು ಸಿಸಿಟಿವಿ ದೃಶ್ಯಾವಳಿ ಹಾಗೂ ಇನ್ನಿತರೆ ತನಿಖಾ ವಿಧಾನಗಳನ್ನು ಬಳಸಿ ಬಂಧಿಸುವ ಪ್ರಕ್ರಿಯೆ ನಡೆಯುತ್ತಿದ್ದು, ಈಗಾಗಲೇ ಕೆಲವರನ್ನು ಬಂಧಿಸಲಾಗಿದೆ. ಆದರೆ, ಈ ಪ್ರಕರಣದಲ್ಲಿ ಭಾಗಿಯಾಗದ ಮುಗ್ದರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅಮಾಯಕರನ್ನು ಬಂಧಿಸಿಲ್ಲ. ಬಂಧಿಸುವ ಆಸಕ್ತಿಯೂ ಪೊಲೀಸರಿಗೆ ಇಲ್ಲ ಎಂದು ತಿಳಿಸಿದರು.

ಶಾಂತಿ ಕಾಪಾಡಲು ಮನವಿ: ಸಾರ್ವಜನಿಕರು ಕಾನೂನನ್ನು ಗೌರವಿಸಬೇಕು. ನನ್ನನ್ನು ಸೇರಿ ಪ್ರತಿಯೊಬ್ಬರು ಕಾನೂನಿನ ಚೌಕಟ್ಟಿನಲ್ಲಿ ಜೀವನ ನಡೆಸಬೇಕು. ಕಾನೂನು ಉಲ್ಲಂಘನೆ ಮಾಡಬಾರದು. ಸುಳ್ಳು ಸುದ್ದಿಗಳನ್ನು ಸೃಷ್ಟಿಸಬಾರದು. ಸೃಷ್ಟಿಸುವುದಕ್ಕೆ ಅವಕಾಶವನ್ನು ಕೊಡಬಾರದು. ಯುವಕರು ಸೇರಿದಂತೆ ಎಲ್ಲರೂ ಶಾಂತಿ ಕಾಪಾಡಬೇಕು. ಕಾನೂನು ಭಂಗ ಉಂಟು ಮಾಡುವ ಪ್ರಯತ್ನವನ್ನು ಯಾರು ಮಾಡಬಾರದು ಎಂದು ಮನವಿ ಮಾಡಿದರು. ಹಾಗೆಯೇ ಈ ಪ್ರಕರಣದಲ್ಲಿ ಆರ್‌ಎಸ್‌ಎಸ್ ಕೈವಾಡವಿದೆ ಎಂದು ಹೇಳಲಾಗುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ತನಿಖೆಯಿಂದ ಸತ್ಯಾಂಶ ತಿಳಿಯಲಿದೆ. ಆರ್‌ಎಸ್‌ಎಸ್ ಕೈವಾಡ ಇದೆ ಎಂಬುದರ ಕುರಿತು ಗೊತ್ತಿಲ್ಲ. ತನಿಖೆಯಿಂದ ಎಲ್ಲವೂ ತಿಳಿಯಲಿದೆ ಎಂದರು.

ಹೆಚ್ಚುವರಿ ಪೊಲೀಸ್ ಠಾಣೆ...!: ಉದಯಗಿರಿ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಹೆಚ್ಚುವರಿ ಪೊಲೀಸ್ ಠಾಣೆಗೆ ಒತ್ತಾಯ ಕೇಳಿ ಬರುತ್ತಿದೆ ಎಂಬ ಪ್ರಶ್ನೆಗೆ, ಈ ಭಾಗದ ಸಾರ್ವಜನಿಕರ ಅಭಿಪ್ರಾಯ ಹಾಗೂ ಕ್ರೈಂ ರೇಟ್ ನೋಡಿಕೊಂಡು ಹೆಚ್ಚುವರಿ ಪೊಲೀಸ್ ಠಾಣೆಯ ಅಗತ್ಯತೆ ಬಗ್ಗೆ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದರು. ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮತ್ತಿತರರಿದ್ದರು.

ಬಿಜೆಪಿಯವರಿಗೆ, ರೌಡಿ ಶೀಟರ್‌ಗೆ ರಾಜಾತೀಥ್ಯ...

ರಾಜ್ಯದಲ್ಲಿ ನಮ್ಮದೇ(ಕಾಂಗ್ರೆಸ್) ಸರ್ಕಾರ ಅಧಿಕಾರದಲ್ಲಿದ್ದರು, ಪೊಲೀಸರು ಬಿಜೆಪಿಯವರಿಗೆ, ರೌಡಿ ಶೀಟರ್‌ಗೆ ರಾಜಾತೀಥ್ಯ ನೀಡುತ್ತಿದ್ದಾರೆ ಎಂಬ ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಈ ಪ್ರಕರಣ ಸಂಬಂಧ ಪೊಲೀಸರು ತೆಗೆದುಕೊಂಡಿರುವ ಕ್ರಮ ಮೆಚ್ಚುವಂತಹದ್ದು. ಬಿಜೆಪಿಯವರ ಜೊತೆಗೆ ರೌಡಿ ಶೀಟರ್ ಇದ್ದಂತೆ, ನನ್ನ ಪಕ್ಕದಲ್ಲಿ ಕೊಲೆಗಾರನೇ ಬಂದು ನಿಂತುಕೊಳ್ಳಬಹುದು. ನನಗೆ ಆತ ಕೊಲೆಗಾರ ಎಂಬುದು ಗೊತ್ತಾಗುತ್ತಾ ಎಂದು ಉತ್ತರಿಸಿದರು.

ಸಿಎಂ ಕುರ್ಚಿ ಮೇಲೆ ಸಿದ್ದರಾಮಯ್ಯ ಭದ್ರವಾಗಿ ಕೂತಿದ್ದಾರೆ...!

ಮೈಸೂರು, ಫೆ.13(ಎಂಕೆ)– ಸಿಎಂ ಖುರ್ಚಿ ಮೇಲೆ ಸಿದ್ದರಾಮಯ್ಯ ಅವರೇ ಭದ್ರವಾಗಿ ಕೂತಿದ್ದು, ಬದಲಾವಣೆ ಚರ್ಚೆಯೇ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು. ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಗೆ ಗುರುವಾರ ಭೇಟಿ ನೀಡಿದ ವೇಳೆ, ಸಚಿವ ಸತೀಶ್ ಜಾರಕಿಹೋಳಿ ಅವರ ಮನೆ ಭೇಟಿ ಕುರಿತು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸತೀಶ್ ಜಾರಕಿಹೋಳಿ ಅವರ ಮನೆ ಮತ್ತು ನಮ್ಮ ಮನೆ ಅಕ್ಕ–ಪಕ್ಕದಲ್ಲಿದ್ದು, ಕ್ಯಾಬಿನೆಟ್ ಸಬ್ ಕಮಿಟ್ ಮಿಟಿಂಗ್‌ಗೆ ಜೊತೆಗೆ ಹೋಗಿದ್ದೆವು ಅಷ್ಟೇ. ಸಿಎಂ ಖುರ್ಚಿಯ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ಸಿಎಂ ಖುರ್ಚಿ ಮೇಲೆ ಭದ್ರವಾಗಿ ಸಿದ್ದರಾಮಯ್ಯ ಅವರೇ ಕೂತು ಬಿಟ್ಟಿದ್ದಾರೆ. ಇನ್ನೂ ಬದಲಾವಣೆ ಚರ್ಚೆಯೇ ಇಲ್ಲ ಎಂದು ಪುನರುಚ್ಚರಿಸಿದರು.

10 ವರ್ಷ ಜೈಲು; 5 ಲಕ್ಷ ದಂಡ

ಆಧ್ಯಾದೇಶ–2025 ಫೆಬ್ರವರಿ 12ರಿಂದಲೇ ಜಾರಿಗೆ ಬಂದಿದೆ. ಇದರಿಂದ ವಿಶೇಷ ವಾಗಿ ದುರ್ಬಲರು, ಮಹಿಳೆಯರು ಮತ್ತು ರೈತರು, ಮಹಿಳಾ ಸ್ವಸಹಾಯ ಸಂಘ ಗಳಿಗೆ ಸಾಲ ಮರುಪಾವತಿ ವಿಷಯದಲ್ಲಿ ಕಿರುಕುಳ ತಪ್ಪಿಸಲು ಸಹಾಯಕವಾಗಿರುತ್ತದೆ.

ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಾಲ ನೀಡುವ ವೇಳೆ ಯಾವುದೇ ಭದ್ರತೆ ಪಡೆಯುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಗ್ರಾಹಕರಿಗೆ ವಿಧಿಸುವ ಬಡ್ಡಿ ದರದ ಬಗ್ಗೆ ಪಾರದರ್ಶಕವಾಗಿ ಸಾಲಗಾರರಿಗೆ ಲಿಖಿತ ರೂಪದಲ್ಲಿ ತಿಳಿಸುವಂತೆ ಆದೇಶಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ನೋಂದಾಯಿತ ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ಅಂದಾಜು 60,000 ಕೋಟಿ ರೂ. ಸಾಲವನ್ನು ಸುಮಾರು 1.09 ಕೋಟಿ ಸಾಲಗಾರರು ಪಡೆದಿದ್ದು, ನೋಂದಣಿಯಾಗದ ಸಂಸ್ಥೆಗಳಿಂದ ಸಾಲ ಪಡೆದವರ ಪೂರ್ಣ ವಿವರ ಇಲ್ಲವಾದರೂ, ಅಂದಾಜು 40,000 ಕೋಟಿ ರೂ.ವರೆಗೆ ಸಾಲ ಪಡೆದಿರಬಹುದು ಎಂದು ಅಂದಾಜಿಸಲಾಗಿದೆ. ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಆಯಾ ಜಿಲ್ಲಾಧಿ ಕಾರಿಗಳಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ, ಸದರಿ ಸಂಸ್ಥೆಗಳು ತಾವು ವಿಧಿಸುವ ಬಡ್ಡಿ ದರ, ಸಾಲಗಾರರ ಮಾಹಿತಿ, ಸುಸ್ತಿ ಸಾಲಗಳ ವಿವರ ಮುಂತಾದವುಗಳನ್ನು ಜಿಲ್ಲಾಧಿಕಾರಿಗೆ ನೀಡಬೇಕಾಗಿರುತ್ತದೆ.

ಡಿಸಿಗೆ ಮಾಹಿತಿ ನೀಡದೇ ವ್ಯವಹರಿಸಿದರೆ ಶಿಕ್ಷೆ: ಜಿಲ್ಲಾಧಿಕಾರಿಗಳಿಗೆ ತ್ರೈಮಾಸಿಕ ಮತ್ತು ವಾರ್ಷಿಕ ವ್ಯವ ಹಾರದ ವಿವರಗಳನ್ನು ಈ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಸಲ್ಲಿಸಬೇಕು, ಮಾಹಿತಿ ಸಲ್ಲಿಸದಿದ್ದಲ್ಲಿ, 6 ತಿಂಗಳ ಕಾರಾ ಗೃಹ ವಾಸ ಅಥವಾ 10,000 ರೂ.ಗಳ ವರೆಗೆ ವಿಸ್ತರಿಸಬಹುದಾದ ದಂಡ (ಜುಲ್ಮಾನೆ) ಅಥವಾ ಅವೆರಡರಿಂದಲೂ ದಂಡಿತರಾಗುತ್ತಾರೆ.

35 ಮಂದಿಗೆ ಗಾಯ

ಜಿಲ್ಲಾ ಸಾರಿಗೆ ಅಧಿ ಕಾರಿಗಳಿಗೆ, ಜಿಲ್ಲಾಧಿಕಾರಿಗಳ ಮೂಲಕ ಸೂಚನೆ ನೀಡಲಾಗಿದೆ. ಗಾಯಾಳುಗಳಿಗೆ ಸೂಕ್ತ ಪರಿಹಾರವನ್ನು ರಾಜ್ಯ ಸರ್ಕಾರ ಇಲ್ಲವೇ ಸಾರಿಗೆ ಇಲಾಖೆಯಿಂದ ಕೊಡಿ ಸಲು ಸೂಕ್ತ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ತಹಸೀಲ್ದಾರ್ ಡಾ. ಎಸ್.ಯು.ಅಶೋಕ್ ಮಾತನಾಡಿ, ಅಪಘಾತವಾದ ಬಸ್ಸಿನಲ್ಲಿ ಸುಮಾರು 52 ಮಂದಿ ಪ್ರಯಾಣಿಸುತ್ತಿದ್ದರು. ಈ ಪೈಕಿ ಸುಮಾರು 35 ಮಂದಿಗೆ ಗಾಯ ಗಳಾಗಿವೆ. ಇದರಲ್ಲಿ 10ಕ್ಕೂ ಹೆಚ್ಚು ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ 16 ಮಂದಿಗೆ ಗಂಭೀರವಾದ ಗಾಯಗಳಾಗಿವೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಸಾರಿಗೆ ನಿಯಂತ್ರಣಾಧಿಕಾರಿ ನಾಗರಾಜು, ಕೆ.ಆರ್.ಪೇಟೆ ಡಿಪೋ ಮ್ಯಾನೇಜರ್ ರವಿ, ಕಸಬಾ ರಾಜಸ್ವ ನಿರೀಕ್ಷಕ ಜ್ಞಾನೇಶ್, ಗ್ರಾಮ ಆಡಳಿತ ಅಧಿಕಾರಿ ಜಗದೀಶ್, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್, ತಾಲೂಕು ಕರವೇ ಸ್ವಾಭಿಮಾನಿ ಸೇನೆಯ ತಾಲೂಕು ಅಧ್ಯಕ್ಷ ಸಮೀರ್, ಉಪಾಧ್ಯಕ್ಷ ಅಮ್ಜದ್ ಪಾಷಾ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಘಟನೆ ಸಂಬಂಧ ಪ್ರಕರಣ ದಾಖಲಿಸಿರುವ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಆನಂದೇಗೌಡ, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬೆಂಗಳೂರು ಲಾಲ್‌ಬಾಗ್‌ನಲ್ಲಿ 250 ಅಡಿಯ ಡಾ.ಅಂಬೇಡ್ಕರ್ ಪ್ರತಿಮೆ ಪ್ರತಿಷ್ಠಾಪನೆಗೆ ಆಗ್ರಹ



ಮೈಸೂರು, ಫೆ.13(ಎಂಟಿವೈ)– ತೆಲಂಗಾಣದ ಮಾದರಿಯಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ 250 ಅಡಿ ಎತ್ತರದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಸ್ಥಾಪಿಸಬೇಕೆಂದು ಕರ್ನಾಟಕ ಭೀಮ್‌ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಕ್ಕೆ ಸಂವಿಧಾನ ಕೊಡುಗೆ ನೀಡಿದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 125 ಅಡಿ ಪ್ರತಿಮೆಯನ್ನು ತೆಲಂಗಾಣದ ಹಿಂದಿನ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್ ನೇತೃತ್ವದ ಸರ್ಕಾರ 2023ರಲ್ಲಿ ಪ್ರತಿಷ್ಠಾಪಿಸಿದೆ. 2024ರಲ್ಲಿ ಆಂಧ್ರಪ್ರದೇಶದ ವಿಜಯವಾಡದಲ್ಲಿ ಹಿಂದಿನ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರ 206 ಅಡಿ ಎತ್ತರದ ಡಾ.ಅಂಬೇಡ್ಕರ್ ಅವರ ಪ್ರತಿಮೆ ನಿರ್ಮಿಸಿದೆ. ಅದೇ ಮಾದರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅಂಬೇಡ್ಕರ್ ಅವರ 250 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪ್ರತಿಷ್ಠಾಪಿಸಲು ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಕರ್ನಾಟಕ ಭೀಮ್‌ಸೇನೆ ರಾಜ್ಯಾದ್ಯಂತ ಜಾಗೃತಿ ಮೂಡಿಸುವುದರೊಂದಿಗೆ ಸರ್ಕಾರದ ಗಮನ ಸೆಳೆಯಲು ಕಾರ್ಯಕ್ರಮ ರೂಪಿಸಿದೆ ಎಂದರು. ಗೋಷ್ಠಿಯಲ್ಲಿ ಕರ್ನಾಟಕ ಭೀಮ್ ಸೇನೆ ಮೈಸೂರು ಜಿಲ್ಲಾಧ್ಯಕ್ಷ ಸಂತೋಷ್, ಸಿ.ಪಿ.ಸುರೇಂದ್ರನಾಥ್ ಚಿದರವಳ್ಳಿ, ಶಂಭಯ್ಯ ಹಾಗೂ ಇನ್ನಿತರರು ಇದ್ದರು.

ಭಾಷಾ ಪ್ರಯೋಗಾಲಯ ಉದ್ಘಾಟನೆ...



ಮೈಸೂರಿನ ಯಾದವಗಿರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾಷಾ ಪ್ರಯೋಗಾಲಯವನ್ನು ಮಾಜಿ ಕಾರ್ಪೋರೇಟರ್ ಎಸ್‌ಬಿಎಂ ಮಂಜು, ಶಿಕ್ಷಣಾಧಿಕಾರಿ ರೇವಣ್ಣ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಮಹೇಶ್, ಕಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಎಂ.ಎಂ.ನಾಗವೇಣಿ, ಶಿಕ್ಷಕರಾದ ಡಾ.ವಿ.ಜಿ.ಪ್ರಕಾಶ್, ಸೀತಾಲಕ್ಷ್ಮಿ, ಗೀತಾಮಣಿ, ಭಾರತಿ, ಆಶಾರಾಣಿ ಹಾಗೂ ಶಾಲೆಯ ಮಕ್ಕಳು, ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ 38ನೇ ವರ್ಷದ ತ್ಯಾಗರಾಜ, ಪುರಂದರದಾಸರ ಆರಾಧನಾ ಮಹೋತ್ಸವ



ಪುರಂದರದಾಸರು

ಮೈಸೂರು, ಫೆ.13(ಜಿಎ)–ಮೈಸೂರಿನ ಗೋಕುಲಂನ 3ನೇ ಹಂತದಲ್ಲಿರುವ ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ ವತಿಯಿಂದ ಫೆ.15, 16ರಂದು ಒಂಟಿಕೊಪ್ಪಲ್ ಕಾಳಿದಾಸ ರಸ್ತೆ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ 38ನೇ ವರ್ಷದ ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ ಆಯೋಜಿಸಲಾಗಿದೆ ಎಂದು ಸಂಸ್ಥೆ ಮುಖ್ಯಸ್ಥೆ ಡಾ.ಸುಕನ್ಯಾ ಪ್ರಭಾಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.15ರಂದು ಬೆಳಗ್ಗೆ 10 ಗಂಟೆಗೆ ತ್ಯಾಗರಾಜ ನಮನ ಶೀರ್ಷಿಕೆ ಅಡಿಯಲ್ಲಿ ತ್ಯಾಗರಾಜರ ಕ್ಷೇತ್ರ ಕೃತಿ ಗುಚ್ಛಗಳ ಪ್ರಸ್ತುತಿ ಪಡಿಸಲಾಗುವುದು. ಮಧ್ಯಾಹ್ನ 2 ಗಂಟೆಗೆ ತ್ಯಾಗರಾಜ ನಮನ ಮುಂದುವರಿಕೆ, ಸಂಜೆ 4.30ಕ್ಕೆ ಪುರಂದರ ನಮನ ಶೀರ್ಷಿಕೆ ಅಡಿಯಲ್ಲಿ ಪುರಂದರದಾಸರ ರಚನೆಗಳ ಪ್ರಸ್ತುತಿ, ಸಂಜೆ 6 ಗಂಟೆಗೆ ವಿದುಷಿ ಡಾ.ಆರ್. ಎನ್.ಶ್ರೀಲತಾ ಅವರಿಂದ ತಾವು ರಚಿಸಿರುವ ತ್ಯಾಗರಾಜರ ಗುಚ್ಛ ಕೃತಿಗಳು ಪುಸ್ತಕ ಲೋಕಾರ್ಪಣೆಗೊಳ್ಳಲಿದೆ. ಫೆ.16ರಂದು ಬೆಳಗ್ಗೆ 8 ಗಂಟೆಗೆ ಪುರಂದರ ನವರತ್ನ ಕೃತಿಗಳ ಗೋಷ್ಠಿ ಗಾಯನ, ಬೆಳಗ್ಗೆ 10ಕ್ಕೆ ವಿದ್ವಾನ್ ಹೊಸ ಹಳ್ಳಿ ಅನಂತ ಅವರಿಗೆ 'ನಾದ ಸುರಭಿ' ಪ್ರಶಸ್ತಿ ಪ್ರದಾನ ಬಳಿಕ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಎ.ಚಂದನ್ ಕುಮಾರ್, ಸಿಂಧೂ ಸುಚೇತನ್, ಎ.ಅರ್ಜುನ್‌ಕುಮಾರ್, ಬಿ.ಎಸ್.ರಾಮಾನುಜನ್ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಭಾಕರ್, ಲಲಿತಾ ಶ್ರೀನಿವಾಸನ್, ಮೀರಾ, ಕೇಶವ ನಾರಾಯಣ ಉಪಸ್ಥಿತರಿದ್ದರು.

ಫೆ.17ರಿಂದ ಮುದ್ರಾಂಕ ಇಲಾಖೆ ಹೊರಗುತ್ತಿಗೆ ಕಂಪ್ಯೂಟರ್ ಆಪರೇಟರ್‌ಗಳ ಮುಷ್ಕರ

ಮೈಸೂರು, ಫೆ.13(ಆರ್‌ಕೆ)–ಸಮಾನ ಕೆಲಸಕ್ಕೆ ಸಮಾನ ವೇತನ, ಬಾಕಿ ವೇತನ, ಹೆಚ್ಚುವರಿ ಕೆಲಸಕ್ಕೆ ಓಟಿ ಅಲೋಯನ್ಸ್ ಸೇರಿದಂತೆ ವಿವಿಧ ಬೇಡಿಕೆಗೆ ಒತ್ತಾಯಿಸಿ ಫೆಬ್ರವರಿ 17ರಿಂದ ಮುಷ್ಕರ ನಡೆಸಲು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಹೊರ ಗುತ್ತಿಗೆ ಕಂಪ್ಯೂಟರ್ ಆಪರೇಟರ್‌ಗಳು ನಿರ್ಧರಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆ (ಕಾವೇರಿ ಯೋಜನೆ) ಹೊರಗುತ್ತಿಗೆ ಕಂಪ್ಯೂಟರ್ ಆಪರೇಟರ್‌ಗಳ ಸಂಘದ ಅಧ್ಯಕ್ಷ ಹೆಚ್.ಬಸವರಾಜ ಅವರು, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳು, ಕಂದಾಯ ಸಚಿವರು, ಪ್ರಧಾನ ಕಾರ್ಯದರ್ಶಿಗಳಿಗೆ ಮನವಿ ಪತ್ರ ನೀಡಿದ್ದರೂ ಕ್ರಮ ವಹಿಸದಿರುವುದರಿಂದ ರಾಜ್ಯದಾದ್ಯಂತ ಫೆಬ್ರವರಿ 17ರಿಂದ ಕೆಲಸ ಸ್ಥಗಿತಗೊಳಿಸಿ ಮುಷ್ಕರ ನಡೆಸುವುದಾಗಿ ತಿಳಿಸಿದ್ದಾರೆ.

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಗುತ್ತಿಗೆ ಡೇಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ವಿಲೀನಗೊಳಿಸಬೇಕು. ಪ್ರಸ್ತುತ ಕೆಲಸ ಮಾಡುತ್ತಿರುವವರನ್ನು ತೆಗೆದುಹಾಕಬಾರದು ಎಂದು ತಾವು ಸರ್ಕಾರಕ್ಕೆ ಮನವಿ ಮಾಡಿರುವುದಾಗಿಯೂ ಅವರು ತಿಳಿಸಿದ್ದಾರೆ.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು, ಫೆ.13–ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾ ಕೇಂದ್ರದಲ್ಲಿ ಫೆ.17ರಿಂದ 14 ದಿನಗಳ ಕಾಲ ಸಿದ್ಧ ಸಮಾಧಿ ಯೋಗ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಈ ಸಂಬಂಧ ಫೆ.16ರಂದು ಸಂಜೆ 6 ಗಂಟೆಗೆ ಉಚಿತ ಪರಿಚಯ ಕಾರ್ಯಕ್ರಮ ಏರ್ಪಡಿಸಲಾಗಿದೆ. ಮಾಹಿತಿಗೆ ಹೆಚ್.ಎಸ್. ರಮೇಶ್‌ಚಂದ್ರ, ಮೊ. 9448458050, 8618762110 ಸಂಪರ್ಕಿಸಬಹುದು.

ಮೈಸೂರಿನ ಪುರಭವನದಲ್ಲಿ ಜಿಲ್ಲಾ ರೈತ ಸಮಾವೇಶ

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ 100 ಅಭ್ಯರ್ಥಿಗಳು ಕಣಕ್ಕೆ

- ಆನ್‌ಲೈನ್ ಮೂಲಕ ಸದಸ್ಯತ್ವ ಅಭಿಯಾನ ನೋಂದಣಿ
- ರೈತ ಸಾಲಗಾರನಲ್ಲ, ಸರ್ಕಾರವೇ ರೈತನಿಗೆ ಬಾಕಿದಾರ
- ಸಂಘಟನೆ ಶಕ್ತಿಗೊಳಿಸಲು ಪ್ರತಿಜ್ಞೆ
- ಹಸಿರು ಟವಲ್ ಘನತೆ ಉಳಿಸಿ
- ಕೋಮುವಾದಿಗಳಿಗೆ ಬೆಂಬಲ ನೀಡಬೇಡಿ





ಮೈಸೂರಿನ ಪುರಭವನದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಗುರುವಾರ ಆಯೋಜಿಸಿದ್ದ ಜಿಲ್ಲಾ ರೈತ ಸಮಾವೇಶವನ್ನು ಸಂಯುಕ್ತ ಮೋರ್ಚಾದ ರಾಷ್ಟ್ರೀಯ ಸಂಚಾಲಕ ಡಾ.ಸುನೀಲಂ ಉದ್ಘಾಟಿಸಿದರು (ಎಡಚಿತ್ರ). ಸಮಾವೇಶದಲ್ಲಿ ಹಸಿರು ಟವಲ್ ಬೀಸುತ್ತಾ ಒಗ್ಗಟ್ಟು ಪ್ರದರ್ಶಿಸಿದ ರೈತರನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಫೆ.13(ಬಿಎಲ್‌ಯು)– ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರೈತ ಸಂಘ ಕನಿಷ್ಠ 100 ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವ ಗುರಿ ಹೊಂದಿದೆ ಎಂದು ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರಿನ ಪುರಭವನದಲ್ಲಿ ಇಂದು ರೈತ ಹೋರಾಟಗಾರ ಪ್ರೊ.ಎಂ.ಡಿ. ನಂಜುಂಡಸ್ವಾಮಿ– 89 ಸ್ಮರಣೆ ಹಾಗೂ ಜಿಲ್ಲಾ ರೈತ ಸಮಾವೇಶದಲ್ಲಿ ಕುಟುಂಬಕ್ಕೊಬ್ಬ ಸದಸ್ಯ–ಊರಿಗೊಬ್ಬ ಕಾರ್ಯಕರ್ತ ಎಂಬ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರೈತರು ತಮ್ಮ ಹಕ್ಕು ಪ್ರತಿಪಾದಿಸಲು ತಮ್ಮದೆ ಆದ ಶಕ್ತಿ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೋಮುವಾದಿಗಳಿಗೆ ಬೆಂಬಲ ನೀಡಬಾರದು: ವಿಧಾನಸಭಾ ಚುನಾವಣೆಯಲ್ಲಿ ರೈತ ಸಂಘದ 100 ಅಭ್ಯರ್ಥಿಗಳು ಸ್ಪರ್ಧಿಸಿ, ಗೆಲ್ಲಬೇಕು. ಈ ಮೂಲಕ ನಮ್ಮ ಬೇಡಿಕೆಗಳನ್ನು ಹೋರಾಟದ ಮೂಲಕ ಈಡೇರಿಸಿಕೊಳ್ಳಬೇಕು. ಪ್ರತಿ ಗ್ರಾಮದಲ್ಲಿ ಆನ್‌ಲೈನ್ ಮೂಲಕ ಸದಸ್ಯತ್ವ ಪಡೆಯಬೇಕು. ಈ ಮೂಲಕ ಚುನಾವಣೆಯಲ್ಲಿ ಜಯಗಳಿಸಲು ರೈತರು ಸಂಘಟಿತರಾಗಬೇಕು.

ಆದರೆ ಯಾವುದೇ ಕಾರಣಕ್ಕೂ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕೋಮುವಾದಿಗಳಿಗೆ ಬೆಂಬಲ ನೀಡಬಾರದು ಎಂದು ಕಿವಿಮಾತು ಹೇಳಿದರು.

ನಾವು ಹಾಕಿಕೊಳ್ಳುವ ಹಸಿರು ಟವಲ್ ಶಕ್ತಿ ಉಳಿಸಿಕೊಳ್ಳಬೇಕು. ಹೋರಾಟಗಾರರು ಮಾರಾಟಗಾರರಾಗಬಾರದು. ಈ ಮೂಲಕ ರಾಜಕೀಯ ಪಕ್ಷಗಳಿಗೆ ನಮ್ಮ ಶಕ್ತಿ ಏನೆಂದು ತೋರಿಸಬೇಕು ಎಂದು ಹೇಳಿದರು.

ಪ್ರಬಲ ಹೋರಾಟ ಮಾಡಬಹುದು: ಎಲ್ಲಾ ರಾಜಕೀಯ ಪಕ್ಷಗಳು ಹಸಿರು ಟವಲ್ ಹಾಕಿಕೊಂಡು ತಾವು ರೈತರ ಪರವಾಗಿದ್ದೇವೆ ಎಂದು ಮೊಸಳೆ ಕಣ್ಣೀರು ಸುರಿಸುತ್ತಾರೆ. ಆದರೆ ಅಧಿಕಾರದಲ್ಲಿದ್ದಾಗ ರೈತರನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಾರೆ. ಆದ ಕಾರಣ ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಿ ವಿಧಾನಸಭೆಗೆ ಪಾದಾರ್ಪಣೆ ಮಾಡಿದರೆ ರೈತರ ಬೇಡಿಕೆ ಈಡೇರಿಸಲು ಪ್ರಬಲವಾಗಿ ಹೋರಾಟ ಮಾಡಬಹುದು ಎಂದು ಬಡಗಲಪುರ ನಾಗೇಂದ್ರ ಅಭಿಪ್ರಾಯಪಟ್ಟರು.

ಎಂಡಿಎನ್ ಪ್ರಭಾವವಿದೆ : ಸಮಾಜವಾದಿ ಚಳವಳಿಯಲ್ಲಿದ್ದ ಪ್ರೊ.ನಂಜುಂಡಸ್ವಾಮಿ ರೈತ ಚಳವಳಿಗೆ ಪಾದಾರ್ಪಣೆ ಮಾಡಿದರು. 70–80ರ ದಶಕದಲ್ಲಿ ರೈತ ಚಳವಳಿ, ಬೂಸಾ ಚಳವಳಿ ಹಾಗೂ ದಲಿತ ಚಳವಳಿಗಳ ಹೋರಾಟ ಆರಂಭವಾಯಿತು. ಈ ಮೂಲಕ ರಾಜ್ಯದಲ್ಲಿ ಪ್ರತಿ ಚಳವಳಿಗೆ ಪ್ರೊ.ನಂಜುಂಡಸ್ವಾಮಿ ಅವರ ಪ್ರಭಾವವಿದೆ ಎಂದು ಹೇಳಿದರು.

ರೈತ ಚಳವಳಿಯ ಹೋರಾಟಕ್ಕೆ ಪ್ರೊ.ನಂಜುಂಡಸ್ವಾಮಿ ಶಕ್ತಿ ತುಂಬಿದರು. ಇದರಿಂದ ರೈತ ಚಳವಳಿಗೆ ತಾತ್ವಿಕ ರೂಪ ನೀಡಿದರು. ಪ್ರತಿ ಗ್ರಾಮಗಳಲ್ಲಿ ರೈತ ಸಂಘಟನೆ ಜನ್ಮ ತಳೆಯಲು ಕಾರಣಕರ್ತರಾದರು. ಸರ್ಕಾರ ಮಾತ್ರವಲ್ಲದೆ ಅಧಿಕಾರಿಗಳಿಗೆ ರೈತರ ಶಕ್ತಿ ಏನೆಂದು ತೋರಿಸಿದರು. ಇದಕ್ಕೆ ಕೆಂಟಕಿ ಚಿಕನ್ ವಿರುದ್ಧದ ಹೋರಾಟವೇ ಸ್ಪಷ್ಟ ನಿದರ್ಶನ ಎಂದರು.

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಹಾಗೂ ನಡೆಸಿದ ಎಲ್ಲಾ ಪಕ್ಷದ ರಾಜಕೀಯ ಪಕ್ಷಗಳು ರೈತರನ್ನು ಅಸಡ್ಡೆಯಾಗಿ ನೋಡುತ್ತಿದೆ. ರೈತರ ಪರ ನಿಲುವು ಬಿಟ್ಟು ಸರ್ಕಾರದ ನೀತಿ ನಿಯಮಗಳು ಕಾರ್ಪೊರೇಟ್ ಪರವಾಗಿ ರೂಪುಗೊಂಡಿದೆ. ಈ ಹಿನ್ನೆಲೆ ರೈತರ ಹೋರಾಟದ ಬಗ್ಗೆ ಸರ್ಕಾರಗಳಿಗೆ ತಿಳಿಸಲು ನಾವು ಶಕ್ತಿಯುತ ಹೋರಾಟ ಮಾಡಬೇಕು. ರೈತ ಚಳವಳಿಯ ಬೇರುಗಳನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ಎಂದು ನಾಗೇಂದ್ರ ಸಲಹೆಯಿತ್ತರು.

ಅಂಬಾನಿ, ಅದಾನಿಗೆ ಭೂಮಿ; ರೈತರಿಗೆ ಮೋಸ

ಕೇಂದ್ರದ ಬಿಜೆಪಿ ಸರ್ಕಾರ ಅಂಬಾನಿ ಹಾಗೂ ಅದಾನಿಗೆ ರೈತರ ಫಲವತ್ತಾದ ಭೂಮಿ ನೀಡಿ ಒಕ್ಕಲೆಬ್ಬಿಸುತ್ತಿದೆ ಎಂದು ಸಂಯುಕ್ತ ಮೋರ್ಚಾದ ರಾಷ್ಟ್ರೀಯ ಸಂಚಾಲಕರೂ ಆದ ಮಾಜಿ ಶಾಸಕ ಡಾ.ಸುನೀಲಂ ಆರೋಪಿಸಿದರು.

ರೈತರ ಭೂಮಿಯನ್ನು ಹೀಗೆ ಕಾರ್ಪೊರೇಟ್ ಕಂಪನಿಗಳಿಗೆ ನೀಡಿದರೆ ಭವಿಷ್ಯತ್ತಿನಲ್ಲಿ ಆಹಾರಕ್ಕೆ ತತ್ವಾರ ಉಂಟಾಗಲಿದೆ ಎಂದು ಎಚ್ಚರಿಸಿದರು. ಬಜೆಟ್‌ನಲ್ಲಿ ರೈತರಿಗೆ ಕಡಿಮೆ ಅನುದಾನ ನೀಡುತ್ತಿರುವ ಕೇಂದ್ರದ ಬಿಜೆಪಿ ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಆಪಾದಿಸಿದರು.

ಕೇಂದ್ರ ಸರ್ಕಾರ ವಿರುದ್ಧದ ಹೋರಾಟದಿಂದ ಈ ತನಕ 700 ರೈತರು ಸಾವನ್ನಪ್ಪಿದ್ದಾರೆ. ಇಷ್ಟಾದರೂ ರೈತರಿಗೆ ಮರಣ ಶಾಸನವಾದ ಕಾಯ್ದೆ ಜಾರಿ ಮಾಡುತ್ತಿದೆ. ಇದರ ವಿರುದ್ಧವಾಗಿ ನಾವೆಲ್ಲಾ ಸಂಘಟಿತರಾಗಿ ಹೋರಾಟ ಮಾಡಿ ಯಶಸ್ವಿಯಾಗಬೇಕು ಎಂದು ಡಾ.ಸುನೀಲಂ ಸಲಹೆ ನೀಡಿದರು. ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣದ ವಿರುದ್ಧ ಪ್ರೊ.ನಂಜುಂಡಸ್ವಾಮಿ ನಡೆಸಿದ ಹೋರಾಟ ಪರಿಯನ್ನು ಈ ವೇಳೆ ಅವರು ಮೆಲುಕು ಹಾಕಿದರು.

ಮೈಕ್ರೋ ಫೈನಾನ್ಸ್ ಗೂಂಡಾಗಳಿಗೆ ಪ್ರವೇಶವಿಲ್ಲ

ಆಧುನಿಕತೆಗೆ ತಕ್ಕಂತೆ ಬದಲಾಗಿರುವ ರೈತ ಸಂಘ ಹೈಟೆಕ್ ಹಾದಿಯಲ್ಲಿ ಸಾಗಿದೆ. ರೈತ ಸಂಘದ ಸಂಘಟನೆಗಾಗಿ ಆನ್‌ಲೈನ್ ಮೂಲಕ ಸದಸ್ಯ ಅಭಿಯಾನಕ್ಕೆ ಇಂದು ಚಾಲನೆ ನೀಡಿದೆ. ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿ ಮಾಡಿ ಪ್ರತಿ ಗ್ರಾಮದಲ್ಲಿ ಸದಸ್ಯತ್ವ ನೋಂದಣಿ ಪ್ರತಿಜ್ಞೆ ಮಾಡಿದರು.

ಪ್ರತಿ ಗ್ರಾಮದಲ್ಲಿ ಅಳವಡಿಸುವ ಹೊಸ ರೀತಿಯ ಫಲಕವನ್ನು ಇಂದು ಬಿಡುಗಡೆ ಮಾಡಲಾಯಿತು. ಭ್ರಷ್ಟ ರಾಜಕಾರಣಿಗಳು ಹಾಗೂ ಭ್ರಷ್ಟ ಸರ್ಕಾರಿ ನೌಕರರಿಗೆ, ಬ್ಯಾಂಕ್ ಸಾಲ ವಸೂಲಿಗಾರರಿಗೆ, ಮೈಕ್ರೋ ಫೈನಾನ್ಸ್ ಗೂಂಡಾಗಳಿಗೆ, ಕಾರ್ಪೊರೇಟ್ ಭೂ ದಲ್ಲಾಳಿಗಳಿಗೆ ಗ್ರಾಮದ ಒಳಗೆ ಪ್ರವೇಶವಿಲ್ಲ. ಪ್ರಾಮಾಣಿಕರಿಗೆ ಮಾತ್ರ ಸ್ವಾಗತ ಎಂಬ ಫಲಕ ಬಿಡುಗಡೆ ಮಾಡಲಾಯಿತು. 'ರೈತ ಸಾಲಗಾರನಲ್ಲ– ಸರ್ಕಾರವೇ ರೈತನಿಗೆ ಬಾಕಿದಾರ' ಘೋಷಣಾ ಫಲಕ ಕೂಡ ಬಿಡುಗಡೆ ಮಾಡಲಾಯಿತು. ಸಮಾವೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ರೈತರು ತಮ್ಮ ಹೆಗಲ ಮೇಲೆ ಹಾಕಿದ್ದ ಹಸಿರು ಟವಲ್ ಅನ್ನು ಬೀಸುತ್ತಾ ಒಗ್ಗಟ್ಟು ಪ್ರದರ್ಶಿಸಿದರು.

ಸಖಿಸಸಿ ಪರಿಸರ ದೀವಿಗೆ ಕಾರ್ಯಕ್ರಮ



ಮೈಸೂರಿನ ಸಖಿ ಫೌಂಡೇಶನ್, ಸೂರ್ಯ ಚಾರಿಟೆಬಲ್ ಟ್ರಸ್ಟ್ ತನ್ನ ಕಚೇರಿಯಲ್ಲಿ ಸಖಿಸಸಿ ಪರಿಸರ ದೀವಿಗೆ ಕಾರ್ಯಕ್ರಮ ಆಯೋಜಿಸಿತ್ತು. ಎಸ್‌ಎಸ್‌ಐಟಿ ಸಲ್ಯೂಷನ್ಸ್‌ನ ಕಂಪ್ಯೂಟರ್ ತರಬೇತುದಾರರಾದ ರೇಖಾ ಪುಟ್ಟರಾಜು, ಬೇವು ಕುರಿತು ವಿಶೇಷ ಮಾಹಿತಿ ನೀಡಿದರು. ಸಂಸ್ಥೆ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್, ಸಲಹಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಇಂದು ಔಷಧ ಶಿಕ್ಷಣದಲ್ಲಿ ಫಲಿತಾಂಶ ಆಧಾರಿತ ಶಿಕ್ಷಣ ಕಾರ್ಯಕ್ರಮ

ಮೈಸೂರು,ಫೆ.13–ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜು ವತಿಯಿಂದ ಫ್ಯಾಕಲ್ಟಿ ಡೆವಲಪ್‌ಮೆಂಟ್ ಪ್ರೋಗ್ರಾಂ ಔಷಧ ಶಿಕ್ಷಣದಲ್ಲಿ ಫಲಿತಾಂಶ ಆಧಾರಿತ ಶಿಕ್ಷಣ ಮತ್ತು ಪ್ರಕ್ರಿಯೆ ಚಾಲಿತ ಸಮಸ್ಯೆ ಆಧಾರಿತ ಕಲಿಕೆ ಪರಿಚಯ ಕಾರ್ಯಕ್ರಮವನ್ನು ಫೆ. 14 ರಂದು ಬೆಳಗ್ಗೆ 10.30 ಗಂಟೆಗೆ ಪ್ರೊ.ಎಸ್.ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಪ್ರಾಂಶುಪಾಲ ಡಾ.ಕೆ.ಸತೀಶ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್.ದಿನೇಶ್, ಮಲೇಷ್ಯಾದ ಔಷಧೀಯ ಉತ್ಪನ್ನ ಅಭಿವೃದ್ಧಿ ಕೇಂದ್ರ ಕ್ವೆಸ್ಟ್ ಇಂಟರ್‌ನ್ಯಾಷನಲ್ ವಿವಿ, ಇಪೋ ನಿರ್ದೇಶಕರಾದ ಡಾ.ಮಹಿಬೂಬ್ ಮಹಮದ್ದಾ ಕಣಕಲ್ ಭಾಗವಹಿಸಲಿದ್ದಾರೆ. ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಚಾರ್ ಜೋಶಿ ಅಧ್ಯಕ್ಷತೆ ವಹಿಸುವರು.

ಈ ಹಿಂದೆ ಪುಸ್ತಕ ಪ್ರೀತಿಸುವವರು ಸರಸ್ವತಿ ಪುತ್ರರಾಗುತ್ತಿದ್ದರು

ಮೈಸೂರಿನ ಸಪ್ನ ಬುಕ್‌ಹೌಸ್‌ನ 58ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪುಸ್ತಕ ಶ್ರದ್ಧೆ ಬಗ್ಗೆ ಪ್ರೊ.ಕೆ.ಚಿದಾನಂದಗೌಡ ಬಣ್ಣನೆ

ಮೈಸೂರು, ಫೆ.13(ಆರ್‌ಕೆ)– ಈ ಹಿಂದೆ ಪುಸ್ತಕ ಪ್ರೀತಿಸುವವರು ಸರಸ್ವತಿ ಪುತ್ರರಾಗುತ್ತಿದ್ದರು ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಪ್ನ ಬುಕ್ ಹೌಸ್ ಆವರಣದಲ್ಲಿ ಲೆಗೆಸ್ಸಿ ಕ್ಲಬ್ ಸಂಯುಕ್ತಾಶ್ರಯದಲ್ಲಿ ಭಾನುವಾರ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಹಾಗೂ ಸಪ್ನ ಬುಕ್ ಹೌಸ್‌ನ 58ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪುಸ್ತಕಗಳನ್ನು ಪ್ರೀತಿಸುವವರು ಸರಸ್ವತಿ ಪುತ್ರರಾಗುತ್ತಿದ್ದರು. ಅದೇ ರೀತಿ ಲಕ್ಷ್ಮಿದೇವಿಯನ್ನು ಆರಾಧಿಸುವವರು ಲಕ್ಷ್ಮಿಪುತ್ರ ಎನಿಸುತ್ತಿದ್ದರು. ಆದರೆ, ಇಂದಿನ, 21ನೇ ಶತಮಾನದಲ್ಲಿ ಜ್ಞಾನದ ಸಹಾಯದಿಂದ ಸರಸ್ವತಿ ಪುತ್ರರು ಲಕ್ಷ್ಮಿ ಪುತ್ರರಾಗಬಹುದು ಎಂದರು.

ಇನ್‌ಫೋಸಿಸ್‌ನ ನಾರಾಯಣಮೂರ್ತಿ ಅವರು ಸರಸ್ವತಿ ಪುತ್ರರಾಗಿದ್ದವರು. ಅವರು ನಂಬಿದ ವಿದ್ಯೆಯು ಕೈಹಿಡಿದ ಪರಿಣಾಮ ಇಂದು ಅವರು ಲಕ್ಷ್ಮಿಪುತ್ರರಾಗಿದ್ದಾರೆ. ಯಾವುದೇ ಮನುಷ್ಯ ಪುಸ್ತಕ ಓದುವ ಮೂಲಕ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡಲ್ಲಿ ಸರಸ್ವತಿ ಜೊತೆಗೆ ಲಕ್ಷ್ಮಿಯೂ ಒಲಿಯುತ್ತಾಳೆ ಎಂಬುದಕ್ಕೆ ನಮ್ಮ ನಡುವೆ ಹಲವು ಉದಾಹರಣೆಗಳಿವೆ. ಹೆಚ್ಚೆಚ್ಚು ಪುಸ್ತಕಗಳನ್ನು ಕೊಂಡು ಓದುವ ಅಭ್ಯಾಸ ಮಾಡಿಕೊಂಡಲ್ಲಿ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಬಹುದು ಎಂದು ಸಲಹೆ ನೀಡಿದರು.

ಶೇಷಾದ್ರಿಪುರಂ ಪಿಯು ಕಾಲೇಜು ಪ್ರಾಧ್ಯಾಪಕ ಕೆ.ಎಂ.ಸಿದ್ದಪ್ಪ ಮಾತನಾಡಿ, ಕುವೆಂಪು ಸಾಹಿತ್ಯವು ತಳವರ್ಗದವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದರೆ ಮೇಲ್ವರ್ಗದ ಜನರಿಗೆ ಆತ್ಮವಿಮರ್ಶೆ ಹುಟ್ಟುವಂತೆ ಮಾಡುತ್ತದೆ. ಇಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕತೆಗಳಲ್ಲಿ ಇರುವ ಸಮಸ್ಯೆಗಳಿಗೆ ಕುವೆಂಪು ಅವರ ಕೃತಿಗಳಲ್ಲಿ ಹಲವು ಪರಿಹಾರ ಲಭ್ಯವಾಗಲಿದೆ. ಕುವೆಂಪು ಅವರ ಕೃತಿಗಳಲ್ಲಿ ಪರಿಸರ ಪ್ರೇಮದ ಬಗ್ಗೆ, ಅದರೊಳಗಿನ ಮಾನವೀಯ ಮೌಲ್ಯಗಳ ಬಗ್ಗೆ ಉತ್ತಮವಾದ ಸಲಹೆಗಳಿವೆ ಎಂದರು. ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದಗೌಡ, ಲೆಗೆಸ್ಸಿ ಕ್ಲಬ್ ಅಧ್ಯಕ್ಷ ಡಿ.ವಿ.ದಯಾನಂದ ಸಾಗರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಸಪ್ನ ಬುಕ್ ಹೌಸ್ ಆವರಣದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಹಾಗೂ ಸಪ್ನ ಬುಕ್ ಹೌಸ್‌ನ 58ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ ಉದ್ಘಾಟಿಸಿದರು. ಈ ವೇಳೆ ಶೇಷಾದ್ರಿಪುರಂ ಪಿಯು ಕಾಲೇಜು ಪ್ರಾಧ್ಯಾಪಕ ಕೆ.ಎಂ.ಸಿದ್ದಪ್ಪ, ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದಗೌಡ, ಲೆಗೆಸ್ಸಿ ಕ್ಲಬ್ ಅಧ್ಯಕ್ಷ ಡಿ.ವಿ.ದಯಾನಂದ ಸಾಗರ್ ಇನ್ನಿತರು ಉಪಸ್ಥಿತರಿದ್ದರು.

ದೇಶ - ವಿದೇಶ

ಫುಡ್‌ಕೋರ್ಟ್‌ನಲ್ಲಿ ಭಾರಿ ಸ್ಫೋಟ: ಐವರು ಸಾವು



ತೈವಾನ್: ಫುಡ್ ಕೋರ್ಟ್‌ವೊಂದರಲ್ಲಿ ಭಾರಿ ಸ್ಫೋಟ ಸಂಭವಿಸಿದ ಪರಿಣಾಮ ಕನಿಷ್ಠ ಐದು ಜನರು ಸಾವನ್ನಪ್ಪಿ, ಹಲವಾರು ಮಂದಿ ಗಂಭೀರ ಗಾಯಗೊಂಡಿರುವ ಘಟನೆ ಚೀನಾದ ತೈವಾನ್‌ನ ತೈಚುಂಗ್ ನಗರದಲ್ಲಿ ನಡೆದಿದೆ.

ಈ ಭೀಕರ ಸ್ಫೋಟ ತೈವಾನ್‌ನ ತೈಚುಂಗ್ ನಗರದ ಪಶ್ಚಿಮ ಕರಾವಳಿಯ ಜನಪ್ರಿಯ ಶಾಪಿಂಗ್ ಮಾಲ್‌ನಲ್ಲಿ ಸಂಭವಿಸಿದ್ದು, ಸ್ಫೋಟದ ತೀವ್ರತೆಗೆ ಕಟ್ಟಡದ ಹೊರಭಾಗ ಸಂಪೂರ್ಣ ನಾಶವಾಗಿ ಅವಶೇಷಗಳು ರಸ್ತೆಗೆ ಬಿದ್ದಿವೆ ಎಂದು ವರದಿಗಳು ಹೇಳಿವೆ.

ಶಾಪಿಂಗ್ ಮಾಲ್‌ನ 12ನೇ ಮಹಡಿಯಲ್ಲಿ ನಿರ್ಮಾಣ ಹಂತದಲ್ಲಿದ್ದ ಫುಡ್ ಕೋರ್ಟ್‌ನಲ್ಲಿ ಈ ಸ್ಫೋಟ ಸಂಭವಿಸಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಸ್ಫೋಟದ ನಂತರ ವೈರಲ್ ಆದ ದೃಶ್ಯಗಳು ಘಟನೆಯ ಭೀಕರತೆಯನ್ನು ತೋರಿಸಿವೆ. ಕಟ್ಟಡದ ಒಳಭಾಗ ಸಂಪೂರ್ಣ ನಾಶವಾಗಿದ್ದು, ಕಿಟಕಿ ಗಾಜುಗಳು ರಸ್ತೆಗೆ ಬಿದ್ದಿವೆ. ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಘಟನಾ ಸ್ಥಳಕ್ಕೆ ತೈವಾನ್ ರಾಷ್ಟ್ರೀಯ ಅಗ್ನಿಶಾಮಕ ದಳದ 130 ಕ್ಕೂ ಹೆಚ್ಚು ಸಿಬ್ಬಂದಿ ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಸ್ಫೋಟದ ಕಾರಣ ಇನ್ನೂ ತಿಳಿದುಬಂದಿಲ್ಲ. ಘಟನೆಯ ಬಗ್ಗೆ ತೈವಾನ್ ಅಧ್ಯಕ್ಷ ಲೈ ಚಿಂಗ್–ಟೆ ದುಃಖ ವ್ಯಕ್ತಪಡಿಸಿದ್ದಾರೆ.

ಕುಡುಕ ಗಂಡನ ಬಿಟ್ಟು, ಲೋನ್ ರಿಕವರಿಗೆ ಬಂದ ಏಜೆಂಟ್ ಮದುವೆಯಾದ ಮಹಿಳೆ!

ಪಾಟ್ನಾ: ಕುಡುಕ ಗಂಡನಿಗೆ ಕೈಕೊಟ್ಟು ಸಾಲ ವಸೂಲಾತಿಗೆ ಆಗಮಿಸುತ್ತಿದ್ದ ಲೋನ್ ರಿಕವರಿ ಏಜೆಂಟ್‌ನನ್ನು ಮಹಿಳೆಯೊಬ್ಬರು ಮದುವೆಯಾದ ಘಟನೆ ಬಿಹಾರದಲ್ಲಿ ವರದಿಯಾಗಿದೆ. ಬಿಹಾರದ ಇಂದ್ರಕುಮಾರಿ ಎಂಬ ಮಹಿಳೆ ಪವನ್‌ಕುಮಾರ್ ಯಾದವ್ ಎಂಬ ಲೋನ್ ರಿಕವರಿ ಏಜೆಂಟ್‌ನನ್ನು ಮದುವೆಯಾಗುವ ಮೂಲಕ ತನ್ನ ಕುಡುಕ ಗಂಡನಿಗೆ ಕೈಕೊಟ್ಟಿದ್ದಾಳೆ. ಇಂದ್ರಕುಮಾರಿ 2022ರಲ್ಲಿ ನಕುಲ್ ಶರ್ಮಾ ಅವರನ್ನು ವಿವಾಹವಾಗಿದ್ದರು. ಮದುವೆಗೂ ಮುಂಚೆ ಮದ್ಯವ್ಯಸನಿಯಾಗಿದ್ದ ನಕುಲ್ ನಿತ್ಯ ಕುಡಿದು ಪತ್ನಿ ಇಂದ್ರ ಕುಮಾರಿಯನ್ನು ನಿಂದಿಸಿ, ಹಲ್ಲೆ ಮಾಡುತ್ತಿದ್ದ. ಈ ವೇಳೆ ಗ್ರಾಮಕ್ಕೆ ಸಾಲ ವಸೂಲಿಗಾಗಿ ಪವನ್‌ಕುಮಾರ್ ಯಾದವ್ ಆಗಮಿಸು ತ್ತಿದ್ದ. ಇಂದ್ರಕುಮಾರಿ ಮನೆಗೂ ಆಗಮಿಸಿದ್ದ ಪವನ್ ಆಕೆಯೊಂದಿಗೆ ಪರಿಚಯ ಬೆಳೆಸಿಕೊಂಡಿದ್ದಾನೆ. ಫೆ.4ರಂದು ಆತನೊಂದಿಗೆ ಪರಾರಿಯಾದ ಈಕೆ ಬಳಿಕ ಫೆ.11ರಂದು ಇವರಿಬ್ಬರೂ ದೇವಸ್ಥಾನದಲ್ಲಿ ವಿವಾಹವಾದರು. ಸಾಂಪ್ರದಾಯಿಕ ಹಿಂದೂ ಆಚರಣೆಗಳೊಂದಿಗೆ ನಡೆದ ಅವರ ವಿವಾಹದಲ್ಲಿ ಹಲವಾರು ಜನರು ಭಾಗವಹಿಸಿದ್ದರು. ಇದೀಗ ಪವನ್ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಇಂದ್ರಕುಮಾರಿ ಕುಟುಂಬದಿಂದ ಬೆದರಿಕೆ ಬಂದಿರುವುದರಿಂದ ನವವಿವಾಹಿತರು ಅಧಿಕಾರಿಗಳಿಂದ ರಕ್ಷಣೆ ಕೋರಿದ್ದಾರೆ.

ಒತ್ತೆಯಾಳುಗಳ ಬಿಡದಿದ್ದರೆ ಯುದ್ಧ: ಹಮಾಸ್‌ಗೆ ಇಸ್ರೇಲ್ ಎಚ್ಚರಿಕೆ



ಟೆಲ್ ಅವಿವ್: ಒಪ್ಪಂದದ ಪ್ರಕಾರ ನಮ್ಮ ಒತ್ತೆಯಾಳುಗಳನ್ನು ಬಿಡುಗಡೆ ಮಾಡದಿದ್ದರೆ, ಕದನ ವಿರಾಮದಿಂದ ಹೊರಬಂದು ಮರು ಯುದ್ಧ ನಡೆಸಲು ಸಿದ್ಧ ಎಂದು ಹಮಾಸ್ ಉಗ್ರರಿಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಖಡಕ್ ಎಚ್ಚರಿಕೆ ರವಾನಿಸಿದ್ದಾರೆ. ಇಸ್ರೇಲ್ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವಲ್ಲಿ ವಿಳಂಬ ಮತ್ತು ನಿರಾಕರಣೆ ತೋರುತ್ತಿರುವ ಹಮಾಸ್ ಉಗ್ರರಿಗೆ ಕೊನೆಯ ಗಡುವು ನೀಡಿದ್ದಾರೆ. ಶನಿವಾರ ಮಧ್ಯಾಹ್ನದೊಳಗೆ ನಮ್ಮವರನ್ನು ಬಿಡುಗಡೆ ಮಾಡದೇ ಹೋದಲ್ಲಿ ಕದನ ವಿರಾಮ ಉಲ್ಲಂಘನೆ ಆರೋಪದ ಮೇಲೆ ಮರು ದಾಳಿ ಆರಂಭಿಸಲಾಗುವುದು. ಹಮಾಸ್‌ನ ಅಂತಿಮ ಸೋಲಿನವರೆಗೂ ಹೋರಾಟ ನಡೆಸಲಾಗುವುದು ಎಂದು ಗುಡುಗಿದ್ದಾರೆ. ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಇಸ್ರೇಲ್ ಪ್ರಧಾನಿ, ಕದನ ವಿರಾಮದ ವೇಳೆ ಒಪ್ಪಿದಂತೆ ಉಭಯರ ಕಡೆಯಿಂದ ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕು. ಆದರೆ, ಹಮಾಸ್ ಉಲ್ಲಂಘಿಸುತ್ತಿದೆ. ಗಾಜಾಪಟ್ಟಿ ಸುತ್ತಲೂ ಮತ್ತು ಒಳಗೆ ಸೇನೆಯನ್ನು ಸಜ್ಜುಗೊಳಿಸಲು ಸೂಚಿಸಲಾಗಿದೆ ಎಂದು ಬರೆದುಕೊಂಡಿದ್ದಾರೆ. ಮತ್ತೊಂದು ಪೋಸ್ಟ್‌ನಲ್ಲಿ, ಹಮಾಸ್ ಉಗ್ರರು ಶನಿವಾರ ಮಧ್ಯಾಹ್ನದೊಳಗೆ ನಮ್ಮ ಒತ್ತೆಯಾಳುಗಳನ್ನು ಕಳುಹಿಸದಿದ್ದರೆ, ಕದನ ವಿರಾಮ ಕೊನೆಗೊಳ್ಳುತ್ತದೆ ಎಂದು ತಿಳಿಸಿದ್ದಾರೆ.

ಕುಂಭಮೇಳದಿಂದ ಹಿಂತಿರುಗುತ್ತಿದ್ದ ಬಸ್ ಟ್ರಕ್‌ಗೆ ಡಿಕ್ಕಿ; 3 ಸಾವು

ಕೋಟಾ: ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ 57 ಮಹಾಕುಂಭ ಯಾತ್ರಿಕರನ್ನು ಹೊತ್ತೊಯ್ಯುತ್ತಿದ್ದ ಬಸ್ ಗುರುವಾರ ಟ್ರಕ್‌ಗೆ ಡಿಕ್ಕಿ ಹೊಡೆದಿದ್ದು, ಭೀಕರ ಅಪಘಾತದಲ್ಲಿ ಮೂವರು ಸಾವನ್ನಪ್ಪಿದ್ದಾರೆ ಮತ್ತು ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭದಲ್ಲಿ ಭಾಗವಹಿಸಿ ಯಾತ್ರಿಕರು ಮಧ್ಯಪ್ರದೇಶದ ಮಂದ್‌ಸೌರ್‌ಗೆ ಹಿಂತಿರುಗುತ್ತಿದ್ದರು. ಇಂದು ಬೆಳಗ್ಗೆ 6.30ರ ಸುಮಾರಿಗೆ ರಾಜಸ್ಥಾನದ ಕೋಟಾ ಜಿಲ್ಲೆಯ ಕರೋಡಿಯಾ ಗ್ರಾಮದ ಬಳಿ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಟ್ರಕ್‌ಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ. ಮಧ್ಯಪ್ರದೇಶದ ಕಿಶೋರಿಲಾಲ್(60), ಅವರ ಪತ್ನಿ ಕೈಲಾಶಿಬಾಯಿ(54) ಮತ್ತು ಅಶೋಕ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಚಮನ್‌ಲಾಲ್ ಮತ್ತು ಪಾರ್ವತಿ ಗಾಯಗೊಂಡಿದ್ದಾರೆ. ಇತರ ಪ್ರಯಾಣಿಕರು ಸುರಕ್ಷಿತವಾಗಿದ್ದಾರೆ.ಚಾಲಕ ಚಾಲನೆ ಮಾಡುವಾಗ ನಿದ್ದೆ ಮಂಪರಿನಲ್ಲಿದ್ದರಿಂದ ಅಪಘಾತ ಸಂಭವಿಸಿದೆ ಎಂದು ಶಂಕಿಸಲಾಗಿದೆ. ಅಪಘಾತದ ನಂತರ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ಎಎಸ್‌ಐ ತಿಳಿಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ಗಾಯಾಳುಗಳು ಕೋಟಾದ ಎಂಬಿಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿದೇಶಿ ಅಧಿಕಾರಿಗಳಿಗೆ ಲಂಚ ನಿಷೇಧಿಸುವ ಕಾನೂನಿಗೆ ನಿರ್ಬಂಧ ಹೇರಿದ ಟ್ರಂಪ್



ವಾಷಿಂಗ್ಟನ್: ಅಮೆರಿಕದ ಕಂಪನಿಗಳು ವಿದೇಶಿ ಅಧಿಕಾರಿಗಳಿಗೆ ಲಂಚ ನೀಡುವುದನ್ನು ನಿಷೇಧಿಸುವ ಕಾನೂನಿಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಡೆ ನೀಡಿದ್ದಾರೆ. ಈ ಕಾನೂನು ಅಮೆರಿಕದ ಕಂಪನಿಗಳ ಹಿತಾಸಕ್ತಿಗೆ ವ್ಯತಿರಿಕ್ತವಾಗಿದೆ ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ. ಈ ಕಾನೂನು ಜಾರಿಗೆ ನಿರ್ಬಂಧ ವಿಧಿಸಿದ ನಂತರ ಅಮೆರಿಕದ ಷೇರು ಮಾರುಕಟ್ಟೆಯಲ್ಲಿ ಅದಾನಿ ಗ್ರೂಪ್‌ನ ಎಲ್ಲ ಷೇರುಗಳು ಏರಿಕೆಯಾಗಿವೆ. ವಿದೇಶಿ ಭ್ರಷ್ಟಾಚಾರ ಅಭ್ಯಾಸಗಳ ಕಾಯ್ದೆ ಜಾರಿ ನಿರ್ಬಂಧಿಸುವ ಕಾರ್ಯನಿರ್ವಾಹಕ ಆದೇಶಕ್ಕೆ ಟ್ರಂಪ್ ಸಹಿ ಹಾಕಿದ್ದಾರೆ. ಕಾರ್ಯನಿರ್ವಾಹಕ ಆದೇಶದ ಫ್ಯಾಕ್ಟ್ ಶೀಟ್‌ನಲ್ಲಿ ವಿವರಿಸಿದಂತೆ ಹೊಸ ಜಾರಿ ಮಾರ್ಗಸೂಚಿಗಳನ್ನು ರೂಪಿಸುವವರೆಗೆ ಕಾಯ್ದೆಯಡಿ ಯಾವುದೇ ಕ್ರಮಗಳನ್ನು ಕೈಗೊಳ್ಳದಂತೆ ಯುಎಸ್ ಅಧ್ಯಕ್ಷರು ಅಟಾರ್ನಿ ಜನರಲ್ ಪಾಮ್ ಬೊಂಡಿ ಅವರಿಗೆ ನಿರ್ದೇಶನ ನೀಡಿದರು. ಇದಲ್ಲದೇ ಎಫ್‌ಸಿಪಿಎ ಅಡಿ ಈ ಹಿಂದೆ ಕೈಗೊಳ್ಳಲಾದ ಎಲ್ಲ ಕ್ರಮಗಳ ಬಗ್ಗೆ ಪುನರ್ ಪರಿಶೀಲಿಸಲಿದೆ. 1977ರಲ್ಲಿ ಜಾರಿಗೆ ಬಂದಾಗಿನಿಂದ ವಿದೇಶಿ ಭ್ರಷ್ಟಾಚಾರ ಅಭ್ಯಾಸಗಳ ಕಾಯ್ದೆ (15 ಯುಎಸ್ಸಿ 78ಡಿಡಿ–1 ಮತ್ತು ಸೆಕ್.) (ಎಫ್‌ಸಿಪಿಎ)ಯ ವ್ಯಾಪ್ತಿಯನ್ನು ವ್ಯವಸ್ಥಿತವಾಗಿ ಮಿತಿ ಮೀರಿ ಹೆಚ್ಚಿಸಲಾಗಿದೆ. ಇದನ್ನು ಅಮೆರಿಕದ ಹಿತಾಸಕ್ತಿಗಳಿಗೆ ಹಾನಿಯಾಗುವಂತೆ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಶ್ವೇತಭವನದ ಹೇಳಿಕೆ ತಿಳಿಸಿದೆ.

ಕೊಡಗು ಜಿಲ್ಲೆಯಲ್ಲಿ 58,765 ಅಲೆಮಾರಿ ಜನ

● ಸರ್ಕಾರಿ ಸೌಲಭ್ಯ ತಲುಪಿಸಲು ಶ್ರಮ ● ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ



ಬಸವನಹಳ್ಳಿ ಬಳಿಯ ಮೇದಾ ಜನಾಂಗದ ಪುನರ್ ವಸತಿ ಕೇಂದ್ರಕ್ಕೆ ಭೇಟಿ ನೀಡಿದ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಬಿದಿರು ಉತ್ಪನ್ನಗಳ ಮಾಹಿತಿ ಪಡೆದರು.

ಕುಶಾಲನಗರ, ಫೆ.13–ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ ಜನಸಂಖ್ಯೆ ಸುಮಾರು 58,765 ಇದ್ದು, ಇವರಿಗೆ ಸರ್ಕಾರದ ಸೌಲಭ್ಯ ತಲುಪಿಸಲು ಶ್ರಮಿಸಲಾಗುತ್ತಿದೆ ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ತಿಳಿಸಿದರು.

ತಾಲೂಕಿನ ಬಸವನಹಳ್ಳಿ ಬಳಿಯ ಜೇನು ಕುರುಬ ಮತ್ತು ಮೇದಾ ಜನಾಂಗದ ಪುನರ್ ವಸತಿ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲಿಸಿ ಕುಂದುಕೊರತೆ ಆಲಿಸಿ ಮಾತನಾಡಿದ ಅವರು, ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯಲ್ಲಿ 9066 ಹಾಗೂ ಪರಿಶಿಷ್ಟ ಪಂಗಡದಲ್ಲಿ 32,702 ಅಲೆಮಾರಿ ಜನಾಂಗದವರಿದ್ದಾರೆ. ಹಾಗೆಯೇ 16,997 ಆದಿವಾಸಿ ಬುಡಕಟ್ಟಿನವರು ಇದ್ದಾರೆ ಎಂದು ಮಾಹಿತಿ ನೀಡಿದ್ದರು.

ಬಳಿಕ ದಿಡ್ಡಳ್ಳಿ ಆದಿವಾಸಿ, ದೊಡ್ಡಬೆಟ್ಟಗೇರಿಯ ಸೋಲಿಗರ ಪ್ರದೇಶಕ್ಕೆ ಭೇಟಿ ನೀಡಿದ ಅವರು, ಅಲೆಮಾರಿ ಅಭಿವೃದ್ಧಿ ನಿಗಮದಿಂದ ನಡೆಸಲಾಗುತ್ತಿರುವ ಟೈಲರಿಂಗ್ ಕೇಂದ್ರ ಹಾಗೂ ಬಸವನಹಳ್ಳಿ ಬಳಿಯ ಬಿದಿರಿನ ಉತ್ಪನ್ನಗಳ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಸ್ಥಳೀಯರೊಬ್ಬರು ಮಾಹಿತಿ ನೀಡಿ ಬಹಳ ಹಿಂದಿನಿಂದಲೂ ಬಿದಿರಿನ ಉತ್ಪನ್ನಗಳಿಂದ ಹಲವು ಕರಕುಶಲ ವಸ್ತುಗಳನ್ನು ತಯಾರಿಸಿ ಬದುಕು ಕಟ್ಟಿಕೊಳ್ಳಲಾಗುತ್ತಿದೆ. ಇದೊಂದು ವೃತ್ತಿಯಾಗಿದ್ದು, ಮಕ್ಕಳ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗಿದೆ. ಇಲ್ಲಿನ ಕೆಲವರು ಪದವಿ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದಾರೆ ಎಂದರು.

ನಂತರ ಮಾತನಾಡಿದ ಜಿ.ಪಲ್ಲವಿ, ಸರ್ಕಾರ ಮಹಿಳೆಯರ ಸ್ವಾವಲಂಬನೆಗೆ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಅವುಗಳನ್ನು ಪಡೆದುಕೊಳ್ಳುವಂತಾಗಬೇಕು. ಸರ್ಕಾರ ಅಲೆಮಾರಿ ಸಮುದಾಯಕ್ಕೆ ಆರ್ಥಿಕ ಬಲ ತುಂಬಲು ಸ್ವಯಂ ಉದ್ಯೋಗ ನೇರ ಸಾಲ ಯೋಜನೆಯಡಿ 1 ಲಕ್ಷ ರೂ.ವರೆಗೆ ಸಾಲ ನೀಡಲಿದ್ದು, ಇದರಲ್ಲಿ ಶೇ.50ರಷ್ಟು ಸಹಾಯಧನ ಕಲ್ಪಿಸಲಾಗಿದೆ ಎಂದು ಹೇಳಿದರು.

ಇದೇ ವೇಳೆ ತಹಸೀಲ್ದಾರ್‌ಗಳಾದ ಕಿರಣ್ ಗೌರಯ್ಯ (ಕುಶಾಲನಗರ), ಮೋಹನ್ ಕುಮಾರ್ (ಪೊನ್ನಂಪೇಟೆ), ಐಟಿಡಿಪಿ ಇಲಾಖೆ ಅಧಿಕಾರಿ ತೇಜಕುಮಾರ್ (ವಿರಾಜಪೇಟೆ, ಪೊನ್ನಂಪೇಟೆ), ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳಾದ ಪ್ರೀತಿ ಚಿಕ್ಕಮಾದಯ್ಯ (ವಿರಾಜಪೇಟೆ), ಸಿದ್ದೇಗೌಡ (ಕುಶಾಲನಗರ, ಸೋಮವಾರಪೇಟೆ), ಎಇಇ ಮಹದೇವ, ಸೆಸ್ಕ್ ಎಇಇ ಸುರೇಶ್, ಕುಡಿಯುವ ನೀರು ವಿಭಾಗದ ಎಇಇ ಭಾಸ್ಕರ್, ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಬಿ.ಎಸ್.ಆನಂದ್ ಕುಮಾರ್, ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಜೇನು ಕುರುಬರ ಹಾಡಿಗೆ ಭೇಟಿ

ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಪೊನ್ನಂಪೇಟೆ ತಾಲೂಕಿನ ಬೊಂಬುಕಾಡು ಕಾರೆಕಂಡಿ ಜೇನುಕುರುಬ ಹಾಡಿಗೆ ಭೇಟಿ ನೀಡಿ ಮಾಹಿತಿ ಪಡೆದರು. ವಿರಾಜಪೇಟೆ ತಾಲೂಕಿನ ಮಾಲ್ದಾರೆ ಆಸ್ತನಹಾಡಿ ಪರಿಶಿಷ್ಟ ಪಂಗಡದ ಕುರುಬ ಜನಾಂಗ ವಾಸಿಸುವ ಸ್ಥಳ ಪರಿಶೀಲಿಸಿದರು.

ಇದೇ ವೇಳೆ ಮಾತನಾಡಿದ ಜಿ.ಪಲ್ಲವಿ, ಆದಿವಾಸಿಗಳು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಮುಖ್ಯವಾಹಿನಿಗೆ ಬರುವಂತಾಗಬೇಕು. ಪರಿಶ್ರಮ ಇದ್ದಲ್ಲಿ ಯಶಸ್ಸು ಸಾಧ್ಯ. ಆ ನಿಟ್ಟಿನಲ್ಲಿ ಶಿಕ್ಷಣ, ಆರೋಗ್ಯ ಜೊತೆಗೆ ಸ್ವಾವಲಂಬಿ ಬದುಕಿಗೆ ಹೆಚ್ಚಿನ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಇಲಾಖೆ ವ್ಯಾಪ್ತಿಯ ಅಲೆಮಾರಿ ಅಭಿವೃದ್ಧಿ ನಿಗಮ ವತಿಯಿಂದ ನೀಡುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಶಾಸಕ ಪೊನ್ನಣ್ಣರಿಂದ ಚಿಕ್ಕಪೇಟೆಯಲ್ಲಿ ಶುದ್ಧ ನೀರಿನ ಘಟಕ ಉದ್ಘಾಟನೆ



ಚಿಕ್ಕಪೇಟೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು.

ವಿರಾಜಪೇಟೆ, ಫೆ.13–ಪುರಸಭೆ ವ್ಯಾಪ್ತಿಯ ಚಿಕ್ಕಪೇಟೆಯಲ್ಲಿ ಶಾಸಕರ ಅನುದಾನದಡಿ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದರು.

ನಂತರ ಮಾತನಾಡಿದ ಶಾಸಕರು, ನಾನು ಗಮನಿಸಿದಂತೆ ಮಹಾನಗರಗಳಲ್ಲಿ ಈ ರೀತಿಯ ಶುದ್ಧ ಹಾಗೂ ಸುಂದರವಾದ ನೀರಿನ ಘಟಕಗಳು ಕಡಿಮೆ ಇವೆ. ಚಿಕ್ಕಪೇಟೆಯಲ್ಲಿ ಅಲ್ಪ ಅವಧಿಯಲ್ಲಿ ನಿರ್ಮಿತಿ ಕೇಂದ್ರದವರು ಸುಂದರವಾದ ಶುದ್ಧ ನೀರಿನ ಘಟಕವನ್ನು ನಿರ್ಮಿಸಿದ್ದಾರೆ. ಇದೇ ರೀತಿ ಮತ್ತೊಂದು ನೀರಿನ ಘಟಕವನ್ನು ನಿರ್ಮಿಸಿ, ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ನುಡಿದಂತೆ ವಿರಾಜಪೇಟೆ ತಾಲೂಕು ಹಾಗೂ ಪಟ್ಟಣವನ್ನು ಮಾದರಿಯಾಗಿ ರೂಪಿಸಲು ಕ್ಷೇತ್ರ ವ್ಯಾಪ್ತಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಒಂದೂವರೆ ವರ್ಷದಲ್ಲೇ ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆಯುತ್ತಿವೆ ಎಂದರು.

ಇದೇ ವೇಳೆ ಪುರಸಭೆ ಅಧ್ಯಕ್ಷೆ ಮನೆಯಪಂಡ ದೇಚಮ್ಮ, ಮುಖ್ಯಾಧಿಕಾರಿ ಪಿ.ಕೆ.ನಾಚಪ್ಪ, ಪುರಸಭೆ ಕಾನೂನು ಸಲಹೆಗಾರ ಡಿ.ಸಿ.ಧ್ರುವಕುಮಾರ್, ತಾಲೂಕು ಬಗರ್ ಹುಕುಂ ಸಮಿತಿ ಅಧ್ಯಕ್ಷ ಆರ್.ಕೆ.ಸಲಾಂ, ಪುರಸಭೆ ಸದಸ್ಯೆ ಹೆಚ್.ಎಂ.ಪೂರ್ಣಿಮಾ, ಕೊಡವ ಕೇರಿಯ ಅಧ್ಯಕ್ಷ ಅಮ್ಮಣಿಚಂಡ ರವಿ ಉತ್ತಪ್ಪ, ಬಯವಂಡ ಬೆಳ್ಯಪ್ಪ, ಮಾಳೇಟಿರ ಕಾಶಿ, ಕೂತಂಡ ಸುರೇಶ್, ಮಾಳೇಟಿರ ಬೋಪಣ್ಣ, ನಿವೃತ್ತ ಶಿಕ್ಷಕ ಎ.ವಿ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ನಾಪತ್ತೆಯಾಗಿದ್ದ ವಿದ್ಯಾರ್ಥಿ ಕೂಟುಹೊಳೆಯಲ್ಲಿ ಶವವಾಗಿ ಪತ್ತೆ

ಮಡಿಕೇರಿ, ಫೆ.13–ಮಂಗಳವಾರ (ಫೆ.11) ನಾಪತ್ತೆಯಾಗಿದ್ದ ಗಾಳಿಬೀಡು ಬಳಿಯ ನವೋದಯ ಶಾಲೆ ವಿದ್ಯಾರ್ಥಿ ಮೃತದೇಹ ಗುರುವಾರ ಕೂಟುಹೊಳೆಯಲ್ಲಿ ಪತ್ತೆಯಾಗಿದೆ.

ನವೋದಯ ಶಾಲೆಯ ಸಿಬ್ಬಂದಿ ಆನಂದ್ ಅವರ ಪುತ್ರ ಎಂ.ಅಮಿತ್ (17) ವಿದ್ಯಾರ್ಥಿಯ ಶವ ಪತ್ತೆಯಾಗಿದೆ. ಈತ ಫೆ.11ರಂದು ಬೆಳಗ್ಗೆ 7 ಗಂಟೆಗೆ ನವೋದಯ ಶಾಲಾ ಆವರಣದ ಸಿಬ್ಬಂದಿ ವಸತಿ ಗೃಹದಿಂದ ಶಾಲೆಗೆಂದು ತೆರಳಿದ್ದಾನೆ. ಆದರೆ, 11 ಗಂಟೆಯಲ್ಲಿ ಅಮಿತ್ ಶಾಲೆಯ ಮುಖ್ಯ ದ್ವಾರದ ಮೂಲಕ ರಸ್ತೆ ಕಡೆಗೆ ಬಂದಿದ್ದಾನೆ. ಇದನ್ನು ಕಂಡ ಅಲ್ಲಿನ ಸೆಕ್ಯುರಿಟಿ ಅಮಿತ್ ಅವರ ತಂದೆ ಆನಂದ್ ಅವರಿಗೆ ಕರೆ ಮಾಡಿ ತಿಳಿಸಿದ್ದಾರೆ. ತಕ್ಷಣ ಆನಂದ್ ರಸ್ತೆ ಕಡೆಗೆ ಬಂದು ನೋಡಿದ್ದು, ಅಮಿತ್ ಮಾತ್ರ ಕಂಡು ಬರಲಿಲ್ಲ.

ಈ ಸಂಬಂಧ ಆನಂದ್ ಮಡಿಕೇರಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಶಾಲೆ ಮುಂಭಾಗದ ಕೂಟುಹೊಳೆಯಲ್ಲಿ ಅಮಿತ್‌ನ ಚಪ್ಪಲಿ ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರು ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿ ಮತ್ತು ಕೊಡಗು ಜಿಲ್ಲಾ ಪೊಲೀಸ್ ರಕ್ಷಣಾ ತಂಡದವರು ಬುಧವಾರ ಕೂಟುಹೊಳೆಯಲ್ಲಿ ಬೋಟ್ ಮೂಲಕ ಶೋಧ ಕಾರ್ಯ ನಡೆಸಿದರು.

ಗುರುವಾರ ಕೂಟುಹೊಳೆಯ ಜಲ ಸಂಗ್ರಹಾಗಾರದಲ್ಲಿ ಈತನ ಶವ ಪತ್ತೆಯಾಗಿದೆ. ನಂತರ ವೃತ್ತ ನಿರೀಕ್ಷಕ ಚಂದ್ರಶೇಖರ್, ಸಹಾಯಕ ನಿರೀಕ್ಷಕ ಅಪ್ಪಾಜಿ ಮತ್ತು ಅಗ್ನಿ ಶಾಮಕ ದಳದ ಸಿಬ್ಬಂದಿ ಮೃತದೇಹವನ್ನು ಮೇಲೆತ್ತಿ ಮಹಜರು ನಡೆಸಿದರು.



ಎಂ.ಅಮಿತ್

ಮಗನ ಶವವನ್ನು ಕಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಬಳಿಕ ಮಡಿಕೇರಿ ಜಿಲ್ಲಾ ಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಪೋಷಕರಿಗೆ ನೀಡಿದರು.

ಕಾಲೂರು ಗ್ರಾಮದಲ್ಲಿ ಜನಸ್ಪಂದನ ಸಭೆ

● ಗ್ರಾಮಸ್ಥರ ಅಹವಾಲು ಆಲಿಸಿದ ಶಾಸಕ ಡಾ.ಮಂತರ್‌ಗೌಡ ● ಸ್ಥಳದಲ್ಲೇ ಕೆಲ ಸಮಸ್ಯೆಗಳಿಗೆ ಪರಿಹಾರ

ಮಡಿಕೇರಿ, ಫೆ.13–ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಲೂರು ಗ್ರಾಮದಲ್ಲಿ ಬುಧವಾರ ಶಾಸಕ ಡಾ.ಮಂತರ್ ಗೌಡ ಜನಸ್ಪಂದನ ಸಭೆ ನಡೆಸಿ, ಗ್ರಾಮಸ್ಥರ ಅಹವಾಲು ಆಲಿಸಿದರು.

ಶಾಸಕರು ಕಂದಾಯ ಇಲಾಖೆ, ಲೋಕೋಪಯೋಗಿ, ಪಂಚಾಯತ್ ರಾಜ್, ಸಣ್ಣ ನೀರಾವರಿ ಇಲಾಖೆ, ಸೆಸ್ಕ್, ತಾಲೂಕು ಪಂಚಾಯಿತಿ ಇಓ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳೊಂದಿಗೆ 2 ಗಂಟೆ ಕಾಲ ಸಭೆ ನಡೆಸಿ ಗ್ರಾಮದ ಸಮಸ್ಯೆಯ ಮಾಹಿತಿ ಪಡೆದರು.

ಗ್ರಾಮಸ್ಥರು ಬಹುಕಾಲದ ಸಮಸ್ಯೆಗಳನ್ನು ಶಾಸಕರ ಮುಂದಿಟ್ಟರು. 15 ವರ್ಷಗಳಿಂದ ಕಾಮಗಾರಿ ಆರಂಭಗೊಂಡು ಪೂರ್ಣಗೊಳ್ಳದ ಸೇತುವೆ ನಿರ್ಮಾಣ, ದಶಕಗಳಿಂದ ಹದಗೆಟ್ಟಿರುವ ರಸ್ತೆಗಳು, ಜಲಮೂಲ ಇದ್ದರೂ ಕುಡಿಯುವ ನೀರಿಗೆ ಹಾಹಾಕಾರ, ರಸ್ತೆಬದಿಯ ಅಪಾಯದ ವಿದ್ಯುತ್ ಕಂಬಗಳು, ಸಾರಿಗೆ ಬಸ್ ಬಾರದಿರುವುದು ಸೇರಿದಂತೆ ಹತ್ತಾರು ಸಮಸ್ಯೆಗಳನ್ನು ಶಾಸಕರ ಮುಂದಿಟ್ಟರು.



ಗಾಳಿಬೀಡು ಗ್ರಾಪಂ ವ್ಯಾಪ್ತಿಯ ಕಾಲೂರು ಗ್ರಾಮದಲ್ಲಿ ನಡೆದ ಸಭೆಯಲ್ಲಿ ಶಾಸಕ ಡಾ.ಮಂತರ್‌ಗೌಡ ಗ್ರಾಮಸ್ಥರ ಅಹವಾಲು ಆಲಿಸಿದರು.

ಎಲ್ಲಾ ಸಮಸ್ಯೆ ಆಲಿಸಿದ ಶಾಸಕ ಮಂತರ್ ಗೌಡ, ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳದಲ್ಲೇ ಕೆಲ ಸಮಸ್ಯೆಗಳನ್ನು ಬಗೆಹರಿಸಿದರು. ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಕರೆ ಮಾಡಿ ಭಾನುವಾರವೂ ಬಸ್ ಸಂಚಾರಕ್ಕೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಂಜಿನಿಯರ್‌ಗೆ 15 ದಿನಗಳೊಳಗೆ ನೀರಿನ ವ್ಯವಸ್ಥೆ ಸರಿಪಡಿಸಲು ಸೂಚನೆ ನೀಡಿದರು. ಕೂಟುಹೊಳೆಯಿಂದ ಗಾಳಿಬೀಡು ರಸ್ತೆ ಮರುನಿರ್ಮಾಣಕ್ಕೆ 3 ಕೋಟಿ ರೂ. ನೀಡಿದ್ದು, ಟೆಂಡರ್ ಪ್ರಕ್ರಿಯೆ ನಡೆದಿದೆ ಎಂದು ವಿವರಿಸಿದರು. ದೇವಸ್ತೂರು, ಕಾಲೂರು, ಬಾರಿಬೆಳ್ಳಚ್ಚು ಮೂಲಕ ಮಾಂದಲಪಟ್ಟಿಗೆ ಹೋಗುವ ಲೋಕೋಪಯೋಗಿ ರಸ್ತೆಯ ಅಂದಾಜು ಪಟ್ಟಿ ಸಲ್ಲಿಕೆಗೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೆಚ್ಚಿನ ಸಾಮರ್ಥ್ಯದ 3 ಟ್ರಾನ್ಸ್‌ಫಾರ್ಮರ್ ಅನ್ನು ಗ್ರಾಮದ ವಿವಿಧ ಭಾಗಗಳಲ್ಲಿ ಅಳವಡಿಸಲು ಸೆಸ್ಕ್‌ಗೆ ಆದೇಶಿಸಿದರು. ಕಾಲೂರು ಶಾಲೆಯಿಂದ ಅಯ್ಯಪ್ಪ ದೇವಸ್ಥಾನಕ್ಕೆ ಹೋಗುವ ರಸ್ತೆಯ ಅಭಿವೃದ್ಧಿ ಕಾರ್ಯವನ್ನು ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಿ ಮಾರ್ಚ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲು ಪಂಚಾಯತ್ ರಾಜ್ ಇಂಜಿನಿಯರ್‌ಗೆ ಶಾಸಕರು ಸೂಚನೆ ನೀಡಿದರು.

ನಂತರ ಮಾತನಾಡಿದ ಡಾ.ಮಂತರ್ ಗೌಡ ತಮ್ಮ ಕ್ಷೇತ್ರದ ಎಲ್ಲಾ ಗ್ರಾಮಗಳು ಕುಗ್ರಾಮ ಎಂಬ ಹಣೆಪಟ್ಟಿ ಕಳಚಿ ಸುಗ್ರಾಮಗಳಾಗಿ ಬದಲಾಗಬೇಕು. ಇದು ನನ್ನ ಹೆಬ್ಬಯಕೆಯಾಗಿದ್ದು, ಅದನ್ನು ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭ ಕಾಂಗ್ರೆಸ್ ಪ್ರಮುಖರಾದ ಹೆಚ್.ಎ.ಹಂಸ, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆ ಜಿಲ್ಲಾಧ್ಯಕ್ಷ ತೆನ್ನಿರ ಮೈನಾ, ಐಲಪಂಡ ಪುಷ್ಪ ಪೂಣಚ್ಚ, ಕೋಚನ ಹರಿಪ್ರಸಾದ್, ವಿ.ಜಿ.ಮೋಹನ್, ರೋಶನ್ ಗಣಪತಿ, ಪೊನ್ನಪ್ಪ ತಿಮ್ಮಯ್ಯ, ಪವನ್, ಸಾಗರ್, ಕವನ್, ಶರಣ್ ಗ್ರಾಮಸ್ಥರು ಹಾಜರಿದ್ದರು.


ಮ.ಬೆಟ್ಟದ ಸಂಪುಟ ಸಭೆಗೆ ಮತ್ತೊಂದು ದಿನಾಂಕ ನಿಗದಿ

● ಮಾ.8ರಂದು ಮಲೆ ಮಹದೇಶ್ವರಬೆಟ್ಟದಲ್ಲಿ ಸಭೆ ● ಈವರೆಗೆ ಮೂರು ಬಾರಿ ಬದಲಾವಣೆ

ಚಾಮರಾಜನಗರ, ಫೆ.13–ಜಿಲ್ಲೆಯ ಅಭಿವೃದ್ಧಿ ಕುರಿತು ಸಾಕಷ್ಟು ನಿರೀಕ್ಷೆ ಮೂಡಿಸಿರುವ ಮಲೆಮಹದೇಶ್ವರಬೆಟ್ಟದ ಸಚಿವ ಸಂಪುಟ ಸಭೆ ದಿನಾಂಕ ಈವರೆಗೆ ಮೂರು ಬಾರಿ ಬದಲಾಗಿದ್ದು, ಪ್ರಸ್ತುತ ಮತ್ತೊಂದು ದಿನಾಂಕ ನಿಗದಿಯಾಗಿದೆ.

ಮಾ.8ರಂದು ಮಹದೇಶ್ವರಬೆಟ್ಟದಲ್ಲಿ ಸಂಪುಟ ಸಭೆ ಹಾಗೂ ಮಾ.9ರಂದು ಚಾಮರಾಜನಗರ ಜಿಲ್ಲಾ ಕೇಂದ್ರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಬೃಹತ್ ಸಮಾವೇಶ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಕಚೇರಿಯಿಂದ ಅಧಿಕೃತವಾಗಿ ದಿನಾಂಕ ವೇಳಾಪಟ್ಟಿ ಬಂದಿದೆ ಎಂದು ತಿಳಿದು ಬಂದಿದೆ.

ರೈತ ಮುಖಂಡರ ಪ್ರತಿಕ್ರಿಯೆ: ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಜಿಲ್ಲೆಯ ಪವಿತ್ರ ಕ್ಷೇತ್ರ ಮಹದೇಶ್ವರ ಬೆಟ್ಟದಲ್ಲಿ ಸಂಪುಟ ಸಭೆ ನಡೆಸಲು ಸರ್ಕಾರ ನಿರ್ಧರಿಸಿತ್ತು. ಇದಕ್ಕೆ ಈಗಾಗಲೇ ಮೂರು ಬಾರಿ ದಿನಾಂಕ ಕೂಡ ನಿಗದಿಯಾಗಿತ್ತು. ಆದರೆ, ಮೂರು ಬಾರಿಯೂ ದಿನಾಂಕ ಬದಲಾಗಿದೆ. ಜನರು ವಿದ್ಯುತ್, ಕುಡಿಯುವ ನೀರು ಸೇರಿದಂತೆ ಮೂಲ ಸೌಕರ್ಯಗಳನ್ನು ನಿರೀಕ್ಷಿಸುತ್ತಿದ್ದಾರೆ ಎಂದು ರೈತ ಮುಖಂಡ, ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಹೇಳಿದರು.



ಮಲೆ ಮಹದೇಶ್ವರಬೆಟ್ಟ

ಕ್ಯಾಬಿನೆಟ್‌ನಲ್ಲಿ ವಿಶೇಷ ಪ್ಯಾಕೇಜ್ ಘೋಷಿಸುವ ಬಗ್ಗೆ ಜನರಲ್ಲಿ ಭರವಸೆ ಇತ್ತು. ಆದರೆ, ಇದೀಗ ಮೂರನೇ ಬಾರಿಗೆ ಸಚಿವ ಸಂಪುಟ ಮುಂದೂಡಿಕೆ ಆಗಿರುವುದರಿಂದ ಜಿಲ್ಲೆಗೆ ಸಾಕಷ್ಟು ಅನುದಾನ ನೀಡುವ ಅನಿವಾರ್ಯತೆ ಎದುರಾಗುವ ದೃಷ್ಟಿಯಿಂದ ಸರ್ಕಾರ ಪದೇ ಪದೇ ದಿನಾಂಕ ಬದಲಾವಣೆ ಮಾಡುತ್ತಿದೆ. ಇದು ಸರ್ಕಾರ ಜಿಲ್ಲೆಯ ಜನರಿಗೆ ಮಾಡುತ್ತಿರುವ ಮೋಸ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾ.8ರಂದು ಸಂಪುಟ ಸಭೆ: ಫೆ.16ರಂದು ಚಾಮರಾಜನಗರದಲ್ಲಿ ಸಮಾವೇಶ ಹಾಗೂ ಫೆ.17ರಂದು ಸಂಪುಟ ಸಭೆ ನಡೆಸಲು ದಿನಾಂಕ ನಿಗದಿಯಾಗಿತ್ತು. ಇದಕ್ಕೆ ಮುಂಚೆ ಎರಡು ಬಾರಿ ದಿನಾಂಕ ಬದಲಾಗಿತ್ತು. ಇದು ಸೇರಿ ಮೂರನೇ ಬಾರಿಗೆ ದಿನ ಬದಲಾವಣೆಯಾಗಿದೆ. ಮತ್ತೆ ನಮಗೆ ಮಾ.8ರಂದು ಸಂಪುಟ ಸಭೆ ಹಾಗೂ ಮಾ.9ರಂದು ಚಾಮರಾಜನಗರದಲ್ಲಿ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.

> ಮಹದೇಶ್ವರಬೆಟ್ಟದಲ್ಲಿ ಮಾ.8ರಂದು ಸಂಪುಟ ಸಭೆ, ಚಾಮರಾಜನಗರದಲ್ಲಿ ಮಾ.9ರಂದು ಬೃಹತ್ ಸಮಾವೇಶ ನಡೆಸಲು ದಿನಾಂಕ ನಿಗದಿ ಮಾಡಲಾಗಿದ್ದು, ತಯಾರಿ ಮಾಡಿಕೊಳ್ಳುವಂತೆ ಸರ್ಕಾರ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದೆ.
>
> –ಶಿಲ್ಪಾನಾಗ್, ಜಿಲ್ಲಾಧಿಕಾರಿ

ಈ ಬಾರಿಯಾದರೂ ನಡೆಯುತ್ತಾ ಸಭೆ?: ಚಾಮರಾಜನಗರಕ್ಕೆ ಬಂದರೆ ಅಧಿಕಾರ ಹೋಗುತ್ತೆ ಎಂಬ ಭಯ ಹಿಂದೆ ರಾಜ್ಯದ ಬಹುತೇಕ ಮುಖ್ಯಮಂತ್ರಿಗಳಲ್ಲಿತ್ತು. ಆ ಮೌಢ್ಯಕ್ಕೆ ಸೆಡ್ಡು ಹೊಡೆದಿದ್ದ ಸಿಎಂ ಸಿದ್ದರಾಮಯ್ಯ ಸಾಕಷ್ಟು ಬಾರಿ ಜಿಲ್ಲೆಗೆ ಭೇಟಿ ನೀಡಿದ್ದಾರೆ. ಪದೇ ಪದೇ ದಿನಾಂಕ ಬದಲಾಗುತ್ತಿರುವುದ್ಯಾಕೆ? ಬಜೆಟ್ ಅಧಿವೇಶನ ಮಾರ್ಚ್‌ನಲ್ಲಿ ನಡೆಯುವ ಸಾಧ್ಯತೆ ಹಿನ್ನೆಲೆಯಲ್ಲಿ ಮುಂದೆ ನಿಗದಿಯಾಗಿರುವ ದಿನಾಂಕದಲ್ಲಾದರೂ ಸಂಪುಟ ಸಭೆ ನಡೆಯುತ್ತಾ? ಎಂಬ ಪ್ರಶ್ನೆ ಜಿಲ್ಲೆಯ ಜನರಲ್ಲಿ ಕಾಡುತ್ತಿದೆ.

ತೆರಕಣಾಂಬಿಯಲ್ಲಿ ವರದರಾಜ ರಥೋತ್ಸವ



ತೆರಕಣಾಂಬಿಯಲ್ಲಿ ಲಕ್ಷ್ಮೀ ವರದರಾಜಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಗುಂಡ್ಲುಪೇಟೆ, ಫೆ.13–ತಾಲೂಕಿನ ತೆರಕಣಾಂಬಿ ಗ್ರಾಮದ ಪುರಾಣ ಪ್ರಸಿದ್ಧ ಶ್ರೀ ಲಕ್ಷ್ಮೀ ವರದರಾಜಸ್ವಾಮಿ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ನಾಲ್ಕು ದಿನಗಳಿಂದ ದೇವಾಲಯದಲ್ಲಿ ನಾನಾ ಪೂಜಾ ಕೈಂಕರ್ಯ ನಡೆಸಲಾಯಿತು. ಗ್ರಾಮದ ಎಲ್ಲಾ ಬೀದಿಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಮನೆಗಳ ಮುಂದೆ ಮಹಿಳೆಯರು ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ರಥ ಸಾಗುವ ಉದ್ದಕ್ಕೂ ರಸ್ತೆಗೆ ನೀರು ಹಾಕಿದ್ದರು. ರಥ ಸಾಗುವ ಮಾರ್ಗದುದ್ದಕ್ಕೂ ಭಕ್ತರಿಗೆ ಉದ್ಯಮಿಗಳು, ವಿವಿಧ ಸಂಘ–ಸಂಸ್ಥೆಗಳು ಕುಡಿಯುವ ನೀರು, ಮಜ್ಜಿಗೆ, ಪಾನಕ, ಮೊಸರನ್ನ, ಬಾತ್, ಪುಳಿಯೋಗರೆ ಸೇರಿದಂತೆ ಉಪಹಾರ ನೀಡಿದರು.

ಇದ್ದಕೂ ಮುನ್ನ ತಹಸೀಲ್ದಾರ್ ರಮೇಶ್ ಬಾಬು ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ದೇವರ ದರ್ಶನ ಪಡೆದರು.

ಮ.ಬೆಟ್ಟದಲ್ಲಿ ನಿಷೇಧಿತ ಪ್ಲಾಸ್ಟಿಕ್ ಪದಾರ್ಥ ವಶ



ಮಹದೇಶ್ವರಬೆಟ್ಟದಲ್ಲಿ ನಿಷೇಧಿತ ಪ್ಲಾಸ್ಟಿಕ್ ಮಾರಾಟದ ಅಂಗಡಿಗಳ ಮೇಲೆ ಎ.ಈ.ರಘು ನೇತೃತ್ವದಲ್ಲಿ ದಾಳಿ ನಡೆಸಲಾಯಿತು.

ಹನೂರು: ಶ್ರೀಕ್ಷೇತ್ರ ಮಹದೇಶ್ವರಬೆಟ್ಟದಲ್ಲಿ ನಿಷೇಧಿತ ಪ್ಲಾಸ್ಟಿಕ್ ಪದಾರ್ಥಗಳನ್ನು ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ.ರಘು ನೇತೃತ್ವದಲ್ಲಿ ವಶಪಡಿಸಿಕೊಳ್ಳಲಾಯಿತು.

ಮಹದೇಶ್ವರಬೆಟ್ಟವನ್ನು ಪ್ಲಾಸ್ಟಿಕ್ ಮುಕ್ತ ಪ್ರದೇಶವೆಂದು ಈಗಾಗಲೇ ಘೋಷಿಸಲಾಗಿದ್ದು, ಕಳೆದ ಒಂದು ವಾರದ ಹಿಂದೆಯೇ ಪ್ರಾಧಿಕಾರದ ಕಾರ್ಯದರ್ಶಿ ರಘು ಅವರು ಸಿಬ್ಬಂದಿಗಳೊಂದಿಗೆ ಇನ್ನು ಮುಂದೆ ಬೆಟ್ಟದಲ್ಲಿ ಪ್ಲಾಸ್ಟಿಕ್ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲು ಎಚ್ಚರಿಕೆ ವಹಿಸಬೇಕು ಎಂದು ಅಂಗಡಿಗಳ ಮಾಲೀಕರು ಹಾಗೂ ವ್ಯಾಪಾರಿಗಳಿಗೆ ಸೂಚನೆ ನೀಡಿದ್ದರು. ಅಲ್ಲದೆ, ಎಲ್ಲಾ ಮಳಿಗೆದಾರರಿಗೆ ನೋಟಿಸ್ ನೀಡಿದ್ದರು.

ಆದರೂ ಪ್ರಾಧಿಕಾರದ ಮಳಿಗೆಗಳಲ್ಲಿ ನೀರಿನ ಪ್ಲಾಸ್ಟಿಕ್ ಬಾಟಲ್, ಲೋಟ ತಟ್ಟೆ, ಕವರ್ ಸೇರಿದಂತೆ ಇನ್ನಿತರ ಪ್ಲಾಸ್ಟಿಕ್ ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಹಾಗೂ ಸಿಬ್ಬಂದಿ ಮಹದೇಶ್ವರಬೆಟ್ಟ ಹಾಗೂ ತಾಳುಬೆಟ್ಟದ ಅಂಗಡಿಗಳಲ್ಲಿ ದಾಳಿ ನಡೆಸಿ ಒಂದು ಸಾವಿರಕ್ಕೂ ಹೆಚ್ಚಿನ ನೀರಿನ ಬಾಟಲ್, 5 ಕೆಜಿ ಪ್ಲಾಸ್ಟಿಕ್ ಕವರ್, 3 ಬಂಡಲ್ ಬೀಡಿ, 4 ಪ್ಯಾಕ್ ಸಿಗರೇಟ್, ತಂಬಾಕು ಪದಾರ್ಥ, ಜ್ಯೂಸ್ ಪೌಚ್‌ಗಳನ್ನು ವಶಕ್ಕೆ ಪಡೆದರು.

ದಾಳಿಯಲ್ಲಿ ಪ್ರಾಧಿಕಾರದ ಉಪಕಾರ್ಯದರ್ಶಿ ಚಂದ್ರಶೇಖರ್, ಸಿಬ್ಬಂದಿ ಜನಾರ್ಧನ್, ಕೃಷ್ಣಕುಮಾರ್, ಮಹದೇವ್ ಪ್ರಭು, ರಮೇಶ್, ಇಂದ್ರೇಶ್, ನಾಗರಾಜ್ ಅರಸು, ರವೀಂದ್ರ ಸೆಕ್ಯುರಿಟಿ ಸೂಪರ್‌ವೈಸರ್ ಮಾದೇಶ್, ಪೇದೆ ಬಂಗಾರು, ಅರಣ್ಯ ವೀಕ್ಷಕ ಶಿವರಾಜು ಇನ್ನಿತರರು ಪಾಲ್ಗೊಂಡಿದ್ದರು.

ವಿಶ್ವನಾಥ್ ನಿಧನ

ಕೊಳ್ಳೇಗಾಲ: ತಾಲೂಕಿನ ಕುಣಗಳ್ಳಿ ಗ್ರಾಮದ ಮುಖಂಡ ಸುಂದರ್ ಅವರ ಪುತ್ರ ವಿಶ್ವನಾಥ್(28) ಹೃದಯಾಘಾತದಿಂದ ನಿಧನರಾದರು.



ಮೃತರು ತಂದೆ, ತಾಯಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಸಂತಾಪ: ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ತಾಪಂ ಮಾಜಿ ಸದಸ್ಯ ಬಸವಣ್ಣ, ಸಂತಾಪ ಸೂಚಿಸಿದರು.

ಕೊಳ್ಳೇಗಾಲದಲ್ಲಿ ವಿಜೃಂಭಣೆಯ ರಥೋತ್ಸವ

ಕೊಳ್ಳೇಗಾಲ: ಇತಿಹಾಸ ಪ್ರಸಿದ್ಧ ಶ್ರೀ ಲಕ್ಷ್ಮಿನಾರಾಯಣ ಸ್ವಾಮಿ ಬ್ರಹರಥೋತ್ಸವ ಗುರುವಾರ ಸಹಸ್ರಾರು ಭಕ್ತರ ನಡುವೆ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಕಾವೇರಿ ರಸ್ತೆ ಬಳಿಯ ದೇವಸ್ಥಾನದ ಮುಂಭಾಗದಲ್ಲಿ ಸಿಂಗಾರಗೊಂಡ ರಥದ ಮೇಲೆ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿದ ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಇದಕ್ಕೂ ಮುನ್ನ ದೇವಸ್ಥಾನದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ರಥೋತ್ಸವದಲ್ಲಿ ದಾಸರು ಜಾಗಟೆ ಹಾಗೂ ಶಂಖ ಸಮೇತ ವಾದ್ಯ ಮೊಳಗಿಸಿದರು.

ಭಕ್ತರಿಗೆ ಪಾನಕ, ಮಜ್ಜಿಗೆ, ಕೊಸಂಬರಿ, ಹಸಿರು ಬೇಳೆ ವಿತರಿಸಲಾಯಿತು. ಪ್ರಧಾನ ಅರ್ಚಕ ಶೇಷಾದ್ರಿ ಭಟ್, ಸುದರ್ಶನ ಭಟ್ ನೇತೃತ್ವದಲ್ಲಿ ಪೂಜಾ ಕಾರ್ಯ ನೆರವೇರಿಸಲಾಯಿತು. ಈ ವೇಳೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಚಾಮುಲ್ ಅಧ್ಯಕ್ಷ ಮಧುವನಹಳ್ಳಿ ನಂಜುಂಡಸ್ವಾಮಿ, ಉಪವಿಭಾಗಾಧಿಕಾರಿ ಮಹೇಶ್, ಡಿವೈಎಸ್ಪಿ ಧರ್ಮೇಂದ್ರ, ನಗರಸಭೆ ಅಧ್ಯಕ್ಷೆ ರೇಖಾ ರಮೇಶ್, ಸಂಸದ ಜಗದೀಶ್ ಶೆಟ್ಟರ್ ಆಪ್ತ ಕಾರ್ಯದರ್ಶಿ ಗಿರೀಶ್ ಬಾಬು, ಮುಖಂಡರಾದ ನರಸಿಂಹನ್, ಮಧುಚಂದ್ರ, ರಮೇಶ್, ನಂಜಪ್ಪ ಇದ್ದರು.



ಕೊಳ್ಳೇಗಾಲದಲ್ಲಿ ನಾರಾಯಣಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ರೈತರ ಪ್ರತಿಭಟನೆ



ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಚಾ.ನಗರದಲ್ಲಿ ರೈತ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.13–ರಾಜ್ಯದ ಹಲವೆಡೆ ಮೈಕ್ರೋ ಫೈನಾನ್ಸ್‌ಗಳ ಹಾವಳಿಯಿಂದ ಬಡವರು ಹಾಗೂ ಮಧ್ಯಮ ವರ್ಗದವರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆರೋಪಿಸಿ ರೈತ ಸಂಘದ ಪದಾಧಿಕಾರಿಗಳು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ನಗರದ ರಾಮಸಮುದ್ರದ ಜನಸ್ಮಾಲ್, ಇಕ್ವಿಟಾಸ್ ಫೈನಾನ್ಸ್‌ಗಳಿಗೆ ಮುತ್ತಿಗೆ ಹಾಕಿದ ಪ್ರತಿಭಟನಾಕಾರರು, ಕೆಲಕಾಲ ಪ್ರತಿಭಟನೆ ನಡೆಸಿದರು. ಇದೇ ವೇಳೆ ಮೈಕ್ರೋ ಫೈನಾನ್ಸ್‌ಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ಹೊನ್ನೂರು ಪ್ರಕಾಶ್ ಮಾತನಾಡಿ, ಶೇ.16ಕ್ಕಿಂತ ಹೆಚ್ಚಿನ ಬಡ್ಡಿ ಪಡೆಯುವಂತಿಲ್ಲ. ಆದರೆ, ಶೇ.20ಕ್ಕಿಂತ ಹೆಚ್ಚು ಬಡ್ಡಿ ವಿಧಿಸಿ ವಸೂಲಿ ಮಾಡಲಾಗುತ್ತಿದೆ. ಆರ್‌ಬಿಐ ಮಾರ್ಗಸೂಚಿಗಳನ್ವಯ ಫೈನಾನ್ಸ್ ವ್ಯವಹಾರ ಮಾಡಬೇಕು. ಆದರೆ, ಅದನ್ನು ಉಲ್ಲಂಘಿಸಿ ಶೇ.24, ಶೇ.33ರಷ್ಟು ಬಡ್ಡಿ ವಿಧಿಸಲಾಗುತ್ತಿದೆ. ಮೈಕ್ರೋ ಫೈನಾನ್ಸ್‌ನವರು ಗ್ರಾಮಗಳಿಗೆ ತೆರಳಿ ನೋಟಿಸ್ ನೀಡಿದರೆ ಅವರಿಗೆ ತಕ್ಕಪಾಠ ಕಲಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಅಂಬಳೆ ಶಿವಕುಮಾರ್, ಬೆಟ್ಟದಮರ ಬಸವಣ್ಣ ಇತರರು ಭಾಗವಹಿಸಿದ್ದರು.





ರಾಜು ಜೇಮ್ಸ್‌ಬಾಂಡ್‌ಗೆ ಮೋಹಕತಾರೆ ರಮ್ಯಾ ಸಾಥ್

ಹಳ್ಳಿ ಹುಡುಗನೊಬ್ಬ ಸಿಟಿಗೆ ಬಂದು ಜೇಮ್ಸ್‌ಬಾಂಡ್ ಹೇಗಾದ ಎಂಬುದನ್ನು ನಿರ್ದೇಶಕ ದೀಪಕ್ ಮಧುವನಹಳ್ಳಿ ಅವರು ರಾಜು ಜೇಮ್ಸ್‌ಬಾಂಡ್ ಚಿತ್ರ ಮೂಲಕ ಹೇಳಹೊರಟಿದ್ದಾರೆ. ಈ ಚಿತ್ರ ಇಂದಿನಿಂದ ರಾಜ್ಯಾದ್ಯಂತ ತೆರೆಕಂಡಿದೆ, ಇತ್ತೀಚೆಗೆ ನಡೆದ ಈ ಚಿತ್ರದ ಪ್ರೀರಿಲೀಸ್ ಕಾರ್ಯಕ್ರಮದಲ್ಲಿ ಗೃಹಸಚಿವ ಡಾ.ಜಿ.ಪರಮೇಶ್ವರ್ ಹಾಗೂ ಮೋಹಕತಾರೆ ರಮ್ಯಾ ಮುಖ್ಯ ಅತಿಥಿಗಳಾಗಿ ಆಗಮಿಸಿ ಚಿತ್ರತಂಡಕ್ಕೆ ಶುಭ ಕೋರಿದರು. ವೆಂಕಟೇಶ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ನಿರ್ಮಾಪಕ ರಮೇಶ್‌ರೆಡ್ಡಿ, ಸಂಜಯ್ ಗೌಡ, ತಪಸ್ವಿನಿ ಕೂಡ ಭಾಗವಹಿಸಿದ್ದರು. ನಟಿ ರಮ್ಯಾ ಮಾತನಾಡುತ್ತ, ಈ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ತುಂಬಾ ಚೆನ್ನಾಗಿವೆ. ಛಾಯಾಗ್ರಹಣವಂತೂ ಸೂಪರ್. ಅಷ್ಟೇ ಚೆನ್ನಾಗಿ ನಾಯಕ ಹಾಗೂ ನಾಯಕಿ ಕೂಡ ಅಭಿನಯಿಸಿದ್ದಾರೆ. ಪ್ರೇಮಿಗಳ ದಿನದಂದು ಬಿಡುಗಡೆಯಾಗುತ್ತಿರುವ ಈ ಚಿತ್ರವು ಹಿಂದಿನ ಚಿತ್ರಕ್ಕಿಂತ ದೊಡ್ಡ ಮಟ್ಟದ ಯಶಸ್ಸು ಕಾಣಲಿ ಎಂದು ಶುಭ ಹಾರೈಸಿದರು. ನಮಗೀಗ ಹೆರಿಗೆ ನೋವು ಶುರುವಾಗಿದೆ. ಫೆಬ್ರವರಿ 14ರ ಶುಕ್ರವಾರ ಹೆರಿಗೆಯಾಗಲಿದೆ. ಒಂದೊಳ್ಳೆ ಸಿನಿಮಾ ಮಾಡಿರುವ ಖುಷಿಯಿದೆ. ದಯವಿಟ್ಟು ಎಲ್ಲರೂ ನಮ್ಮ ಚಿತ್ರವನ್ನು ನೋಡಿ ಪ್ರೋತ್ಸಾಹಿಸಿ ಎಂದು ನಿರ್ಮಾಪಕರಾದ ಮಂಜುನಾಥ್ ವಿಶ್ವಕರ್ಮ ಹಾಗೂ ಕಿರಣ್ ಭರ್ತೂರ್ ಹೇಳಿದರು. ನಿರ್ದೇಶಕ ದೀಪಕ್ ಮಧುವನಹಳ್ಳಿ ಮಾತನಾಡಿ, ಇಡೀ ಚಿತ್ರ ಕಾಮಿಡಿಯಾಗಿ ಸಾಗಿ ಕೊನೆಯಲ್ಲಿ ಪ್ರೇಕ್ಷಕರನ್ನು ಭಾವನಾತ್ಮಕವಾಗಿ ಹಿಡಿದಿಡುತ್ತದೆ, ನಮ್ಮ ಚಿತ್ರವನ್ನು ಶುಕ್ರವಾರದಿಂದ ಜನರ ಮಡಿಲಿಗೆ ಹಾಕುತ್ತಿದ್ದೇವೆ. ಅವರ ಅಭಿಪ್ರಾಯಕ್ಕೆ ಕಾಯುತ್ತಿದ್ದೇವೆ ಎಂದರು.

ನಾಯಕ ಗುರುನಂದನ್ ಹಾಗೂ ನಾಯಕಿ ಮೃದುಲ ತಮ್ಮ ಪಾತ್ರಗಳ ಬಗ್ಗೆ ಚಿಕ್ಕದಾಗಿ ಹೇಳಿಕೊಂಡರು. ನಟ ಚಿಕ್ಕಣ್ಣ ಮಾತನಾಡಿ, ನಾನು ಈ ಚಿತ್ರದಲ್ಲಿ ಟಿ.ಆರ್.ಪಿ. ಎಂಬ ಖಾಸಗಿ ವಾಹಿನಿಯ ರಿಪೋರ್ಟರ್ ಆಗಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ಹಾಸ್ಯನಟ ತಬಲನಾಣಿ, ಛಾಯಾಗ್ರಾಹಕ ಮನೋಹರ್ ಜೋಶಿ ಮುಂತಾದವರು ಚಿತ್ರದ ಕುರಿತಂತೆ ಮಾತನಾಡಿದರು. ಗುರುನಂದನ್, ಮೃದುಲಾ, ಸಾಧು ಕೋಕಿಲ, ಅಚ್ಯುತ್‌ಕುಮಾರ್, ಚಿಕ್ಕಣ್ಣ, ರವಿಶಂಕರ್, ಜೈಜಗದೀಶ್ ಪ್ರಮುಖ ತಾರಾಬಳಗದಲ್ಲಿದ್ದಾರೆ. ಮನೋಹರ ಜೋಶಿ ಅವರ ಛಾಯಾಗ್ರಹಣ, ಅನೂಪ್ ಸೀಳಿನ್ ಅವರ ಸಂಗೀತ ನಿರ್ದೇಶನ ಹಾಗೂ ಅಮಿತ್ ಚವಳ್ಕರ್ ಅವರ ಸಂಕಲನವಿರುವ "ರಾಜು ಜೇಮ್ಸ್ ಬಾಂಡ್" ಚಿತ್ರಕ್ಕೆ ಜಗದೀಶ್ ನಡಹಳ್ಳಿ ಸಂಭಾಷಣೆ ಬರೆದಿದ್ದಾರೆ.




'ನನಗೂ ಲವ್ವಾಗಿದೆ' ಬೆಳಗಾವಿಯಿಂದ ಬೆಂಗಳೂರಿಗೆ ಹಾದುಬಂದ ಪ್ರೇಮಕಥೆ...

ಬೆಳಗಾವಿಯಿಂದ ಬೆಂಗಳೂರಿನವರೆಗೆ ಸಾಗುವ ಪ್ರೇಮಕಥೆ ಹೇಳುವ ಚಿತ್ರ 'ನನಗೂ ಲವ್ವಾಗಿದೆ'. ಬಿ.ಎಸ್. ರಾಜಶೇಖರ್ ಅವರ ನಿರ್ದೇಶನದ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಯಿತು. ಶ್ರೀಕಾಳಿ ಅಮ್ಮನ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಕೆ.ನೀಲಕಂಠನ್ ಅವರು ಈ ಚಿತ್ರದ ಕಥೆ ಬರೆದು ನಿರ್ಮಾಣ ಮಾಡುವ ಜೊತೆಗೆ ಖಡಕ್ ವಿಲನ್ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಬಿ.ಎಸ್. ರಾಜಶೇಖರ್ ಸಂಭಾಷಣೆಯ ಜತೆ ಎರಡು ಹಾಡುಗಳಿಗೆ ಸಾಹಿತ್ಯ ರಚಿಸಿ ಆಕ್ಷನ್ ಕಟ್ ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ರಾಜಶೇಖರ್, ನಾನು ಬೇರೊಂದು ಚಿತ್ರದ ಕೆಲಸಕ್ಕೆ ಶಾಂತಿನಗರ ಸ್ಮಶಾನಕ್ಕೆ ಹೋಗಿದ್ದೆ. ಅಲ್ಲೇ ಗ್ರಂಥಿಗೆ ಅಂಗಡಿ ಇಟ್ಟುಕೊಂಡಿದ್ದ ನಿರ್ಮಾಪಕ ನೀಲಕಂಠನ್ ಅವರು ಸ್ಮಶಾನದ ಬಳಿ ಈ ಕಥೆ ಹೇಳುತ್ತಾ, ನೀವೇ ನಿರ್ದೇಶನ ಮಾಡಿರೆಂದು ಕೋರಿಕೊಂಡರು. ನಂತರ ಅವರು ರೆಡಿ ಮಾಡಿಕೊಂಡಿದ್ದ ಕಥೆಯನ್ನಿಟ್ಟುಕೊಂಡು ಶೂಟಿಂಗ್ ಶುರು ಮಾಡಿದೆವು, ಅವರ ಪುತ್ರ ಸೋಮ ವಿಜಯ್ ಅವರೇ ನಾಯಕನಾಗಿ ನಟಿಸಿದ್ದಾರೆ. ನನ್ನ ನಿರ್ದೇಶನದ ಐದನೇ ಚಿತ್ರವಿದು. ಟೈಟಲ್ ಕೇಳಿದೊಡನೆ ಇದು ಹುಡುಗ, ಹುಡುಗಿಯ ನಡುವಿನ ಲವ್ ಸ್ಟೋರಿ ಇರಬಹುದು ಅಂದುಕೊಳ್ಳೋದು ಸಹಜ, ಆದರೆ ಇದರಲ್ಲಿ ತಂದೆ, ತಾಯಿ, ಚಿಕ್ಕಪ್ಪ ಇಡೀ ಕುಟುಂಬದಲ್ಲಿ ಒಂದೊಂದು ರೀತಿಯಲ್ಲಿ ಲವ್ ಆಗುವುದನ್ನು ತೋರಿಸಿದ್ದೇವೆ, ಬೆಳಗಾವಿಯಲ್ಲಿ ನಾಯಕ ಸಾಲಗಾರರಿಂದ ತಪ್ಪಿಸಿಕೊಳ್ಳಲು ಬೆಂಗಳೂರಿಗೆ ಬರುತ್ತಾನೆ. ಇಲ್ಲಿಗೆ ಬಂದಮೇಲೆ ಆತ ಏನೇನು ಸಮಸ್ಯೆಗಳನ್ನು ಎದುರಿಸುತ್ತಾನೆ. ಕೊನೆಗೆ ಎಲ್ಲವನ್ನು ಹೇಗೆ ಬಗೆಹರಿಸಿಕೊಳ್ಳುತ್ತಾನೆ ಎಂಬುದನ್ನು ಥ್ರಿಲ್ಲರ್, ಕುತೂಹಲಕರ ಸನ್ನಿವೇಶಗಳೊಂದಿಗೆ ನಿರೂಪಿಸಿದ್ದೇವೆ. ಹೊನ್ನಾವರದಲ್ಲಿ ಒಂದು ಹಾಡು ಅಲ್ಲದೆ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ ಎಂದರು. ನಿರ್ಮಾಪಕ ಕೆ.ನೀಲಕಂಠನ್ ಮಾತನಾಡುತ್ತ, ನಾನು ಹುಡುಗನಾಗಿದ್ದಾಗ ನಾಯಕನಾಗಬೇಕೆಂದು ಆಸೆಪಟ್ಟಿದ್ದೆ. ಅದು ಫಲಿಸಲಿಲ್ಲ. ಈಗ ನನ್ನ ಮಗನನ್ನು ಹೀರೋ ಮಾಡಿ ನನ್ನಾಸೆ ಈಡೇರಿಸಿಕೊಂಡಿದ್ದೇನೆ. ಶಾಂತಿನಗರ ಸ್ಮಶಾನದಲ್ಲಿ ಗ್ರಂಥಿಗೆ ಅಂಗಡಿ ಇಟ್ಟುಕೊಂಡಿದ್ದು, ಅದರಲ್ಲಿ ದುಡಿದ ಹಣದಲ್ಲಿ ಈ ಚಿತ್ರ ಮಾಡಿದ್ದೇನೆ ಎಂದು ಹೇಳಿದರು.

ಈ ಚಿತ್ರದಲ್ಲಿ ಸೋಮವಿಜಯ್ ಜತೆ ನಾಯಕಿಯಾಗಿ ತೇಜಸ್ವಿನಿ ರೆಡ್ಡಿ ನಟಿಸಿದ್ದಾರೆ. ಬೆಳಗಾವಿಯ ಕಾರ್ಪೋರೇಟರ್ ಪಾತ್ರದಲ್ಲಿ ಪಿ.ಮೂರ್ತಿ, ಉಳಿದಂತೆ ಕಾರ್ತಿಕ್ ರಾಮಚಂದ್ರ, ದೊರೆ, ನವೀನ್, ಸವಿತಾ, ಶಾಂತ ಆಚಾರ್ಯ, ರಾಜ್‌ಕುಮಾರ್ ಪತ್ತಾರ್ ಮುಂತಾದವರು ನಟಿಸಿದ್ದಾರೆ. ಚಿತ್ರದ ನಾಲ್ಕು ಹಾಡುಗಳಿಗೆ ಬಿ.ಆರ್. ಹೇಮಂತ್‌ಕುಮಾರ್ ಅವರ ಸಂಗೀತ, ಅಣಜಿ ನಾಗರಾಜ್ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ.

ಸಿನಿಪದಬಂಧ-564



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ರವಿಯ ಪ್ರೀತಿಯ ಜಗತ್ತು! 4
3.ಸೀತಾಳೊಂದಿಗೆ ಬಂದವನು 2
5.ದೊಡ್ಡಣ್ಣ, ಸಾಧುಕೋಕಿಲ, ಪ್ರಮೋದ್ ಚಕ್ರವರ್ತಿ ಅಭಿನಯದ ಚಿತ್ರ 3
7.ದರ್ಶನ್ ಅಭಿನಯದ ಚಿತ್ರಗಳಲ್ಲೊಂದು 2
8.ಕಾಶಿನಾಥ್ ದೇವಲೋಕದ ಚೆಲುವ 6
10.ಶಿವಣ್ಣ - ಪ್ರಿಯರಾಮನ್ ಅಭಿನಯದ ಚಿತ್ರ 6
12.ಕಿಚ್ಚ ಸುದೀಪನ ದ್ವಿಪಾತ್ರಾಭಿನಯದ ಚಿತ್ರ 2
13.'ಗೀತೆ'ಯ ಹಿಂದಿನ ನೀರವತೆ 2
15.ಗಣೇಶ್ - ಅಮೂಲ್ಯಳ ಪ್ರೇಮ ಕಾವ್ಯ! 7
18.ಡಾಲಿ ಧನಂಜಯ್‌ನ ಪ್ರೀತಿಯ ಬೈಗುಳ 6
19.ರಾಮಾಯಣವಲ್ಲ ಅನಂತ್‌ನಾಗ್ ಅಭಿನಯದ ಚಿತ್ರ 4

ಮೇಲಿನಿಂದ ಕೆಳಕ್ಕೆ

1.ರವಿಚಂದ್ರನ್ - ಅರ್ಚನಾ ಅಭಿನಯದ ಲವರ್ಸ್ ಹಾಕಿದ ಚಾಲೆಂಜ್! 7
2.ಸ್ವಪ್ನ ನಿಜವಾಗಿದೆ 6
4.ಮುರಾರಿಯೊಂದಿಗೆ ಬಂದವನು 3
5.ವಿಷ್ಣುವರ್ಧನ್ ಅಭಿನಯದಲ್ಲಿ ಆದ ಶಿಕ್ಷೆ 4
6.ಬೆಳದಿಂಗಳ "ಹೆಣ್ಣು" 2
9.ವಿಷ್ಣುವರ್ಧನ್ - ಗಾಯತ್ರಿ ಅಭಿನಯದ ಚಿತ್ರ 7
11.ರಮೇಶ್‌ಗೆ ತಾಯಿನೋ ಹೆಂಡತಿಯೋ! 4
14.ಶಂಕರಿಯ ಕುಳಿತ ಕಾಡು 2
15.ರವಿಚಂದ್ರನ್ ಅಭಿನಯದ ದ್ವಿಪಾತ್ರಭಿನಯದ ಚಿತ್ರ 3
16.ಕ್ರೇಜಿಸ್ಟಾರ್ ಅಭಿನಯದ ಚಿತ್ರವಿದು 4
17.ಲೂಸ್ ಮಾದನ ಆಕಾಶ 3

ಸಿನಿ ಪದಬಂಧ 563ರ ಉತ್ತರ

ಇ	ಳೆ	ಯ	ರಾ	ಜ		ಕೃ	ಷ್ಣ	ಕು	ಮಾ	ರಿ
ಬ್ಬ		ಕ್ಷ		ಗ		ಷ್ಣ				ಜಾ
ನಿ	ಧಿ			ದೇ	ವ	ರು	ಕೊ	ಟ್ಟ	ತಂ	ಗಿ
ತ		ಕ	ನ	ಕ		ಕ್ಕ		ಪು		
ಬ್ಬಿ				ವೀ					ಕಾಂ	
ದ		ಜೋ		ರ	ತ್ನ	ನ್	ಪ್ರ	ಪಂ	ಚ	
ಇ	ಸ್ಮಾ	ಯಿ	ಲ್						ನ	
ಳೆ		ಸ		ಸು		ಅಂ	ಜ	ದ	ಗಂ	ಡು
ಯ				ವ್ವ		ಗಾ			ಗಾ	
ಲಿ	ಫ್ಟ	ಕೊ	ಡ	ಲಾ		ರ		ದಾ		
				ಲಿ		ಕ	ಲ್ಲು	ಸ	ಕ್ಕ	ರೆ

ವಿಜೇತರು: ಲೋಚನ್, ಆದಿಚುಂಚನಗಿರಿ ಕಾಲೇಜು, ಹೆಚ್.ಬಿ.ರೋಡ್, ಹೆಚ್.ಡಿ.ಕೋಟೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ನಮ್ ಪೈಕಿ ಒಬ್ಬಾ ಹೋಗ್ಬುಟ್ಟಾ... ಬ್ಯಾಂಡ್ ಬಜಾಯಿಸಿದ ಮಡೇನೂರ್ ಮನು



ನಮ್ಮ ಆಡುಭಾಷೆಯ ಪದಗಳನ್ನೇ ಪೋಣಿಸಿ ಹಾಡು ಬರೆಯುವುದರಲ್ಲಿ ಯೋಗರಾಜ್ ಭಟ್ಟರು ನಿಸ್ಸೀಮರೆಂದೇ ಹೇಳಬಹುದು. ಇದೀಗ ಮಡೆನೂರ್ ಮನು ನಟಿಸಿರುವ ಕುಲದಲ್ಲಿ ಕೀಳ ಯಾವುದೋ ಚಿತ್ರಕ್ಕಾಗಿ 'ನಮ್ ಪೈಕಿ ಒಬ್ಬಾ ಹೋಗ್ಬುಟ್ಟಾ' ಎಂಬ ಸಾಂಗ್ ಬರೆದಿದ್ದಾರೆ. ಮನೋಮೂರ್ತಿ ಅವರ ಸಂಗೀತ ಈ ಹಾಡಿಗಿದ್ದು, ಆಂಥೋನಿದಾಸ್ ದನಿಯಾಗಿದ್ದಾರೆ. ಇತ್ತೀಚೆಗೆ ನಡೆದ ಹಾಡಿನ ಬಿಡುಗಡೆ ಕಾರ್ಯಕ್ರಮಕ್ಕೆ ನಾಯಕ ಮನು ಆರ್ಕೆಸ್ಟ್ರಾ ಕಲಾವಿದನ ಗೆಟಪ್‌ನಲ್ಲಿ, ಬ್ಯಾಂಡ್ ಬಾರಿಸುತ್ತಲೇ ಎಂಟ್ರಿಕೊಟ್ಟು ನೆರೆದಿದ್ದವರನ್ನು ಅಚ್ಚರಿಗೊಳಿಸಿದರು. ಸಂತೋಷ್ ಹಾಗೂ ವಿದ್ಯಾ ದಂಪತಿ ನಿರ್ಮಾಣದ ಈ ಚಿತ್ರಕ್ಕೆ ರಾಮ್ ನಾರಾಯಣ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಮನೋಮೂರ್ತಿ ಚಿತ್ರಕ್ಕೆ ಮ್ಯೂಸಿಕ್ ಮಾಡಿದ್ದಾರೆ.

ಸಮಾರಂಭದಲ್ಲಿ ಮಾತನಾಡಿದ ಭಟ್ರು, ಕಾಮಿಡಿ ಕಿಲಾಡಿಗಳು ಟೈಮಲ್ಲಿ ಮನು ಅಭಿನಯ ಕಂಡು ನೀನು ಸಿನಿಮಾಗೂ ಸಲ್ಲುವವನು ಅಂದಿದ್ದೆ. ನಾನು ಇಸ್ಲಾಮುದ್ದೀನ್ ಸೇರಿ ಈ ಕಥೆ ಬರೆದಿದ್ದೇವೆ. ನಂ ಪೈಕಿ ಒಬ್ಬಾ ಹೋಗ್ಬುಟ್ಟಾ ಸಾಂಗ್ ಬರೆಯಲು ಮನೋಮೂರ್ತಿ ಅವರ ಕಾರು ಚಾಲಕನೇ ಸ್ಫೂರ್ತಿ. ಆತನ ಸಾವು ಹಾಗೂ ನಂತರ ನಡೆದ ಸನ್ನಿವೇಶಗಳೇ ಈ ಹಾಡು ಬರೆಸಿತು ಎಂದರು.

ನಂತರ ಮನೋಮೂರ್ತಿ ಮಾತನಾಡುತ್ತ, ಇದು ನನ್ನ ಜಾನರ್ ಬಿಟ್ಟು ಮ್ಯೂಸಿಕ್ ಮಾಡಿರುವ ಎರಡನೇ ಚಿತ್ರ ಎಂದರು. ನನ್ನ ಸ್ನೇಹಿತ ಬಾಬುನಿಂದ ಈ ತಂಡದ ಪರಿಚಯವಾಯಿತು ಎಂದ ರಾಮ್‌ನಾರಾಯಣ್, ತಾವೇ ನಿರ್ದೇಶಕನಾಗಿದ್ದರೂ ನನಗೆ ಅವಕಾಶ ಕೊಟ್ಟಿದ್ದು ಅವರ ದೊಡ್ಡ ಗುಣ. ಚಿತ್ರದ ಎಲ್ಲಾ ಹಾಡುಗಳು ಚೆನ್ನಾಗಿವೆ ಎಂದರು. ನಾನು ಈ ಸಿನಿಮಾ ಆರಂಭಿಸಿದ್ದು ಮನುಗೋಸ್ಕರ. ಆದರೆ, ಟೇಕಾಫ್ ಆಗಿದ್ದು ಯೋಗರಾಜ್ ಭಟ್ಟರಿಂದ. ಇಡೀ ಚಿತ್ರತಂಡದ ಶ್ರಮದಿಂದ ಒಂದೊಳ್ಳೆ ಚಿತ್ರ ಮೂಡಿಬಂದಿದೆ ಎಂದು ನಿರ್ಮಾಪಕ ಸಂತೋಷ್ ತಿಳಿಸಿದರು.

ದೊಡ್ಡ ಬ್ಯಾನರ್‌ನಲ್ಲಿ ನಟಿಸುವ ಆಸೆ ನನಗೂ ಇತ್ತು ಅದು ಈ ಚಿತ್ರದ ಮೂಲಕ ಈಡೇರಿದೆ ಎಂದ ನಾಯಕ ಮನು, ನಾನು ಕೂಡ ಆರ್ಕೆಸ್ಟ್ರಾದಿಂದ ಬಂದವನು. ಚಿತ್ರದಲ್ಲೂ ಅದೇ ಪಾತ್ರ ಮಾಡಿದ್ದೇನೆ, ಸಾವಿನ ಬಗ್ಗೆ ಎಲ್ಲರಿಗೂ ಅರ್ಥವಾಗುವ ಹಾಗೆ ಅರ್ಥಗರ್ಭಿತ ಹಾಡೊಂದನ್ನು ಯೋಗರಾಜ್ ಭಟ್ಟರು ಬರೆದಿದ್ದಾರೆ. ಮನೋಮೂರ್ತಿ ಅವರು ತಮ್ಮ ಆಡಿಯೋ ಕಂಪನಿ ಮೂಲಕ ಸಾಂಗ್ ಹೊರ ತಂದಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ ಮೌನ ಗುಡ್ಡೆಮನೆ, ತಬಲಾನಾಣಿ, ಶರತ್ ಲೋಹಿತಾಶ್ವ, ತಬಲನಾಣಿ, ಸೋನಾಲ್ ಮೊಂತೆರೊ, ಕರಿಸುಬ್ಬು, ಡ್ಯಾಗನ್ ಮಂಜು, ಸೀನ ಇತರರಿದ್ದಾರೆ.

ಟ್ರೇಲರ್‌ನಲ್ಲಿ '1990'ರ ಕಾಲಘಟ್ಟದ ಪ್ರೇಮಚರಿತೆ



ಈಗಾಗಲೇ 80, 90ರ ಕಾಲಘಟ್ಟದ ಕಥೆಯನ್ನು ಹೇಳುವಂಥ ಅನೇಕ ಸಿನಿಮಾಗಳು ಬಂದುಹೋಗಿವೆ. ಅದೇ ಥರದ ಮತ್ತೊಂದು ಚಿತ್ರ ತೆರೆಗೆ ಬರಲು ಅಣಿಯಾಗಿದೆ, ಅದರ ಟೈಟಲ್ ಕೂಡ 1990. ಎಸ್.ನಂದಕುಮಾರ್ ಅವರ ನಿರ್ದೇಶನದ ಈ ಚಿತ್ರದಲ್ಲಿ ಅರುಣ್, ರಾಣಿ ವರದ್ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಇದು 90ರ ಕಾಲಘಟ್ಟದಲ್ಲಿ ನಡೆಯುವ ಅಪರೂಪದ ಪ್ರೇಮಕಥೆಯಾಗಿದ್ದು, ಈಗಾಗಲೇ ಹಾಡು ಹಾಗೂ ಟೀಸರ್ ಪ್ರೇಕ್ಷಕರ ಮನ ಗೆದ್ದಿದೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್‌ನ್ನು ಥಟ್‌ಅಂತ ಹೇಳಿ ಕಾರ್ಯಕ್ರಮದ ರೂವಾರಿ ಡಾ.ನಾ.ಸೋಮೇಶ್ವರ ಹಾಗೂ ನಿರ್ದೇಶಕ ಇಂದ್ರಜಿತ್ ಲಂಕೇಶ್ ಅವರು ಬಿಡುಗಡೆ ಮಾಡಿದರು. ನಂತರ ಮಾತನಾಡಿದ ನಾ.ಸೋಮೇಶ್ವರ್ ಹಾಗೂ ಇಂದ್ರಜಿತ್ ಲಂಕೇಶ್, ಚಿತ್ರದ ಟ್ರೇಲರ್ ಹಾಗೂ ಹಾಡನ್ನು ಮೆಚ್ಚಿಕೊಂಡು ಹೊಸಬರ ಪ್ರಯತ್ನಗಳು ಹೆಚ್ಚು ಹೆಚ್ಚು ಬರಬೇಕು, ಹೊಸ ಆಲೋಚನೆಯಲ್ಲಿ ಮೂಡಿಬಂದಿರುವ ಈ ಚಿತ್ರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ನಿರ್ದೇಶಕ ಸಿ.ಎಂ.ನಂದಕುಮಾರ್ ಮಾತನಾಡುತ್ತ, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಚಿತ್ರದ ಹೆಸರೇ ಹೇಳುವಂತೆ 90ರ ಕಾಲಘಟ್ಟದ ಪ್ರೇಮ ಕಥೆಯನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇನೆ. ಕಥೆ ನಡೆಯುವುದು ಈಗಿನ ಕಾಲಘಟ್ಟದಲ್ಲಾದರೂ, ನಾಯಕನ ಕಲ್ಪನೆ 35 ವರ್ಷಗಳ ಹಿಂದಿನದಾಗಿರುತ್ತದೆ. ಈವರೆಗೆ ಸಾಕಷ್ಟು ಪ್ರೇಮಕಥೆಗಳು ತೆರೆಗೆ ಬಂದಿವೆ. ಆದರೆ ನಮ್ಮ ಚಿತ್ರದ ಕಥೆ ಅದೆಲ್ಲಕ್ಕಿಂತ ವಿಭಿನ್ನವಾಗಿದೆ. ಚಿತ್ರದಲ್ಲಿ ಶೇ.90ರಷ್ಟು ಕಥೆ 1990ರ ಕಾಲಘಟ್ಟದ್ದಾಗಿದ್ದರೆ, ಮಿಕ್ಕಂತೆ ಶೇ.10ರಷ್ಟು ಈಗಿನ ಕಾಲದ ಕಥೆಯಿರುತ್ತದೆ. ವೀಕ್ಷಕರ ಮನರಂಜಿಸುವಂತಹ ಎಲ್ಲಾ ಅಂಶಗಳು ಚಿತ್ರದಲ್ಲಿದೆ ಎಂದು ಹೇಳಿದರು.

ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ವಿಜೃಂಭಣೆಯ ಬ್ರಹ್ಮ ರಥೋತ್ಸವ

● ನೂತನ ರಥ ಉದ್ಘಾಟಿಸಿದ ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ● ದಾನಿಗಳಿಗೆ ಸನ್ಮಾನ


ಬೆಟ್ಟದಪುರದಲ್ಲಿ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಟ್ಟದಪುರ, ಫೆ.13– ಗ್ರಾಮದ ಪ್ರಸಿದ್ಧ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ವಿಜೃಂಭಣೆಯಿಂದ ನೆರವೇರಿತು.

ರಥೋತ್ಸವ ಅಂಗವಾಗಿ ಗ್ರಾಮದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಬೆಳಗ್ಗೆ 10.30ಕ್ಕೆ ನೂತನ ರಥವನ್ನು ತುಮಕೂರಿನ ಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಮಹಾಸ್ವಾಮೀಜಿ ಉದ್ಘಾಟಿಸಿದರು. ಬಳಿಕ ಪುಷ್ಪಗಳು, ಬಣ್ಣ ಬಣ್ಣದ ಬಾವುಟಗಳಿಂದ ಅಲಂಕೃತಗೊಂಡ 3 ರಥಗಳಲ್ಲಿ ಬೆಳ್ಳಿ ಬಸಪ್ಪ, ವಿಘ್ನೇಶ್ವರ ಹಾಗೂ ಭ್ರಮರಾಂಬ ಸಮೇತ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ಬಳಿಕ ರಥೋತ್ಸವಕ್ಕೆ ಸಿದ್ಧಲಿಂಗ ಮಹಾಸ್ವಾಮೀಜಿ ಸೇರಿದಂತೆ ಗಣ್ಯರು ಚಾಲನೆ ನೀಡಿದರು. ಈ ವೇಳೆ ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಹಾಸನದ ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ವಿರಾಜಪೇಟೆಯ ಅಳಮೇರಿ ಕಳಂಕೇರಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ದಿಂಡಗಾಡು ಮಠದ ಶ್ರೀಅಪ್ಪಾಜಿ ಸ್ವಾಮೀಜಿ, ರಾವಂದೂರು ಮಠದ ಶ್ರೀಮೋಕ್ಷಪತಿ ಸ್ವಾಮೀಜಿ, ಕೆಸ್ತೂರು ಮಠದ ಈ ಬಸವ ರಾಜೇಂದ್ರ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಇದ್ದರು. ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು, ನವ ದಂಪತಿಗಳು ಹಾಗೂ ಯುವಕರು ರಥ ಎಳೆದು ಹಣ್ಣು ಜವನ ಎಸೆದು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ರಥೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಸಿದ್ಧಲಿಂಗ ಸ್ವಾಮೀಜಿ, ಜಾತ್ರೆ, ಉತ್ಸವ, ಹಬ್ಬಗಳು ಜನರ ನೆಮ್ಮದಿಯ ತಾಣಗಳಾಗಿವೆ. ರಥೋತ್ಸವ ನಡೆಸುವುದರಿಂದ ರೈತರು ಮತ್ತು ಜನರಿಗೆ ಶಾಂತಿ ಜೊತೆಗೆ ನೆಮ್ಮದಿ ಸಿಗುತ್ತದೆ ಎಂದರು.

ದೇವಾಲಯ ಆವರಣದಿಂದ ಹೊರಟ ರಥೋತ್ಸವ ಗ್ರಾಮದ ರಥ ಬೀದಿಗಳಲ್ಲಿ ಸಂಚರಿಸಿ ಸಂಜೆ 5.30ರ ವೇಳೆಗೆ ಸ್ವಸ್ಥಾನಕ್ಕೆ ತಲುಪಿತು. ಬಳಿಕ ನೂತನ ರಥ ಕೊಡುಗೆ ನೀಡಿದ ದಾನಿಗಳಾದ ಬೆಮ್ಮತಿ ಸುರೇಶ್ ಮತ್ತು ಕುಟುಂಬ ಹಾಗೂ ರಥ ನಿರ್ಮಿಸಿದ ಶಿಲ್ಪಿ ಕೃಷ್ಣಾಚಾರ್ ಮತ್ತು ಕೂರ್ಗಲ್ ಶಿವಕುಮಾರಸ್ವಾಮಿ ಇತರರನ್ನು ಸನ್ಮಾನಿಸಲಾಯಿತು. ನಂತರ ಅನ್ನದಾನಕ್ಕೆ ಸಿದ್ಧಗಂಗಾ ಮಠದ ಶ್ರೀಗಳು ಚಾಲನೆ ನೀಡಿದರು.

ಮಾಜಿ ಶಾಸಕ ಕೆ.ಮಹದೇವ್, ಆಶ್ರಯ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ತಹಸೀಲ್ದಾರ್ ನಿಸರ್ಗಪ್ರಿಯ, ಉಪ ತಹಸೀಲ್ದಾರ್ ಶಶಿಧರ್, ಆರ್‌ಐ ಅಜ್ಮಲ್ ಪಾಷಾ, ತಾಪಂ ಮಾಜಿ ಸದಸ್ಯೆ ಅನಿತಾ ಶೆಟ್ಟಿ, ಬೆಟ್ಟದಪುರ ಶಿವದೇವ್, ಅನ್ನದಾನ ಸಮಿತಿಯ ಗಣೇಶ, ಗಿರೀಶ್, ಶಾಂತಕುಮಾರ್, ಮಹೇಶ್ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಕಳೆದ 4 ದಿನದಿಂದ ನಡೆದ ಎಲ್ಲಾ ಉತ್ಸವ, ಮೆರವಣಿಗೆ ಮತ್ತು ರಥ ಎಳೆಯುವ ಕಾರ್ಯಕ್ರಮವನ್ನು ಬೆಟ್ಟದಪುರದ ಉಪ್ಪಾರ ಸಮಾಜದವರು ನಡೆಸಿಕೊಟ್ಟರು.

ಪ್ರತಿ ವರ್ಷದಂತೆ ಈ ಬಾರಿಯೂ ಸಾವಿರಾರು ಭಕ್ತರು ಬೆಟ್ಟ ಹತ್ತಿ ಬೆಟ್ಟ ಮೇಲಿರುವ ಸಿಡಿಲು ಮಲ್ಲಿಕಾರ್ಜುನಸ್ವಾಮಿ ದೇವರಿಗೆ ಪೂಜೆ ಸಲ್ಲಿಸಿ ಪುನೀತರಾದರು. ಬಿರು ಬಿಸಿಲೆನ್ನದೇ ಮಕ್ಕಳು, ವೃದ್ಧರು ಬೆಟ್ಟ ಹತ್ತುತ್ತಿದ್ದ ದೃಶ್ಯ ಕಂಡು ಬಂತು. ಅಹಿತಕರ ಘಟನೆ ನಡೆದಂತೆ ಬೆಟ್ಟದಪುರದ ಎಸ್‌ಐ ಶಿವಶಂಕರ್ ನೇತೃತ್ವದಲ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ನಂ.ಗೂಡು: ರೈತರು ಹೋರಾಟದ ಮೂಲಕ ಹಕ್ಕು ಪಡೆಯಬಹುದು

ರೈತ ಜಾಗೃತಿ ಸಭೆಯಲ್ಲಿ ಟಿ.ಆರ್.ವಿದ್ಯಾಸಾಗರ್


ಜಾಗೃತಿ ಸಭೆಯಲ್ಲಿ ಪ್ರೊ.ನಂಜುಂಡಸ್ವಾಮಿಯವರ ಭಾವಚಿತ್ರಕ್ಕೆ ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಪುಷ್ಪಾರ್ಚನೆ ಮಾಡಿದರು.

ನಂಜನಗೂಡು, ಫೆ.13– ರೈತ ಹೋರಾಟದಿಂದಾಗಿ ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ದೊರಕುವಂತಾಗಿದೆ. ರೈತರು ಪಕ್ಷಾತೀತ, ಜಾತ್ಯಾತೀತವಾಗಿ ಸಂಘಟಿತರಾದಲ್ಲಿ ಸರ್ಕಾರದ ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಹೋರಾಟ ನಡೆಸಿ ತಮ್ಮ ಹಕ್ಕು ಪಡೆಯಬಹುದಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ತಿಳಿಸಿದರು.

ತಾಲೂಕಿನ ಮಲ್ಲಹಳ್ಳಿ ಗ್ರಾಮದಲ್ಲಿ ಪ್ರೊ.ನಂಜುಂಡಸ್ವಾಮಿಯವರ 89ನೇ ಹುಟ್ಟುಹಬ್ಬದ ಪ್ರಯುಕ್ತ ರಾಜ್ಯ ರೈತ ಸಂಘದಿಂದ ಏರ್ಪಡಿಸಿದ್ದ ರೈತ ಜಾಗೃತಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ರೈತರ ಸಾಲದ ಬೇಡಿಕೆ 12 ಸಾವಿರ ಕೋಟಿಯಷ್ಟಿದೆ. ಆದರೆ ನಬಾರ್ಡ್ ಬ್ಯಾಂಕ್ ಕಳೆದ ವರ್ಷ 5,300 ಕೋಟಿ ಸಾಲ ನೀಡಿತ್ತು ಈ ವರ್ಷ 2,300 ಕೋಟಿ ಸಾಲ ನೀಡುವ ಮೂಲಕ ಕಳೆದ ಬಾರಿಗಿಂತ ಸಾಲ ಕಡಿತಗೊಳಿಸಿದ ಪರಿಣಾಮ ಸಹಕಾರ ಸಂಘಗಳಿಂದ ರೈತರಿಗೆ ಸಾಲ ದೊರಕದೆ ಮೈಕ್ರೋ ಫೈನಾನ್ಸ್‌ಗಳ ಅಟ್ಟಹಾಸಕ್ಕೆ ಗ್ರಾಮೀಣ ಬಡ ರೈತರ ಜೀವಗಳು ಬಲಿಯಾಗುತ್ತಿವೆ. ರೈತ ಸಂಘದ ಹೋರಾಟದ ಫಲವಾಗಿ ಮೈಕ್ರೋ ಫೈನಾನ್ಸ್‌ನಿಂದ ಜೀವ ಕಳೆದುಕೊಂಡ ಕುಟುಂಬಗಳಿಗೆ ಪರಿಹಾರ ದೊರಕುವಂತಾಗಿದೆ. ಮೈಕ್ರೋ ಫೈನಾನ್ಸ್ ಅಟ್ಟಹಾಸದಿಂದ ನೊಂದ ಜೀವಗಳು ಆತ್ಮಹತ್ಯೆಯ ದಾರಿ ಹಿಡಿಯಬಾರದು. ಆತ್ಮಸ್ಥೈರ್ಯವಿರಲಿ, ಹಳ್ಳಿ ಹಳ್ಳಿಗಳಲ್ಲಿ ಹಸಿರು ಶಾಲಿನ ಸೈನಿಕರು ನಿಮ್ಮ ಜೊತೆಗಿದ್ದೇವೆ. ನಿಮ್ಮ ಪರವಾಗಿ ಹೋರಾಟ ನಡೆಸಲಿದ್ದೇವೆ ಎಂದರು.

ರೈತ ಮುಖಂಡ ಪಚ್ಚೆ ನಂಜುಂಡಸ್ವಾಮಿ ಮಾತನಾಡಿ, ಪ್ರೊ.ನಂಜುಂಡಸ್ವಾಮಿಯವರು ರೈತರ ಆತ್ಮಹತ್ಯೆ ನಿಲ್ಲಬೇಕು. ರೈತರ ಬದುಕು ಹಸನು ಮಾಡಬೇಕೆಂಬ ಉದ್ದೇಶದಿಂದ ವಿದೇಶಿ ಬೀಜ ಮಾರಾಟ, ರಾಸಾಯನಿಕ ಗೊಬ್ಬರ ಮಾರಾಟ ಕಂಪನಿಗಳ ವಿರುದ್ಧ ಜಾಗತಿಕ ಹೋರಾಟ ನಡೆಸಿದವರು. ಅಲ್ಲದೆ ಮೊದಲ ಬಾರಿಗೆ ರೈತರ ಸಾಲ ಮನ್ನಾ ಮಾಡುವಂತೆ ಧ್ವನಿಯೆತ್ತಿದ ಮೊದಲ ಭಾರತೀಯ ರೈತಪರ ಹೋರಾಟಗಾರ. ಪ್ರೊ.ನಂಜುಂಡಸ್ವಾಮಿಯವರ ಹೋರಾಟ, ವಿಚಾರಧಾರೆಗಳಿಂದ ಪ್ರೇರೇಪಿತರಾದ ಹಲವು ರೈತ ಹೋರಾಟಗಾರರು ಇಂದು ರೈತರ ಪರವಾಗಿ ಹೋರಾಟ ನಡೆಸಿ ರೈತರ ಧ್ವನಿಯಾಗಿ ಕೆಲಸ ಮಾಡುತ್ತಿದ್ದಾರೆ. ರೈತ ಸಂಘಟನೆಗಳು ಒಂದಾಗಬೇಕೆಂಬ ಸಂಕಲ್ಪದಿಂದಾಗಿ ರಾಜ್ಯದಲ್ಲಿ 21 ರೈತ ಸಂಘಟಗಳನ್ನು ಏಕೀಕರಣಗೊಳಿಸಲಾಗಿದೆ. ರೈತ ಸಂಘ ನಿಮ್ಮ ರಕ್ಷಣೆಗೆ, ಸಮಸ್ಯೆಗಳ ಪರಿಹಾರಕ್ಕೆ ಇರುವ ಏಕೈಕ ಮಾರ್ಗವಾಗಿದ್ದು ರೈತರು ಒಟ್ಟಾಗಿ ಸಂಘಟನೆಗೊಳ್ಳುವ ಮೂಲಕ ಹೋರಾಟ ನಡೆಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ಪ್ರೊ.ನಾಗೇಗೌಡ ಕಳವಾರ ಮಾತನಾಡಿ, ಪ್ರೊ.ನಂಜುಂಡಸ್ವಾಮಿಯವರು ರೈತ ವರ್ಗದ ಪ್ರೇರಕ ಶಕ್ತಿಯಾಗಿದ್ದರು. ಅವರ ಮಾತುಗಳು ಎಂದರೆ ಅಧಿಕಾರಿಶಾಹಿ ವರ್ಗ, ಮಂತ್ರಿಗಳು ನಡುಗುತ್ತಿದ್ದರು. ಪ್ರೊ.ನಂಜುಂಡಸ್ವಾಮಿಯವರಂತೆ ರೈತರು ಯಾರಿಗೂ ಹೆದರದೆ ಹೋರಾಟ ನಡೆಸಬೇಕು. ಈ ನಿಟ್ಟಿನಲ್ಲಿ ರೈತ ಸಂಘಟನೆಗಳು ಸಾಮೂಹಿಕ ಮುಕ್ತ ಸಂವಾದಗಳನ್ನು ಏರ್ಪಡಿಸಿ ರೈತರಿಗೆ ಧೈರ್ಯ ತುಂಬ ಬೇಕಿದೆ. ಜೊತೆಗೆ ರೈತರ ಬದುಕು ಹಸನು ಮಾಡಲು ಕೃಷಿ ಬಗ್ಗೆ ಸಂವಾದಗಳನ್ನು ಏರ್ಪಡಿಸಿ ಜಾಗೃತಿ ಮೂಡಿಸಬೇಕೆಂದು ಸಲಹೆ ನೀಡಿದರು.

ಇದೇ ವೇಳೆ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ಹಸಿರು ಸೇನೆ ಅಧ್ಯಕ್ಷ ಬಂಗಾರಸ್ವಾಮಿ, ಮಹದೇವಸ್ವಾಮಿ, ರವಿ, ಮಾದನಾಯಕ, ನಾಗಯ್ಯ, ಮಹದೇವಪ್ಪ, ವರದರಾಜು, ಕೆಂಪಣ್ಣ, ಶಿವಣ್ಣ, ರಂಗಸ್ವಾಮಿ, ಮಾದಪ್ಪ, ಪರಮೇಶ್ವರಪ್ಪ, ಮಹದೇವ ನಾಯಕ, ಶಂಕರ ನಾಯಕ, ಸೇರಿದಂತೆ ನೂರಾರು ರೈತ ಮುಖಂಡರು ಉಪಸ್ಥಿತರಿದ್ದರು.

ಗಾಂಜಾ ಬೆಳೆದಿದ್ದ ಆರೋಪಿ ಬಂಧನ

ಹುಣಸೂರು, ಫೆ.13– ಜೋಳದ ಮಧ್ಯೆ 3 ಕೆಜಿ ಗಾಂಜಾ ಬೆಳೆದಿದ್ದ ಆರೋಪಿಯನ್ನು ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಮುತ್ತುರಾಯನ ಹೊಸಳ್ಳಿ ಗ್ರಾಮದ ನಿವಾಸಿ ರಾಜೇಗೌಡ(58) ಬಂಧಿತ ಆರೋಪಿ. ಈತ ತನ್ನ ಜಮೀನಿನಲ್ಲಿ ಬೆಳೆದಿದ್ದ ಜೋಳದ ಮಧ್ಯೆ ಸುಮಾರು 3 ಕೆಜಿ ಗಾಂಜಾ ಸೊಪ್ಪನ್ನು ಬೆಳೆದಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆರೋಪಿ ಯನ್ನು ವಶಕ್ಕೆ ಪಡೆದು ಗಾಂಜಾ ಸೊಪ್ಪನ್ನು ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಹುಣಸೂರು ಪೊಲೀಸ್ ಉಪ ಅಧೀಕ್ಷಕ ಗೋಪಾಲಕೃಷ್ಣ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕ ಮುನಿಯಪ್ಪ ಎಸ್‌ಐ ರಾಧ ಸಿಬ್ಬಂದಿ ಭಾಗವಹಿಸಿದ್ದರು.

ಪ್ರಾಥಮಿಕ ಹಂತದಲ್ಲೇ ಅಧ್ಯಯನದ ಹವ್ಯಾಸ ರೂಢಿಸಿಕೊಳ್ಳಿ


ಕಾರ್ಯಕ್ರಮವನ್ನು ಹೆಚ್.ವಿ.ಶಿವರಾಜಪ್ಪ ಉದ್ಘಾಟಿಸಿದರು.

ಮಲ್ಲುಂಡಿ, ಫೆ.13– ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲೇ ಉತ್ತಮ ಅಧ್ಯಯನ ಮಾಡುವ ಹವ್ಯಾಸ ರೂಢಿಸಿಕೊಳ್ಳಬೇಕು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಪೋಷಕರು ಹೆಚ್ಚಿನ ಗಮನ ಹರಿಸಬೇಕು ಎಂದು ಶ್ರೀಸದ್ಗುರು ಮಹದೇವ ತಾತಾ ವಿದ್ಯಾಸಂಸ್ಥೆ ಅಧ್ಯಕ್ಷ ಹೆಚ್.ವಿ.ಶಿವರಾಜಪ್ಪ ತಿಳಿಸಿದರು.

ನಂಜನಗೂಡು ತಾಲೂಕಿನ ಸಂಗಮ ಕ್ಷೇತ್ರದ ಶ್ರೀಸದ್ಗುರು ಮಹದೇವ ತಾತಾ ವಿದ್ಯಾಸಂಸ್ಥೆ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಈ ಶಾಲೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಶಾಲೆಯಲ್ಲಿ ಓದಿದವರು ಉನ್ನತ ಹುದ್ದೆಯಲ್ಲಿ ಇದ್ದಾರೆ. ಗ್ರಾಮೀಣ ಭಾಗದ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದಾಗ ದೇಶದ ಉತ್ತಮ ಪ್ರಜೆಯಾಗಲು ಸಾಧ್ಯ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಹೆಚ್ಚಿನ ಆಸಕ್ತಿ ಹೊಂದಬೇಕು. ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್ ಬಳಸುವುದು ಹೆಚ್ಚಾಗಿದೆ. ಪೋಷಕರು ಇದರ ಬಗ್ಗೆ ಹೆಚ್ಚಿನ ಬಗ್ಗೆ ಗಮನ ಹರಿಸಬೇಕು. ಪೋಷಕರು ತಮ್ಮ ಮಕ್ಕಳಿಗೆ ಆಸ್ತಿ ಮಾಡುವ ಬದಲು ಗುಣಮಟ್ಟದ ಶಿಕ್ಷಣ ಕೊಡಿಸಲು ಮುಂದಾಗಬೇಕು ಎಂದರು.

ಈ ವೇಳೆ ಮಹೇಶ್ವರ ಸ್ವಾಮೀಜಿ, ಬಿಇಓ ಮಹೇಶ್, ಉಪಾಧ್ಯಕ್ಷ ನಂದೀಶ್ ಕುಮಾರ್, ಕಾರ್ಯದರ್ಶಿ ಹೆಚ್.ಎಂ. ಕೆಂಡಗಣ್ಣಪ್ಪ, ಶಾಲೆ ಉಸ್ತುವಾರಿ ಚನ್ನಪ್ಪ, ಶಿವನಾಗು, ಮಲ್ಲಿಕಾರ್ಜುನಪ್ಪ, ಮಹೇಶ್, ಸಣ್ಣಪ್ಪ, ಮಾದಪ್ಪ, ಮರಿಸ್ವಾಮಪ್ಪ, ಸಿ.ಎಂ.ನಾಗಣ್ಣ, ಕೆಂಪಣ್ಣ, ರಾಜಪ್ಪ, ರಾಜಣ್ಣ ಸೇರಿದಂತೆ ಇತರರಿದ್ದರು.

ನಂಜುಂಡೇಶ್ವರನ ಹುಂಡಿಯಲ್ಲಿ 1.70 ಕೋಟಿ ಸಂಗ್ರಹ



ನಂಜನಗೂಡು, ಫೆ.13– ದಕ್ಷಿಣ ಕಾಶಿ ನಂಜನಗೂಡಿನ ನಂಜುಂಡೇಶ್ವರನ ದೇವಾಲಯದ ಹುಂಡಿಯಲ್ಲಿ ಒಂದು ತಿಂಗಳ ಅವಧಿಯಲ್ಲಿ 1 ಕೋಟಿ 70 ಲಕ್ಷದ 86 ಸಾವಿರ ರೂ., 52 ಗ್ರಾಂ ಚಿನ್ನ, 1 ಕೆಜಿ 500 ಗ್ರಾಂ ಬೆಳ್ಳಿ ಸಂಗ್ರಹಗೊಂಡಿದೆ.

ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದಲ್ಲಿ ಗುರುವಾರ ಹುಂಡಿ ಪರ್ಕಾವಣೆ ನಡೆಸಲಾಯಿತು. ಡಿ.26ರಂದು ದೇವಾಲಯದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಸಲಾಗಿತ್ತು. ಎಣಿಕೆ ಕಾರ್ಯದಲ್ಲಿ ಮಹಿಳಾ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಮಹಿಳೆಯರು ಭಾಗಿಯಾಗಿದ್ದರು. ಇದೇ ವೇಳೆ ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ಸತೀಶ್, ದೇವಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಸಂವಾದ


ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಸಂವಾದ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಫೆ.13– ತಾಲೂಕಿನ ಅಂತರಸಂತೆ ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಅಂಗವಾಗಿ ಸಂವಾದ ನಡೆಸಲಾಯಿತು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ವರ್ಷಪೂರ್ತಿ ಕಷ್ಟಪಟ್ಟು ಓದಿರುತ್ತಿರಾ. ಆದರೆ ಪರೀಕ್ಷೆ ಸಮಯದಲ್ಲಿ ಆತುರದಿಂದ ಅಥವಾ ಗಾಬರಿಯಿಂದ ತಪ್ಪಾಗಿ ಉತ್ತರ ಬರೆದರೆ ನೀವು ವರ್ಷಪೂರ್ತಿ ಶ್ರಮ ಹಾಕಿ ಕಲಿತ ವಿಷಯಗಳು ವ್ಯರ್ಥವಾಗುತ್ತವೆ. ಆದ್ದರಿಂದ ನೀವು ಪ್ರತಿ ಕ್ಷಣ, ಪ್ರತಿದಿನ ಶ್ರದ್ಧೆ ಮತ್ತು ಆಸಕ್ತಿಯಿಂದ ಹಾಗೂ ಲವಲವಿಕೆಯಿಂದ ಕಲಿಯಬೇಕು. ಹಾಗಾಗಿ ನೀವು ಕಷ್ಟಪಟ್ಟು ಕಲಿಯದೆ ಇಷ್ಟಪಟ್ಟು ಕಲಿಯಬೇಕು ಎಂದು ಸಲಹೆ ನೀಡಿದರು.

ಮುಖಂಡ ಜೀವಿಕ ಉಮೇಶ್ ಮಾತಾನಾಡಿ, ನೀವು ಓದಿದರೆ ಸಾಲದು. ಓದಿದ್ದನ್ನು ಸರಿಯಾಗಿ ಮನನ ಮಾಡಿಕೊಳ್ಳಬೇಕು. ಅದಕ್ಕಾಗಿ ನೀವು ನಿಮ್ಮ ದೈನಂದಿನ ದಿನಚರಿ ಮಾಡಿಕೊಳ್ಳಬೇಕು. ಬೆಳಗ್ಗೆಯಿಂದ ರಾತ್ರಿ ಮಲಗುವ ತನಕ ಸಮಯ ಸರಿಯಾಗಿ ವಿನಿಯೋಗ ಮಾಡಿಕೊಳ್ಳಬೇಕು. ಓದುವುದು ಬರೆಯುವುದು ಓದಿದದ್ದನ್ನು ಸ್ನೇಹಿತರೊಂದಿಗೆ ಚರ್ಚಿಸುವುದು ಮಾಡಬೇಕು ಹಾಗೂ ದೇಹದ ಆರೋಗ್ಯ ಕಾಪಾಡಿಕೊಳ್ಳುವುದು ಮತ್ತು ಮಿತವಾದ ಆಹಾರ ಪದಾರ್ಥಗಳನ್ನು ಬಳಸುವುದನ್ನು ರೂಢಿ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಈ ವೇಳೆ ಮೈಸೂರು ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಮುಖ್ಯಶಿಕ್ಷಕಿ ಸುಂದ್ರಮ್ಮ, ಪ್ರಿನ್ಸಿಪಾಲ್ ಮೈನಾ, ಶಿಕ್ಷಕರಾದ ಮಧುಕುಮಾರ್, ರಮೇಶ್, ಸಾವಿತ್ರಿ, ಸಾವಿತ್ರಿ, ಲೋಹಿತ್, ಅನಿತಾ, ಸೌಮ್ಯ, ಪೋಷಕ ಮಂಡಳಿ ಅಧ್ಯಕ್ಷ ಎನ್.ಗಣೇಶ, ನಾಗರಾಜ್ ಮತ್ತಿತರರಿದ್ದರು.

ತ್ರಿವೇಣಿ ಸಂಗಮದಲ್ಲಿ ಗುರುವಾರವೂ ಭಕ್ತರ ಪುಣ್ಯಸ್ನಾನ


ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನದಲ್ಲಿ ನಿರತರಾಗಿರುವ ಭಕ್ತರು.

ತಿ.ನರಸೀಪುರ, ಫೆ.13– ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ಕಳೆದ 3 ದಿನಗಳಿಂದ ನಡೆದ ಕುಂಭಮೇಳಕ್ಕೆ ಬುಧವಾರ ತೆರೆಬಿದ್ದಿದ್ದರೂ, ಸಂಗಮಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆಗೆ ಮಾತ್ರ ಕೊರತೆಯಾಗಿಲ್ಲ.

ಬುಧವಾರ ಕುಂಭ ಮೇಳಕ್ಕೆ ಮಹಾ ಮಾಘದ ಹುಣ್ಣಿಮೆ ಸ್ನಾನದ ಮೂಲಕ ತೆರೆ ಬಿದ್ದಿದ್ದರೂ ಗುರುವಾರ ಸಹ ಭಕ್ತಾರು ಸಂಗಮಕ್ಕೆ ಭೇಡಿ ನೀಡಿ ಪುಣ್ಯ ಸ್ನಾನ ಮಾಡಿದರು.

ಕುಂಭಮೇಳ ಕ್ಷೇತ್ರಕ್ಕೆ ತಂಡೋಪತಂಡವಾಗಿ ಕುಟುಂಬ ಸಮೇತ ಭೇಟಿ ನೀಡುತ್ತಿರುವ ಭಕ್ತರು ಕಾವೇರಿ, ಕಪಿಲಾ, ಸ್ಫಟಿಕ ಸರೋವರದ ಸಂಗಮದಲ್ಲಿ ಮಿಂದು ಶ್ರೀಅಗಸ್ತ್ಯೇಶ್ವರ, ಚೌಡೇಶ್ವರಿ, ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಕುಂಭಮೇಳ ಹಿನ್ನೆಲೆಯಲ್ಲಿ ಭಕ್ತರಿಗೆ ನದಿಯಲ್ಲಿ ಸ್ನಾನ ಮಾಡಲು ವಿಧಿಸಿದ್ದ ಷರತ್ತು ಮುಗಿದ ಹಿನ್ನೆಲೆಯಲ್ಲಿ ಭಕ್ತರು ನಿರಾಳವಾಗಿ ನದಿಯಲ್ಲಿ ಮಿಂದು ಪುನೀತರಾಗುತ್ತಿದ್ದಾರೆ. ಅಲ್ಲದೇ 3 ದಿನಗಳಿಂದ ಲಕ್ಷಾಂತರ ಭಕ್ತರು ನದಿಯಲ್ಲಿ ಸ್ನಾನ ಮಾಡಿದ್ದಾರೆ. ಸ್ನಾನದ ವೇಳೆ ನದಿಗೆ ಹಳೆ ಬಟ್ಟೆಗಳನ್ನು ಬಿಟ್ಟಿದ್ದರಿಂದ ನದಿ ಕಲುಷಿತವಾಗಿದ್ದು, ಸ್ವಚ್ಛತೆ ಕಾರ್ಯ ಭರದಿಂದ ಸಾಗಿದೆ.

ಜೆಡಿಎಸ್ ತೆಕ್ಕೆಗೆ ದೊಡ್ಡಮುಲಗೂಡು ಪಿಎಸಿಎಸ್


ನೂತನ ಅಧ್ಯಕ್ಷ ಅಂಕೇಗೌಡ, ಉಪಾಧ್ಯಕ್ಷೆ ಕಲ್ಪನಾ ಅವರನ್ನು ಸನ್ಮಾನಿಸಲಾಯಿತು.

ಬನ್ನೂರು, ಫೆ.13– ಕಳೆದ 25 ವರ್ಷಗಳ ನಂತರ ದೊಡ್ಡಮುಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕರ ಸಂಘ ಜೆಡಿಎಸ್ ತೆಕ್ಕೆಗೆ ಬಂದಿದ್ದು, ಅಧ್ಯಕ್ಷರಾಗಿ ಅಂಕೇಗೌಡ ಮತ್ತು ಉಪಾಧ್ಯಕ್ಷೆಯಾಗಿ ಕಲ್ಪನಾ ಆಯ್ಕೆಯಾಗಿದ್ದಾರೆ.

12 ಸದಸ್ಯರನ್ನೊಳಗೊಂಡ ದೊಡ್ಡಮುಲಗೂಡಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅಂಕೇಗೌಡ ಮತ್ತು ಗಿರೀಶ್ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಕಲ್ಪನಾ ನಾಗರಾಜು ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು. ನಂತರ ನಡೆದ ಚುನಾವಣೆಯಲ್ಲಿ ಅಂಕೇಗೌಡರು 7 ಮತ ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೇ, ಗಿರೀಶ್ 5 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಹಸೀನಾ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ಅಂಕೇಗೌಡ ಮಾತನಾಡಿ, ಸಹಕಾರ ಸಂಘದ ಎಲ್ಲಾ ಸದಸ್ಯರ ಸಹಕಾರದೊಂದಿಗೆ ಸರ್ಕಾರದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ದೊರಕಿಸಿ ಕೊಡಲು ಪ್ರಯತ್ನಿಸುತ್ತೇನೆ. ಸಂಘದ ಅಭಿವೃದ್ಧಿಗಾಗಿ ವಿವಿಧ ಯೋಜನೆಯನ್ನು ರೂಪಿಸಲಾಗುತ್ತಿದ್ದು ಹಂತ ಹಂತವಾಗಿ ಜಾರಿಗೊಳಿಸಲಾಗುವುದು ಎಂದರು.

ಇದೇ ವೇಳೆ ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಶುಭ ಕೋರಿ ಮುಂದಿನ ದಿನಗಳಲ್ಲಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವಂತೆ ಸಲಹೆ ನೀಡಿದರು. ಇದೇ ವೇಳೆ ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಮುಖಂಡರಾದ ಸಿದ್ದರಾಮೇಗೌಡ, ಸುರೇಶ, ಶಶಿಕುಮಾರ್, ಪಂಚಲಿಂಗೇಗೌಡ, ಗೋವಿಂದ, ಶ್ರೀನಿವಾಸ್ ಗೌಡ, ಡಿ.ಆರ್. ಲೋಕೇಶ್, ಚನ್ನೇಗೌಡ, ಎಂ.ಕೆ. ಮಧು, ಕರಿಕೆಂಪೇಗೌಡ, ಅಂಬೇಡ್ಕರ್ ಸಂಘದ ಅಧ್ಯಕ್ಷ ಬಿ.ಎಂ. ಶಂಕರ್ ಇತರರಿದ್ದರು.

ಸೋಮನಾಥಪುರ ಪಿಎಸಿಎಸ್ ಇಬ್ಬರು ನಿರ್ದೇಶಕರಿಗೆ ಸನ್ಮಾನ


ನಿರ್ದೇಶಕರಾದ ಕೆ.ಎಂ.ಚಂದ್ರಶೇಖರ್ ಹಾಗೂ ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಫೆ.13– ತಾಲೂಕಿನ ಸೋಮನಾಥಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಇಬ್ಬರು ಸದಸ್ಯರನ್ನು ಕಗ್ಗಲೀಪುರ ಗ್ರಾಮದಲ್ಲಿ ಸನ್ಮಾನಿಸಿದರು.

ಸಹಕಾರ ಸಂಘಕ್ಕೆ ಚುನಾವಣೆ ಮೂಲಕ ಆಯ್ಕೆಯಾದ ಗ್ರಾಮದ ನಾಗರಾಜು ಹಾಗೂ ಕೆ.ಎಂ.ಚಂದ್ರಶೇಖರ್ ಅವರನ್ನು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕೆ.ಎಂ.ಮಧುಕುಮಾರ್ ನೇತೃತ್ವದಲ್ಲಿ ಕಗ್ಗಲೀಪುರ ಗ್ರಾಮದ ದೇವಸ್ಥಾನದ ಮುಂಭಾಗ ಸನ್ಮಾನಿಸಿ ಮಾತನಾಡಿ, ಸಹಕಾರ ಸಂಘದಲ್ಲಿ ರೈತರ ಸಿಗುವ ಸವಲತ್ತುಗಳನ್ನು ಸಮರ್ಪಕವಾಗಿ ತಲುಪಿಸುವ ಮೂಲಕ ಅವರನ್ನು ಕಾಪಾಡಬೇಕು. ಸಕಾಲದಲ್ಲಿ ಸಾಲ ಸೌಲಭ್ಯಗಳನ್ನು ನೀಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿದರು. ಈ ವೇಳೆ ವೆಂಕಟೇಶ್, ಧರ್ಮೇಂದ್ರ, ವಿ.ದಿನೇಶ್, ಕಾರ್ತಿಕ್, ಎನ್.ಮಹ ದೇವಸ್ವಾಮಿ, ವರದರಾಜು, ಕಪಾಲಿ ಮಂಜು ನಾಥ್, ಕೆ.ಎನ್.ರಂಗಸ್ವಾಮಿ, ವಿ.ರಾಜಣ್ಣ ಹಾಜರಿದ್ದರು.

ಸವಿತಾ ಸಮಾಜದ ಏಳಿಗೆಗೆ ಹಲವು ಯೋಜನೆ ಜಾರಿ

ಸವಿತಾ ಮಹರ್ಷಿ ಜಯಂತಿಯಲ್ಲಿ ಶಾಸಕ ಡಿ.ರವಿಶಂಕರ್


ಕಾರ್ಯಕ್ರಮದಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಫೆ.13– ಸವಿತಾ ಸಮಾಜದ ಏಳಿಗೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಕೃಷ್ಣ ಮಂದಿರದಲ್ಲಿ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ಸವಿತಾ ಮಂಗಳವಾದ್ಯ ಕಲಾವಿದರ ಸಂಘದ ವತಿಯಿಂದ ನಡೆದ ತ್ಯಾಗರಾಜಸ್ವಾಮಿ ಆರಾಧನ ಮಹೋತ್ಸವ ಮತ್ತು ಶ್ರೀ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಪರವಾಗಿ ಸದಾ ಚಿಂತಿಸುವ ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಎಲ್ಲರಿಗೂ ಮಾದರಿ ಎಂದರು. ಈ ಹಿಂದೆ ಸಿದ್ದರಾಮಯ್ಯ ಸಿಎಂ ಆಗಿದ್ದ ವೇಳೆ ಸವಿತಾ ಸಮಾಜದ ಅಭಿವೃದ್ಧಿ ನಿಗಮ ಸ್ಥಾಪಿಸುವುದರ ಜತೆಗೆ ಸವಿತಾ ಮಹರ್ಷಿ ಹಾಗೂ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆಯನ್ನು ಸರ್ಕಾರದ ವತಿಯಿಂದಲೇ ಆಚರಿಸುವ ಘೋಷಣೆ ಮಾಡಿದ್ದರು ಎಂದು ತಿಳಿಸಿದರು.

ಶುಭ ಸಂಕೇತವಾಗಿರುವ ಮಂಗಳ ವಾದ್ಯ ನುಡಿಸುವ ಕಲಾವಿದರಾಗಿರುವ ಸವಿತಾ ಸಮಾಜದವರ ವೃತ್ತಿ ಅತ್ಯಂತ ಶ್ರೇಷ್ಠವಾಗಿದ್ದು ಅದಕ್ಕಾಗಿ ಅವರು ಹೆಮ್ಮೆ ಪಡಬೇಕು. ಸರ್ವರೂ ಆ ಸಮಾಜದಲ್ಲಿ ಕಾಯಕ ಮಾಡುವವರನ್ನು ಗೌರವಿಸಬೇಕು ಎಂದು ನುಡಿದರು.

ಸವಿತಾ ಸಮಾಜದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು. ಸಾಲಿಗ್ರಾಮ ಮತ್ತು ಕೆ.ಆರ್. ನಗರ ತಾಲೂಕುಗಳಲ್ಲಿ ಸಮಾಜದ ಸಮುದಾಯ ಭವನ ನಿರ್ಮಾಣ ಮಾಡಿ ಕೊಳ್ಳಲು ಸರ್ಕಾರದಿಂದ ನಿವೇಶನ ಕೊಡಿಸುವ ಭರವಸೆ ನೀಡಿದರು.

ಈ ವೇಳೆ ಸಾಧಕರನ್ನು ಸನ್ಮಾನಿಸುವ ಜೊತೆಗೆ ವಾದ್ಯಗೋಷ್ಠಿ ನಡೆಸಲಾಯಿತು. ಕಾರ್ಯಕ್ರಮಕ್ಕೂ ಮೊದಲು ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿಯಿಂದ ವಿವಿಧ ಕಲಾತಂಡಗಳೊಂದಿಗೆ ಸವಿತಾ ಮಹರ್ಷಿ, ಹಡಪದ ಅಪ್ಪಣ್ಣ, ತ್ಯಾಗರಾಜರ ಭಾವ ಚಿತ್ರಗಳನ್ನು ಬೆಳ್ಳಿ ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಾಯಿತು.

ವಿಧಾನ ಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಪುರಸಭಾಧ್ಯಕ್ಷ ಶಿವು ನಾಯಕ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್. ನಾಗೇಶ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಬಿಇಓ ಆರ್.ಕೃಷ್ಣಪ್ಪ, ಕರ್ಪೂರಿ ಠಾಕೂರ್ ಓಬಿಸಿ ಜಿಲ್ಲಾಧ್ಯಕ್ಷ ಕೆ.ಎಸ್.ಭಾಸ್ಕರ್, ಸವಿತಾ ಮಂಗಳವಾದ್ಯ ಸಂಘದ ತಾಲೂಕು ಅಧ್ಯಕ್ಷ ಕೆ.ಪಿ. ನಾರಾಯಣ, ಸಮಾಜದ ಮುಖಂಡರ ಚಿಕ್ಕಮಾಧು ಮಾತನಾಡಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ಮಹೇಶ್, ಪುರಸಭೆ ಸದಸ್ಯರಾದ ಮಂಜುಳ, ಶಂಕರ್‌ಸ್ವಾಮಿ, ನಟರಾಜು, ಶಂಕರ್, ಮಾಜಿ ಸದಸ್ಯ ಕೆ.ವಿನಯ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ. ರಮೇಶ್ ಕುಮಾರ್, ಕಾಂಗ್ರೆಸ್ ಮುಖಂಡರಾದ ಜಿ.ವೆಂಕಟೇಶ್, ಮಂಗಳವಾದ್ಯ ಕಲಾವಿದರ ಸಂಘದ ಗೌರವಾಧ್ಯಕ್ಷ ಹೆಚ್.ಎಂ.ಮಹದೇವ, ಉಪಾಧ್ಯಕ್ಷರಾದ ರಾಜಯ್ಯ, ಲೋಲಾ, ಕಾರ್ಯದರ್ಶಿ ಜಿ.ಕೆ.ವಿನಯ್‌ಕುಮಾರ್, ಸಹಕಾರ್ಯದರ್ಶಿ ಸಂತೋಷ್, ಪದಾಧಿಕಾರಿಗಳಾದ ಹೆಚ್.ಎಂ. ಮಂಜುನಾಥ್, ವಿ. ಕುಮಾರ್, ಚನ್ನಪ್ಪ ಮತ್ತಿತರರಿದ್ದರು.

ಪಿಕಾರ್ಡ್ ಬ್ಯಾಂಕ್ ನಿರ್ದೇಶಕರಿಗೆ ಸನ್ಮಾನ


ತಿ.ನರಸೀಪುರ ಪಿಕಾರ್ಡ್ ಬ್ಯಾಂಕ್ ನಿರ್ದೇಶಕರಾಗಿ 2ನೇ ಬಾರಿ ಆಯ್ಕೆಯಾದ ಮಾಡ್ರಹಳ್ಳಿ ಎಂ.ಶಿವಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕುರುಬೂರು ಶಾಂತರಾಜು, ಕು.ಶಿ.ಬೈಂಗೇಶ್, ಹಿರಿಯೂರು ನವೀನ್, ಕೊತ್ತೇಗಾಲ ಬಸವರಾಜು, ಚೌಹಳ್ಳಿ ಮಹದೇವಪ್ಪ, ಪುಟ್ಟಬುದ್ಧಿ ಮತ್ತಿತರಿದ್ದರು.

ಮಹದೇವಿ ನಿಧನ



ಮಲ್ಲುಂಡಿ, ಫೆ.13– ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಪಂ ಅಧ್ಯಕ್ಷೆ ಮಹದೇವಿ(55) ಗುರುವಾರ ನಿಧನ ರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಡೊರನಕಟ್ಟೆ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಹಲವು ಕ್ಷೇತ್ರಗಳಿಗೆ ಮಹರ್ಷಿ ಅಗಸ್ತ್ಯರ ಕೊಡುಗೆ ಅಪಾರ

ಖ್ಯಾತ ವಕೀಲ ಡಾ.ಓ. ಶ್ಯಾಂ ಭಟ್ ಅಭಿಮತ

ಮೈಸೂರು, ಫೆ.13(ಜಿಎ)– ಮಹರ್ಷಿ ಅಗಸ್ತ್ಯರು ಆಯುರ್ವೇದ, ವಿಜ್ಞಾನ, ಯೋಗ, ಸಿದ್ಧೌಷಧ, ಭಾಷೆ, ವ್ಯಾಕರಣ ಹೀಗೆ ಹಲವಾರು ಕ್ಷೇತ್ರಗಳಿಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ ಎಂದು ಖ್ಯಾತ ವಕೀಲರಾದ ಡಾ.ಓ.ಶ್ಯಾಮ್ ಭಟ್ ತಿಳಿಸಿದರು.

ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ವತಿಯಿಂದ ಕಾಶಿ ತಮಿಳು ಸಂಗಮದ ಭಾಗವಾಗಿ ಆಯೋಜಿಸಿದ್ದ ಸಿದ್ಧೌಷಧಕ್ಕೆ ಮಹರ್ಷಿ ಅಗಸ್ತ್ಯರ ಕೊಡುಗೆ ವಿಷಯ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಭಾರತೀಯ ಜ್ಞಾನಪರಂಪರೆ ಮತ್ತು ಮಹರ್ಷಿ ಅಗಸ್ತ್ಯ ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಮಹರ್ಷಿ ಅಗಸ್ತ್ಯರ ಕುರಿತು ಒರಿಸ್ಸಾ, ಕೇರಳ ಸೇರಿದಂತೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ. ಏಕೆಂದರೆ, ವಿವಿಧ ಕ್ಷೇತ್ರಗಳಲ್ಲಿ ಅಗಸ್ತ್ಯರ ಕೊಡುಗೆ ಅಪಾರವಾದದ್ದು. ಕಾವೇರಿ ನದಿಯ ತೀರದುದ್ದಕ್ಕೂ 400ಕ್ಕೂ ಹೆಚ್ಚು ಅಗಸ್ತ್ಯರ ದೇವಾಲಯಗಳಿವೆ. ದಕ್ಷಿಣ ಭಾರತದಲ್ಲಿ ಕೃಷಿಯನ್ನು ಹೇಳಿಕೊಟ್ಟರು. ಅಗಸ್ತ್ಯರು ಆಯುರ್ವೇದ, ವಿಜ್ಞಾನ, ಯೋಗ, ಸಿದ್ಧೌಷಧ, ಭಾಷೆ, ವ್ಯಾಕರಣ ಹೀಗೆ ಹಲವಾರು ಕ್ಷೇತ್ರಗಳಿಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ ಎಂದರು.

ಅಗಸ್ತ್ಯರು ಭಾರತವೇ ಅಲ್ಲದೆ ಶ್ರೀಲಂಕಾ, ಮಂಗೋಲಿಯಾ, ಚೈನಾ ಮುಂತಾದ ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿದ್ದ ಬಗ್ಗೆ ಪ್ರಾಚೀನ ಕೃತಿಗಳಲ್ಲಿ ಮಾಹಿತಿಯಿದೆ. ಅಗಸ್ತ್ಯರು ಮರ್ಮ ಚಿಕಿತ್ಸಾ ಪದ್ಧತಿಯನ್ನು ಕಂಡು ಹಿಡಿದವರು. ಈ ಹಿನ್ನೆಲೆಯಲ್ಲಿ ದೇಸಿ ವೈದ್ಯ ಪದ್ಧತಿಯಾದ ನಾಡಿ ಚಿಕಿತ್ಸೆ ಮತ್ತು ಮರ್ಮ ಚಿಕಿತ್ಸೆಯನ್ನು ಮತ್ತೆ ಪ್ರಚಾರಕ್ಕೆ ತರುವ ಅಗತ್ಯವಿದೆ ಎಂದು ತಿಳಿಸಿದರು.

ಸಿದ್ಧೌಷಧಿಯಲ್ಲಿ ಸಿದ್ಧಹಸ್ತರಾಗಿದ್ದ ಅಗಸ್ತ್ಯರು ಪ್ರಕೃತಿಯಲ್ಲಿನ ಗಿಡಮೂಲಿಕೆಗಳಲ್ಲಿರುವ ವಿಶೇಷ ಗುಣಗಳನ್ನು ವನವಾಸಿಗಳಿಗೆ ಹೇಳಿಕೊಟ್ಟವರು. ಚರಕ ಸಂಹಿತೆಯಲ್ಲಿ ಉಲ್ಲೇಖಿಸಲ್ಪಟ್ಟ 53 ಋಷಿಗಳ ಪೈಕಿ ಅಗಸ್ತ್ಯರೂ ಒಬ್ಬರು. ಜಲ ವಿಜ್ಞಾನಿಯೂ ಆಗಿದ್ದ ಅವರು ನೀರಿನ ಬಗ್ಗೆ ಮತ್ತು ಜಲ ಸಂಪತ್ತಿನ ಬಗ್ಗೆ ವಿಶೇಷ ಜ್ಞಾನವನ್ನು ಹೊಂದಿದ್ದರು. ದಕ್ಷಿಣ ಭಾರತದಲ್ಲಿ ನೀರಿನ ಅಭಾವವಿದ್ದ ಬಗೆಯನ್ನು ಮನಗಂಡ ಅವರು ಕಾವೇರಿ ನದಿ ಉಗಮಕ್ಕೆ ಕಾರಣಕರ್ತರು. ಸುರ್ವಣಮುಖಿ ಮತ್ತು ಶಾಲ್ಮಲಿ ನದಿಗಳನ್ನು ಕೂಡ ದಕ್ಷಿಣ ಭಾರತಕ್ಕೆ ತರಿಸಿದ್ದರು ಎಂಬ ಉಲ್ಲೇಖಗಳು ಪುರಾಣಗಳಲ್ಲಿವೆ. ಈ ಹಿನ್ನೆಲೆಯಲ್ಲಿ ಅಗಸ್ತ್ಯರನ್ನು ಕುರಿತಾದ ಬಹುಶಿಸ್ತೀಯ ಅಧ್ಯಯನ ಮತ್ತು ಸಂಶೋಧನೆಗಳ ಅಗತ್ಯವಿದೆ ಎಂದರು.

ನಂತರ ಡಾ.ಎನ್.ಆಂಜನೇಯ ಮೂರ್ತಿ ಅವರು 'ಸಿದ್ಧೌಷಧಕ್ಕೆ ಅಗಸ್ತ್ಯರ ಕೊಡುಗೆ' ಕುರಿತು ಮಾತನಾಡಿ, ಅಗಸ್ತ್ಯರು ಕುಂಬೋದ್ಭವರು. ಮೊದಲ ಪ್ರನಾಳ ಶಿಶು. ಅವರ ಪತ್ನಿಯಾದ ಲೋಪಮುದ್ರೆಯನ್ನು ಟೀಶ್ಯು ಕಲ್ಚರ್ ಅಥವಾ ಬಯೋ ಟೆಕ್ನಾಲಜಿಯ ಮುಖಾಂತರ ಸೃಷ್ಟಿಸಿದವರು. ಜಗತ್ತಿನಲ್ಲಿ ಎಷ್ಟೋ ಔಷಧಿಗಳನ್ನು ಅಗಸ್ತ್ಯರು ಕಂಡುಹಿಡಿದಿದ್ದರು. ಸಿದ್ಧೌಷಧ ಕ್ಷೇತ್ರವಲ್ಲದೆ ಹಲವಾರು ಕ್ಷೇತ್ರಗಳಿಗೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ತಮಿಳಿನ ವ್ಯಾಕರಣವನ್ನು ಗ್ರಂಥರೂಪಕ್ಕೆ ತಂದಿದ್ದಾರೆ. ಇವರ ಆಯುರ್ವೇದ ಸಂಬಂಧಿ ವಿಚಾರಗಳು ಇಂದಿನ ಆಯುರ್ವೇದ ವಿದ್ಯಾರ್ಥಿಗಳು ಮತ್ತು ವೈದ್ಯರಿಗೆ ದಾರಿದೀಪವಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಡಾ.ಶ್ರೀವತ್ಸ ಪ್ರೊಡಾ.ವಾಸುದೇವ ಚಾಟ್ನೆ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ, ಕಾರ್ಯಕ್ರಮದ ಸಂಚಾಲಕ ಡಾ.ಸಣ್ಣ ಪಾಪಯ್ಯ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸಿಬ್ಬಂದಿ ಮತ್ತು ಸರ್ಕಾರಿ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಕಾಶಿ ತಮಿಳು ಸಂಗಮದ ಭಾಗವಾಗಿ ಆಯೋಜಿಸಿದ್ದ 'ಸಿದ್ಧೌಷಧಕ್ಕೆ ಮಹರ್ಷಿ ಅಗಸ್ತ್ಯರ ಕೊಡುಗೆ' ವಿಷಯ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ.ಓ.ಶ್ಯಾಮ್ ಭಟ್ ಅವರು 'ಭಾರತೀಯ ಜ್ಞಾನಪರಂಪರೆ ಮತ್ತು ಮಹರ್ಷಿ ಅಗಸ್ತ್ಯ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಚಿಂಗಾರಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸನಮ್ ತೇರಿ ಕಸಮ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಜು ಜೇಮ್ಸ್ ಬಾಂಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ಛಾವಾ (ಹಿ)	4 ಪ್ರದರ್ಶನಗಳು
ಲಿಡೋ	
ಭುವನಂ ಗಗನಂ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮ್ಯಾಕ್ಸ್ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಾ.5ರಂದು ನಾಟಿ ಕೋಳಿ ಸಾಂಬಾರ್‌ನಲ್ಲಿ ಮುದ್ದೆ ಉಣ್ಣುವ ಸ್ಪರ್ಧೆ

15 ನಿಮಿಷದಲ್ಲಿ ಅರ್ಧ ಕೆಜಿ ಮುದ್ದೆ ತಿಂದರೆ 25 ಸಾವಿರ ರೂ. ಬಹುಮಾನ



ಮೈಸೂರು, ಫೆ.13(ಜಿಎ)–ಪಿಜ್ಜಾ, ಬರ್ಗರ್, ನೂಡಲ್ಸ್ ತಿನ್ನೋದು ಬಿಡಿ. ರಾಗಿ ಗಂಜಿ, ರಾಗಿ ಮುದ್ದೆ ತಿಂದು ಆರೋಗ್ಯವಾಗಿರಿ ಶೀರ್ಷಿಕೆ ಅಡಿಯಲ್ಲಿ ದಶಮುಖ ಸಾಮಾಜಿಕ ಸೇವಾ ಟ್ರಸ್ಟ್ ವತಿಯಿಂದ ನಾಟಿ ಕೋಳಿ ಸಾಂಬಾರ್‌ನಲ್ಲಿ ಮುದ್ದೆ ಉಣ್ಣುವ ಸ್ಪರ್ಧೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಹೆಚ್.ಕೆ.ಬೊಮ್ಮೇಗೌಡ ಈ ವಿಷಯ ತಿಳಿಸಿ, ಟ್ರಸ್ಟ್ ವತಿಯಿಂದ ಮಾರ್ಚ್ 5ರಂದು ಸಂಸ್ಥೆಯ ವಾರ್ಷಿಕೋತ್ಸವ ಪ್ರಯುಕ್ತ ರಾಗಿ ಮಹತ್ವವನ್ನು ಸಾರುವ ಹಿನ್ನೆಲೆಯಲ್ಲಿ ಮುದ್ದೆ ಉಣ್ಣುವ ಸ್ಪರ್ಧೆ ಆಯೋಜಿಸಲಾಗಿದೆ. ಬೆಂಗಳೂರಿನ ಬಿಳೇಕಹಳ್ಳಿ ವಿಜಯಾಬ್ಯಾಂಕ್ ಲೇಔಟ್‌ನಲ್ಲಿನ ಮುಲ್ಕಿ ಸುಂದರಾಮ್ ಶೆಟ್ಟಿ ಮೆಮೊರಿಯಲ್ ಹಾಲ್‌ನಲ್ಲಿ ನಾಟಿ ಕೋಳಿ ಸಾಂಬಾರ್‌ನಲ್ಲಿ ಮುದ್ದೆ ಉಣ್ಣುವ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು.

15 ನಿಮಿಷದಲ್ಲಿ ಅರ್ಧ ಕೆಜಿ ತೂಕಕ್ಕೂ ಹೆಚ್ಚು ಮುದ್ದೆ ತಿನ್ನುವವರಿಗೆ ಪ್ರಥಮ ಬಹುಮಾನವಾಗಿ 25 ಸಾವಿರ, ದ್ವಿತೀಯ ಬಹುಮಾನವಾಗಿ 15 ಸಾವಿರ, ತೃತೀಯ ಬಹುಮಾನವಾಗಿ 7,500 ರೂ. ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ. 92422 95531 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಇತರೆ ಪದಾಧಿಕಾರಿಗಳು ಇದ್ದರು.

ಡಾ.ಬಾಬು ಜಗಜೀವನರಾಂ, ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಫೆ.13– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಏ.5 ಡಾ. ಬಾಬು ಜಗಜೀವನರಾಂ 118ನೇ ಹಾಗೂ ಏ.14 ಡಾ. ಬಿ.ಆರ್. ಅಂಬೇಡ್ಕರ್ ಅವರ 134 ನೇ ಜನ್ಮ ದಿನಾಚರಣೆಯನ್ನು ರಾಜ್ಯಮಟ್ಟದಲ್ಲಿ ಆಚರಿಸಲಾಗುತ್ತಿದ್ದು, 2025–26ನೇ ಸಾಲಿಗೆ ಡಾ. ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ ಸಂದರ್ಭದಲ್ಲಿ ಪರಿಶಿಷ್ಟ ಜಾತಿ,



ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸುವ ವ್ಯಕ್ತಿಗಳನ್ನು ಗುರುತಿಸಿ, ಈ ಮಹನೀಯರ ಹೆಸರಲ್ಲಿ ಡಾ. ಬಾಬು ಜಗಜೀವನರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಯನ್ನು ನೀಡಿ ಗೌರವಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಮೈಸೂರು ಜಿಲ್ಲೆಗೆ ಸಂಬಂಧಿಸಿದ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ನಮೂನೆಯನ್ನು ಪಡೆದು ದ್ವಿಪ್ರತಿಯಲ್ಲಿ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ ಫೆ.18 ರೊಳಗೆ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾತೃಭಾಷೆ ಕಲಿತರೆ ಮಾತ್ರ ಬೇರೆ ಭಾಷೆಯ ಜ್ಞಾನ ಪಡೆಯಲು ಸಾಧ್ಯ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಮತ

ಮೈಸೂರು, ಫೆ.13(ಜಿಎ)–ಮೊದಲು ಮಾತೃಭಾಷೆ ಕಲಿತರೆ ಮಾತ್ರ ಬೇರೆ ಬೇರೆ ಭಾಷೆಯ ವಿಚಾರದ ಜ್ಞಾನವನ್ನು ಪಡೆಯಲು ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಶಾರದಾ ವಿಲಾಸ್ ಕಾಲೇಜಿನಲ್ಲಿ ಐಕ್ಯೂಎಸಿ ಹಾಗೂ ಕನ್ನಡ ವಿಭಾಗದ ವತಿಯಿಂದ ಶಾರದಾ ವಿಲಾಸ್ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ 'ವರ್ತಮಾನದ ಕನ್ನಡ ಸಾಹಿತ್ಯ: ಪ್ರತಿಸ್ಪಂದನೆಗಳು' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಜೀವನ, ತಂತ್ರಜ್ಞಾನ ಬದಲಾಗುತ್ತಿರುವಂತೆ ಕನ್ನಡವು ಬದಲಾಗುತ್ತಿದೆ. ಕನ್ನಡದ ಮಹಾಕವಿ ಕುವೆಂಪು ಹೇಳಿದಂತೆ ಕನ್ನಡವನ್ನು ಉಳಿಸುವ, ಬೆಳಸುವಂತಹ ಪರಿಸ್ಥಿತಿಯ ಕಾಲ ಬಂದಿದ್ದು, ಈ ನಡುವೆ ಉಳಿಸಿ ಬೆಳಸುವಂತಹ ಕಾರ್ಯವು ನಡೆಯುತ್ತಿದೆ ಎಂದರು.

ಕನ್ನಡದ ನೆಲ, ಜಲ, ಭಾಷೆ ಬಗ್ಗೆ ನಾವು ಹೆಚ್ಚಿನ ಒತ್ತು ನೀಡಬೇಕು. ಕನ್ನಡಕ್ಕೆ ಈ ಹಿಂದೆ ನಮ್ಮ ಶ್ರೇಷ್ಠ ಸಾಹಿತಿಗಳು ಕೊಟ್ಟ ಕೊಡುಗೆಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕು. ಆಧುನಿಕ ಕಾಲಘಟ್ಟದಲ್ಲಿ ಅದರಲ್ಲೂ ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲೂ ಕನ್ನಡ ಉಳಿಸುವ ಮಹದಾಸೆ ನಮ್ಮದಾಗಿದೆ. ಆ ನಿಟ್ಟಿನಲ್ಲಿ ಹಿರಿಯರು ಮತ್ತು ಕಿರಿಯರು ಕನ್ನಡವನ್ನ ಉಳಿಸುವ ಮನೋಭಾವ ಬೆಳಸಿಕೊಳ್ಳಬೇಕು. ಕುವೆಂಪು ಅವರು ಹೇಳಿದಂತೆ ನಮ್ಮ ಶಿಕ್ಷಣ ಅನ್ನದ ಶಿಕ್ಷಣವಾಗಬಾರದು. ಜ್ಞಾನದ ಶಿಕ್ಷಣವಾಗಬೇಕು. ಅದರ ನಿಟ್ಟಿನಲ್ಲಿ ಈ ರೀತಿಯ ನಡೆಸುತ್ತಿರುವ ಕನ್ನಡದ ವಿಚಾರ ಸಂಕೀರಣಗಳು ವಿದ್ಯಾರ್ಥಿಗಳು ಸಾಹಿತ್ಯದಲ್ಲಿ ಮುಂದೆ ಸಾಹಿತ್ಯ ಕೃಷಿ ಮಾಡಲು ನೆರವಾಗುತ್ತದೆ ಎಂದು ತಿಳಿಸಿದರು.



ಮೈಸೂರಿನ ಶಾರದ ವಿಲಾಸ್ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಆಯೋಜಿಸಿದ್ದ 'ವರ್ತಮಾನದ ಕನ್ನಡ ಸಾಹಿತ್ಯ : ಪ್ರತಿಸ್ಪಂದನೆಗಳು' ಕುರಿತ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕೀರಣವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ.ಸಹಿಬಾ ಭೂಮಿಗೌಡ ಮಾತನಾಡಿ, ಇಂತಹ ವಿಚಾರ ಸಂಕೀರಣಗಳನ್ನು ನಡೆಸುವಾಗ ಅನೇಕ ತಾಂತ್ರಿಕ, ಆರ್ಥಿಕ ತೊಡಕುಗಳಿರುತ್ತವೆ. ಅದರ ಜೊತೆಗೆ ಕಾರ್ಯಕ್ರಮಗಳು ಹೆಚ್ಚಿನ ಜನ ಮನ್ನಣೆ ಪಡೆಯುವಂತಹವಲ್ಲ. ರಾಜ್ಯ ಮಟ್ಟದ ಹಾಗೂ ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರಣಗಳು ಅದರದ್ದೇ ಆದ ಘನತೆ ಹೊಂದಿರುತ್ತವೆ ಎಂದರು.

ಎಳೆಯರನ್ನು ಗಮನದಲ್ಲಿಟ್ಟುಕೊಂಡು ತರಗತಿಯಲ್ಲಿನ ಪಠ್ಯಗಳ ಮೂಲಕ ಕನ್ನಡ ಸಾಹಿತ್ಯವನ್ನು ಓದುವ ಇವತ್ತಿನ ದಿನಮಾನಗಳಿಂದ ನಾವು ವಿಸ್ತರಣೆಗೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯದಿಂದ ಆಚೆಗೆ ಸಾಹಿತ್ಯ, ಸಾಹಿತಿಗಳನ್ನು ಗುರುತಿಸುವ ಆಸಕ್ತಿಯನ್ನು ಬೆಳಸುವಲ್ಲಿ ನಾವು ವಿಫಲರಾಗಿದ್ದೇವೆ. ವಿದ್ಯಾರ್ಥಿಗಳ ಈ ಅಲ್ಪ ತೃಪ್ತಿಗೆ ಕೇವಲ ಅವರು ಮಾತ್ರ ಕಾರಣರಲ್ಲ, ಅಧ್ಯಾಪಕರಾದ ನಮ್ಮ ಪಾಲು ಇದೆ. ನಾವು ಸಮರ್ಪಕವಾಗಿ ಕಲಿಕೆಯನ್ನು ತಿಳಿಸುವಲ್ಲಿ ಕಾರ್ಯಪ್ರವೃತ್ತರಾಗಬೇಕು. ಆಗ ಮಕ್ಕಳಿಗೆ ಸಾಹಿತ್ಯದ ಓದು ಕೇವಲ ಯಾಂತ್ರಿಕವಾಗಿ, ಸಾಮಾನ್ಯವಾಗಿ ಕಾಣದೆ, ಹೆಚ್ಚಿನ ಆಸಕ್ತಿ ಮೂಡುವಂತಾಗುತ್ತದೆ. ವಿಶ್ವ ಪ್ರಜೆಯಾಗಲು ನಮ್ಮ ಕೈ ಹಿಡಿದು ನಡೆಸಲು ಸಾಹಿತ್ಯ ಒಂದೇ ಸಾಧನವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾರದಾ ವಿಲಾಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಕಾರ್ಯದರ್ಶಿ ಆರ್.ದಿನೇಶ್, ಕಾಲೇಜು ಪ್ರಾಂಶುಪಾಲೆ ಡಾ.ಎಂ ದೇವಿಕಾ, ಮೈಸೂರು ವಿವಿ ಪ್ರೊ. ಟಿ.ಕೆ ಉಮೇಶ್ ಉಪಸ್ಥಿತರಿದ್ದರು.

ಮೂಢನಂಬಿಕೆ ಬಿಟ್ಟು ಪಿಡ್ಸ್‌ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಿ

ಡಿಹೆಚ್‌ಓ ಡಾ. ಪಿ.ಸಿ.ಕುಮಾರಸ್ವಾಮಿ ಸಲಹೆ

ಮೈಸೂರು,ಫೆ.13– ಅಪಸ್ಮಾರ(ಪಿಡ್ಸ್) ಕಾಣಿಸಿಕೊಂಡ ವ್ಯಕ್ತಿಗಳಿಗೆ ಬೀಗ, ಕಬ್ಬಿಣ ಕೊಡುವುದು ಹಾಗೂ ಇತರೆ ಮೂಢನಂಬಿಕೆಯನ್ನು ಬಿಟ್ಟು ಮೈಸೂರು ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿರುವ ರೂಮ್ ನಂಬರ್–108 ಇಲ್ಲಿ ಚಿಕಿತ್ಸೆ ನೀಡಲಾಗುವುದು. ಆದ್ದರಿಂದ KaBHI (Karnataka Brain Health Initiative) ಮೆದುಳು ಆರೋಗ್ಯ ಕ್ಲಿನಿಕ್‌ಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುವುದು ಸೂಕ್ತ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ ಮಾಹಿತಿ ನೀಡಿದರು.



ಮೈಸೂರಿನ ರಾಜೇಂದ್ರನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಅಪಸ್ಮಾರ ದಿನಾಚರಣೆಯನ್ನು ಉದ್ಘಾಟನೆ ಮಾಡಿ, ಮಾತನಾಡಿದರು.

ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಬೃಂದಾ ಮೆದುಳಿಗೆ ಸಂಬಂಧಿಸಿದಂತೆ ತಲೆನೋವು, ಸ್ಟ್ರೋಕ್, ಮರೆವಿನ ಖಾಯಿಲೆಗಳಿಗೆ ತಪಾಸಣೆ ನಡೆಸಿ ಚಿಕಿತ್ಸೆ ಪಡೆಯುವುದು ಸೂಕ್ತ ಎಂದು ಮಾಹಿತಿ ನೀಡಿದರು. ಬ್ರೇನ್ ಹೆಲ್ತ್ ಕ್ಲಿನಿಕ್ ಕುರಿತಂತೆ ಇಲಾಖೆ ಎಲ್ಲಾ ಪಿ.ಹೆಚ್.ಸಿ.ಓ, ಹೆಚ್.ಐ.ಓ ಹಾಗೂ ಐಇಸಿ ಅಧಿಕಾರಿಗಳಿಗೂ ತರಬೇತಿ ನೀಡಿ ಸಮುದಾಯಕ್ಕೆ ಹೆಚ್ಚಿನ ಮಟ್ಟದಲ್ಲಿ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.

ಮನುಷ್ಯನ ಸಮಗ್ರ ಆರೋಗ್ಯದ ಮೂಲ ಮೆದುಳು. ಮೆದುಳಿನಲ್ಲಿ ಸ್ವಲ್ಪ ಏರುಪೇರಾದರು ಅನೇಕ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ಭಾರತದಲ್ಲಿಯೇ ಮೊಟ್ಟ ಮೊದಲು ಮೆದುಳು ಆರೋಗ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವ KaBHI ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದ ಪರವಾಗಿ ಪ್ರಾರಂಭಿಸಿರುವ ಉಚಿತ ಸರ್ಕಾರಿ ಸೌಲಭ್ಯಗಳನ್ನು ಒದಗಿಸಿ ಕೊಡಲು ಬ್ರೇನ್ ಹೆಲ್ತ್ ಕ್ಲಿನಿಕ್ ರೂಮ್ ನಂಬರ್–108, ಜಿಲ್ಲಾಸ್ಪತ್ರೆ, ಮೈಸೂರು ಇಲ್ಲಿಗೆ ಭೇಟಿ ನೀಡಿ ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಎಂ.ಮುನೀಂದ್ರಮ್ಮ, ಪ್ರಾಥಮಿಕ ಆರೋಗ್ಯ ಕೇಂದ್ರ ರಾಜೇಂದ್ರನಗರದ ವೈದ್ಯಾಧಿಕಾರಿಗಳಾದ ಡಾ. ನಿಶಾಂತ್.ಎಸ್, ಡಾ. ರವಿಕುಮಾರ್ ಬಿ.ಎಂ. ಬ್ರೇನ್ ಹೆಲ್ತ್ ಕ್ಲಿನಿಕ್, ಡಾ. ಚೇತನ್ ಕಣ್ಣಿನ ತಜ್ಞರು ಹಾಗೂ ತಂಡ, ದಕ್ಷಿಣ ಆರೋಗ್ಯ ಶಿಕ್ಷಣಾಧಿಕಾರಿ ಮೂರ್ತಿ, ಡಾ.ಪುನೀತಾ.ಬಿ ಚರ್ಮ ರೋಗ ತಜ್ಞರು ಮತ್ತು ಬೀಬಿ ಫಾತಿಮಾ ಮನೋವಿಜ್ಞಾನಿ ಬ್ರೇನ್ ಹೆಲ್ತ್ ಕ್ಲಿನಿಕ್ ಮೈಸೂರು, ಚಿತ್ರಎಸ್.ಕೆ ಮನೋವಿಜ್ಞಾನಿ ಸ್ಟಾಫ್ ನರ್ಸ್ ಅಶ್ವಿನಿ ಹಾಗೂ ಕೃತಿಕ ಜಿಲ್ಲಾ ಸಂಯೋಜಕರು ಅನಿಲ್ (ಎ.ಎಸ್.ಓ), ಸುಮಂತು ಆರೋಗ್ಯ ಸುರಕ್ಷಣಾಧಿಕಾರಿಗಳು, ಫಿಸಿಯೋಥೆರಪಿಸ್ಟ್ ಶೃತಿ ಉಪಸ್ಥಿತರಿದ್ದರು.

ಉದಯಗಿರಿ ಗಲಾಟೆಯಲ್ಲಿ ಎಸ್‌ಡಿಪಿಐ ಪಾತ್ರವಿಲ್ಲ; ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಸ್ಪಷ್ಟನೆ

ಮೈಸೂರು, ಫೆ.13(ಬಿಎಲ್‌ಯು)– ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ ಪ್ರಕರಣದಲ್ಲಿ ಎಸ್‌ಡಿಪಿಐ ಪಾತ್ರವಿಲ್ಲ ಎಂದು ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಸ್ಪಷ್ಟಪಡಿಸಿದರು.



ನಗರದ ಉದಯಗಿರಿಯಲ್ಲಿರುವ ಪಕ್ಷದ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿರುವ ವಿಡಿಯೋ ಕೊಟ್ಟರೆ ನಾವೇ ಅವರನ್ನು ಪೊಲೀಸರಿಗೆ ಒಪ್ಪಿಸುತ್ತೇವೆ ಎಂದು ತಿಳಿಸಿದರು. ಈ ಘಟನೆಯಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕು. ಆದರೆ ಯಾವುದೇ ಕಾರಣಕ್ಕೂ ಅಮಾಯಕನಿಗೆ ಶಿಕ್ಷೆ ಆಗುವುದು ಬೇಡ ಎಂದು ಅಬ್ದುಲ್ ಮಜೀದ್ ಅಭಿಪ್ರಾಯಪಟ್ಟರು.

ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಪ್ರಕರಣದಂತೆ ಕೂಡ ನಡೆದಿದೆ. ಪ್ರಾಯಶಃ ಪೊಲೀಸರು ಎಚ್ಚೆತ್ತುಕೊಂಡಿದ್ದರೆ ಈ ಘಟನೆ ನಡೆಯುತ್ತಿರಲಿಲ್ಲ. ಆರೋಪಿ ವಿರುದ್ಧ ಎಫ್‌ಐಆರ್ ದಾಖಲು ಮಾಡಲು ಪೊಲೀಸರು ವಿಳಂಬ ಮಾಡಿದ್ದಾರೆ ಎಂದು ದೂರಿದರು.

ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಶಾಂತಿ ಕದಡುವ ಹೇಳಿಕೆ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಚೋದನೆ ಮಾಡುವವರ ವಿರುದ್ಧ ಪೊಲೀಸರು ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಾಕಾರಿ ಪೋಸ್ಟ್ ಹಾಕಿದ ವ್ಯಕ್ತಿಯ ಹಿನ್ನೆಲೆ ತಿಳಿಯಬೇಕು ಎಂದು ಆಗ್ರಹಿಸಿದರು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಹಾಳು ಮಾಡಲು ಈ ರೀತಿ ಮಾಡಲಾಗಿದೆ. ಇನ್ನು ಮುಂದಾದರೂ ಇಂತಹ ಘಟನೆ ನಡೆಯದಂತೆ ಪೊಲೀಸರು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಅಬ್ದುಲ್ ಮಜೀದ್ ಒತ್ತಾಯಿಸಿದರು.

ಫೈನಾನ್ಸ್ ಕಚೇರಿಗಳ ಗೋಡೆ ಮೇಲೆ 'ಕಿರುಕುಳ ನೀಡಿದರೆ ಕಾನೂನು ಕ್ರಮ' ಸಂದೇಶ

ರೈತ ಸಂಘದಿಂದ ವಿನೂತನ ಪ್ರತಿಭಟನೆ



ಮೈಸೂರಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಫೈನಾನ್ಸ್ ಕಂಪನಿ ಕಚೇರಿಗಳ ಗೋಡೆ ಮೇಲೆ ಸಾಲ ಪಡೆದ ರೈತರಿಗೆ ಕಿರುಕುಳ ನೀಡಿದರೆ ಕ್ರಮ ಕೈಗೊಳ್ಳುವ ಎಚ್ಚರಿಕೆ ಸಂದೇಶವುಳ್ಳ ಕರಪತ್ರ ಅಂಟಿಸಿದರು.

ಮೈಸೂರು, ಫೆ.13(ಎಂಟಿವೈ)– ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳಲ್ಲಿ ಸಾಲ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮೈಸೂರಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಫೈನಾನ್ಸ್ ಕಚೇರಿಗಳ ಗೋಡೆ ಮೇಲೆ ಕಿರುಕುಳ ನೀಡಿದರೆ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ಸಂದೇಶವುಳ್ಳ ನೋಟಿಸ್ ಅಂಟಿಸುವ ಮೂಲಕ ವಿನೂತನ ರೀತಿ ಪ್ರತಿಭಟಿಸಿದರು.

ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ಮಹಿಂದ್ರಾ ಫೈನಾನ್ಸ್, ಇಕ್ವಿಟಾಸ್ ಬ್ಯಾಂಕ್, ಐಐಎಫ್‌ಎಲ್, ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಕಂಪನಿಗಳ ಕಚೇರಿಯ ವ್ಯವಸ್ಥಾಪಕರನ್ನು ಕಚೇರಿಯಿಂದ ಹೊರಗೆ ಕರೆದು ಸಂಘಟನೆ ಬರೆದಿರುವ ಒಕ್ಕಣೆ, ರೈತರ ನೋಟಿಸ್ ಅನ್ನು ಓದಿ ತಿಳಿಸಿ, ಅದನ್ನು ಫೈನಾನ್ಸ್ ಕಂಪನಿಯ ಬಾಗಿಲು, ಗೋಡೆಗಳಿಗೆ ಅಂಟಿಸಲಾಯಿತು. ಎರಡು ದಿನದ ಹಿಂದೆ ಐಐಎಫ್‌ಎಲ್ ಫೈನಾನ್ಸ್ ಕಂಪನಿಯಲ್ಲಿ ಸಾಲ ಪಡೆದು ಮನೆಯನ್ನು ಹರಾಜು ಮಾಡುವುದಾಗಿ ಗೋಡೆ ಬರಹ ಬರೆದಿದ್ದರಿಂದ ಭಯಭೀತರಾಗಿ ಊರನ್ನೇ ತೊರೆದಿದ್ದ ಕುಟುಂಬದ ಸದಸ್ಯರು ನೋಟಿಸ್ ಅಂಟಿಸಿದರು. ಸಾಲ ಪಡೆದ ರೈತರಿಗೆ ಯಾವುದೇ ಕಾರಣಕ್ಕೂ ತೊಂದರೆ ಕೊಡಬಾರದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಮಂಜು ಕಿರಣ್, ಮೋಹನ್ ಕುಮಾರ್ ಸಿದ್ದಲಿಂಗಪುರ, ವರಕೋಡು ಕೃಷ್ಣೇಗೌಡ, ಶಿರಮಳ್ಳಿ ರತ್ನಮ್ಮ, ಹುಲ್ಲಳ್ಳಿ ಸತೀಶ್, ಚಿಕ್ಕಣ್ಣ, ಗಳಿಗೆರೆಹುಂಡಿ ವೆಂಕಟೇಶ್, ಕಾಳಿಹುಂಡಿ ಸಿಂಧು, ಸಿದ್ದಲಿಂಗಪುರ ಕಿರಣ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.


ವಿಪಕ್ಷಗಳ ಗದ್ದಲದ ನಡುವೆ ಸಂಸತ್ತಿನಲ್ಲಿ ವಕ್ಫ್ ತಿದ್ದುಪಡಿ ಮಸೂದೆ ವರದಿ ಮಂಡನೆ

ನವದೆಹಲಿ, ಫೆ.13– ಸಂಸತ್ತಿನ ಜಂಟಿ ಸಂಸದೀಯ ಸಮಿತಿ(ಜೆಪಿಸಿ) ಪುರಸ್ಕರಿಸಿರುವ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಇಂದು (ಫೆ.13) ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡನೆ ಮಾಡಲಾಗಿದೆ. ಜೆಪಿಸಿ ಮುಖ್ಯಸ್ಥ ಮತ್ತು ಬಿಜೆಪಿ ಸಂಸದ ಜಗದಂಬಿಕಾ ಪಾಲ್ ಅವರು, ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಮಂಡಿಸಿದರು.

ಜಗದಂಬಿಕಾ ಪಾಲ್ ಅವರು ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಮಂಡಿಸುತ್ತಿದ್ದಂತೆ, ಲೋಕಸಭೆಯ ವಿಪಕ್ಷ ಸದಸ್ಯರು ತೀವ್ರ ಕೋಲಾಹಲ ಎಬ್ಬಿಸಿದರು. ಜಂಟಿ ಸಂಸದೀಯ ಸಮಿತಿಯು ಏಕಪಕ್ಷೀಯ ನಿರ್ಧಾರ ತೆಗೆದುಕೊಂಡಿದ್ದು, ಸಮಿತಿಯಲ್ಲಿದ್ದ ವಿಪಕ್ಷ ಸದಸ್ಯರ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ವಿಪಕ್ಷ ಸದಸ್ಯರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ವಕ್ಫ್ ತಿದ್ದುಪಡಿ ಮಸೂದೆ ವರದಿಯ ಕುರಿತು ಸದನದಲ್ಲಿ ವಿಸ್ತೃತ ಚರ್ಚೆಗೆ ಪಟ್ಟುಹಿಡಿದ ವಿಪಕ್ಷ ಸದಸ್ಯರು, ವರದಿಯ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳ ಬಗ್ಗೆ ಸುದೀರ್ಘ ಚರ್ಚೆಯ ಅವಶ್ಯಕತೆ ಇದೆ ಎಂದು ವಾದಿಸಿದರು. ಆದರೆ ಸರ್ಕಾರ ವರದಿಯ ಬದಲು ನೈಜ ಮಸೂದೆ ಮಂಡನೆ ಸಂದರ್ಭದಲ್ಲೇ ಚರ್ಚೆ ಮಾಡಬಹುದು ಎಂದು ವಾದಿಸಿತು.

ಆಡಳಿತ ಪಕ್ಷದ ವಾದವನ್ನು ಪುರಸ್ಕರಿಸಿದ ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ಸದ್ಯ ಜೆಪಿಸಿ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಮಾತ್ರ ಮಂಡನೆ ಮಾಡುತ್ತಿದ್ದು, ಸದನದಲ್ಲಿ ಕಾನೂನು ಸಚಿವ ಕಿರಣ್ ರಿಜಿಜು ಅವರು ನೈಜ ವರದಿಯನ್ನು



ಮಂಡಿಸಿದಾಗ ವಿಸ್ತೃತ ಚರ್ಚೆಗೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.


ಇದರಿಂದ ಕೆರಳಿದ ವಿಪಕ್ಷ ಸದಸ್ಯರು ಸದನದಲ್ಲಿ ತೀವ್ರ ಗದ್ದಲ ಎಬ್ಬಿಸಿದರಲ್ಲದೇ, ಕಲಾಪವನ್ನು ಬಹಿಷ್ಕರಿಸಿ ಹೊರನಡೆದರು. ಇದರಿಂದ ಲೋಕಸಭೆ ಕಲಾಪವನ್ನು ತಾತ್ಕಾಲಿಕವಾಗಿ ಮುಂದೂಡಿ ಸ್ಪೀಕರ್ ಓಂ ಬಿರ್ಲಾ ಆದೇಶ ಹೊರಡಿಸಿದರು.

ಅತ್ತ ರಾಜ್ಯಸಭೆಯಲ್ಲೂ ಸಂಸತ್ತಿನ ಜಂಟಿ ಸಂಸದೀಯ ಸಮಿತಿ(ಜೆಪಿಸಿ) ಪುರಸ್ಕರಿಸುವ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಇಂದು ಮಂಡಿಸಲಾಯಿತು. ಜೆಪಿಸಿ ಸದಸ್ಯೆ ಮತ್ತು ಬಿಜೆಪಿ ಸಂಸದೆ ಮೇಧಾ ವಿಶ್ರಮ್ ಕುಲಕರ್ಣಿ ಅವರು, ರಾಜ್ಯಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಮಂಡಿಸಿದರು.

ಇನ್ನು ಮೇಧಾ ವಿಶ್ರಮ್ ಕುಲಕರ್ಣಿ ಅವರು ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಮಂಡಿಸುತ್ತಿದ್ದಂತೆ, ರಾಜ್ಯಸಭೆಯ ವಿಪಕ್ಷ ಸದಸ್ಯರು ತೀವ್ರ ಕೋಲಾಹಲ ಎಬ್ಬಿಸಿದರು. ಜಂಟಿ ಸಂಸದೀಯ ಸಮಿತಿಯು ನಿಯಮಾವಳಿಗಳನ್ನು ಪಾಲಿಸಿಲ್ಲ ಎಂದು ಆರೋಪಿಸಿ, ವಿಪಕ್ಷ ಸದಸ್ಯರು ಪ್ರತಿಭಟನೆ ನಡೆಸಿದರು.

ಈ ಕುರಿತು ಮಾತನಾಡಿದ ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಜೆಪಿಸಿ ಪುರಸ್ಕರಿಸಿರುವ ವಕ್ಫ್ ತಿದ್ದುಪಡಿ ಮಸೂದೆ ವರದಿಯನ್ನು ಯಥಾವತ್ತಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಗುಡುಗಿದರು. ಈ ವರದಿ ನ್ಯಾಯಸಮ್ಮತವಾಗಿಲ್ಲ ಎಂದು ಆರೋಪಿಸಿದ ಮಲ್ಲಿಕಾರ್ಜುನ ಖರ್ಗೆ, ವಕ್ಫ್ ಬೋರ್ಡ್‌ನಲ್ಲಿ ಅನ್ಯ ಕೋಮಿನ ಸದಸ್ಯರ ನೇಮಕಾತಿ ನಿರ್ಧಾರ ಅನ್ಯಾಯದಿಂದ ಕೂಡಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಜೆಪಿಸಿ ಮಂಡಿಸಿರುವ ವಕ್ಫ್ ತಿದ್ದುಪಡಿಸಿ ಮಸೂದೆ ವರದಿಯ ಬಗ್ಗೆ ಸೂಕ್ತ ಚರ್ಚೆಗೆ ಅವಕಾಶ ನೀಡಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ಇದೇ ವೇಳೆ ಒಕ್ಕೊರಲಿನಿಂದ ಒತ್ತಾಯಿಸಿದರು. ಆದರೆ ಪ್ರತಿಪಕ್ಷಗಳ ಈ ಬೇಡಿಕೆಯನ್ನು ತಿರಸ್ಕರಿಸಿದ ಸಭಾಪತಿ ಜಗದೀಪ್ ಧನ್ಕರ್, ನೈಜ ಮಸೂದೆ ಮಂಡನೆ ಯಾದಾಗ ಚರ್ಚೆಗೆ ಅವಕಾಶ ಕೊಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಆರ್‌ಸಿಬಿಗೆ ರಜತ್ ಪಾಟಿದಾರ್ ನಾಯಕ



ರಜತ್ ಪಾಟಿದಾರ್

ಬೆಂಗಳೂರು, ಫೆ.13– ಚೊಚ್ಚಲ ಐಪಿಎಲ್ ಟ್ರೋಫಿ ಗೆಲ್ಲುವ ಕನವರಿಕೆಯಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನೂತನ ನಾಯಕನಾಗಿ ಸ್ಫೋಟಕ ಬ್ಯಾಟ್ಸ್‌ಮನ್ ರಜತ್ ಪಾಟಿದಾರ್ ಅವರನ್ನು ನೇಮಕ ಮಾಡಲಾಗಿದೆ.

ಈ ಬಗ್ಗೆ ಆರ್‌ಸಿಬಿ ಫ್ರಾಂಚೈಸಿಯು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಈ ವಿಷಯ ಪ್ರಕಟಿಸಿದ್ದು, ಆರ್‌ಸಿಬಿಯು ತನ್ನ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿರುವುದಾಗಿ ಫ್ರಾಂಚೈಸಿಯು ಸಂತಸ ವ್ಯಕ್ತಪಡಿಸಿದೆ.

ಕಳೆದ ಆವೃತ್ತಿಯ ಐಪಿಎಲ್ ಟೂರ್ನಿಯ ಮೊದಲಾರ್ಧದಲ್ಲಿ ನೀರಸ ಪ್ರದರ್ಶನದ ಮೂಲಕ ಕಂಗಾಲಾಗಿದ್ದ ಆರ್‌ಸಿಬಿ ತಂಡವು ಬಳಿಕ ಫಿನಿಕ್ಸ್‌ನಂತೆ ಎದ್ದು ನಿಂತು ಸತತ 7 ಪಂದ್ಯಗಳನ್ನು ಗೆದ್ದು ಪ್ಲೇ ಆಫ್‌ಗೆ ಎಂಟ್ರಿಕೊಟ್ಟಿತ್ತು. ಆದರೆ ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಮುಗ್ಗರಿಸುವ ಮೂಲಕ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತ್ತು. ಆದರೆ ಇದೀಗ ಆರ್‌ಸಿಬಿ ತಂಡವು ಹಳೆಯ ತಪ್ಪುಗಳನ್ನು ತಿದ್ದಿಕೊಂಡು 18ನೇ ಆವೃತ್ತಿಯಲ್ಲಿ ಹೊಸ ಅಧ್ಯಾಯ ಸೃಷ್ಟಿಸಲು ಸಜ್ಜಾಗಿದೆ. 2025ನೇ ಆವೃತ್ತಿಯಲ್ಲಿ ತಂಡವನ್ನು ರಜತ್ ಪಾಟೀದಾರ್ ಮುನ್ನಡೆಸಲಿದ್ದು, ಹೊಸ ನಾಯಕನೊಂದಿಗೆ ಹೊಸ ಹುರುಪಿನಲ್ಲಿ ಆರ್‌ಸಿಬಿ ತಂಡ ಕಣಕ್ಕಿಳಿಯಲು ಸಜ್ಜಾಗಿದೆ.

2021ರಲ್ಲಿ ಆರ್‌ಸಿಬಿ ತಂಡಕ್ಕೆ ಆಯ್ಕೆಯಾದ ರಜತ್ ಪಾಟಿದಾರ್ ಅವರು ಈವರೆಗೆ ಒಟ್ಟು 27 ಪಂದ್ಯಗಳಿಂದ 34.73ರ ಸರಾಸರಿಯಲ್ಲಿ 799 ರನ್ ಕಲೆ ಹಾಕಿದ್ದಾರೆ. ಏತನ್ಮಧ್ಯೆ 2023ರ ಸೀಸನ್‌ನಲ್ಲಿ ಅವರು ಗಾಯದ ಸಮಸ್ಯೆಯಿಂದಾಗಿ ಕಾಣಿಸಿಕೊಂಡಿರಲಿಲ್ಲ. 2024ರ ಸೀಸನ್‌ನಲ್ಲಿ ತಂಡ ಪ್ಲೇ ಆಫ್‌ಗೆ ಪ್ರವೇಶಿಸುವಲ್ಲಿ ಅವರ ಪಾತ್ರ ಬಹಳ ಪ್ರಮುಖವಾಗಿತ್ತು. 15 ಪಂದ್ಯಗಳ 13 ಇನ್ನಿಂಗ್ಸ್‌ಗಳಿಂದ 30.38 ಸರಾಸರಿಯಲ್ಲಿ ಅವರು 395 ರನ್ ಗಳಿಸಿದ್ದರು. ಅದರಲ್ಲಿ ಐದು ಅರ್ಧಶತಕಗಳಿದ್ದವು.

“ರಜತ್ ನಾನು ಮೊದಲು ನಿಮಗೆ ಅಭಿನಂದನೆಗಳನ್ನು ತಿಳಿಸಲು ಬಯಸುತ್ತೇನೆ. ನೀವು ಫ್ರಾಂಚೈಸಿಯಲ್ಲಿ ಬೆಳೆದ ರೀತಿ, ನಿಮ್ಮ ಪ್ರದರ್ಶನಗಳು ಭಾರತಾದ್ಯಂತ ಆರ್ ಸಿಬಿ ಅಭಿಮಾನಿಗಳ ಹೃದಯದಲ್ಲಿ ಜಾಗ ಗಿಟ್ಟಿಸಿಕೊಂಡಿದೆ. ಅವರೆಲ್ಲರೂ ನಿಮ್ಮ ಪ್ರದರ್ಶನವನ್ನು ನೋಡಲು ಉತ್ಸುಕರಾಗಿದ್ದಾರೆ. ನೀವು ಈ ಸ್ಥಾನಕ್ಕೆ ನಿಜಕ್ಕೂ ಅರ್ಹ ಆಯ್ಕೆಯಾಗಿದ್ದೀರಿ. ನಾನು ಮತ್ತು ನಮ್ಮ ತಂಡದ ಎಲ್ಲಾ ಸದಸ್ಯರೂ ನಿಮ್ಮ ಹಿಂದಿದ್ದೇವೆ. ನಮ್ಮೆಲ್ಲರ ಬೆಂಬಲ ನಿಮಗಿದೆ ಎಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.



– ವಿರಾಟ್‌ಕೊಹ್ಲಿ

ಈ ಹಿಂದಿನ ಆರ್‌ಸಿಬಿ ನಾಯಕರು

2008– ರಾಹುಲ್ ದ್ರಾವಿಡ್
2009– ಕೆವಿನ್ ಪೀಟರ್‌ಸನ್
2009–10– ಅನಿಲ್ ಕುಂಬ್ಳೆ
2011–12– ಡೇನಿಯಲ್ ವೆಟ್ಟೋರಿ
2017– ಶೇನ್ ವಾಟ್ಸನ್ (ಹಂಗಾಮಿ)
2013–21– ವಿರಾಟ್ ಕೊಹ್ಲಿ
2022–24– ಫಾಫ್ ಡು ಪ್ಲೆಸಿಸ್
2025– ರಜತ್ ಪಾಟೀದಾರ್

ಇಂದು ವೇದ ಕೃಷಿ ಕುರಿತ ಕಾರ್ಯಾಗಾರ

ಮೈಸೂರು,ಫೆ.13– ಪ್ರಸಾರ ಭಾರತಿ, ಭಾರತೀಯ ಸಾರ್ವಜನಿಕ ಪ್ರಸಾರ ಸೇವೆ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ವತಿಯಿಂದ ರೇಡಿಯೋ ಕಿಸಾನ್ ದಿನದ ಸಂದರ್ಭದಲ್ಲಿ ವೇದ ಕೃಷಿ ಕುರಿತ ಕಾರ್ಯಾಗಾರ ಕಾರ್ಯಕ್ರಮವನ್ನು ಫೆ.14 ರಂದು ಬೆಳಗ್ಗೆ 10.30 ಗಂಟೆಗೆ ಆಯಿಷ್ ಸೆಮಿನಾರ್ ಹಾಲ್, ಆಯಿಷ್ ಆಕಾಡೆಮಿ ಬ್ಲಾಕ್, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಡಾ.ಎಂ. ಪುಷ್ಪಾವತಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದಾರೆ.

ಹಾಲಕ್ಕಿ ಜನಾಂಗದ ಜಾನಪದ ಕೋಗಿಲೆ 'ಪದ್ಮಶ್ರೀ' ಪುರಸ್ಕೃತ ಸುಕ್ರಿ ಬೊಮ್ಮಗೌಡ ಇನ್ನಿಲ್ಲ



ಕಾರವಾರ, ಫೆ.13– ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಹಾಲಕ್ಕಿ ಸಮುದಾಯದ ಸಾಕ್ಷಿ ಪ್ರಜ್ಞೆಯಂತಿದ್ದ ಜನಪದ ಹಾಡುಗಳನ್ನು ಹಾಡುವ ಜೊತೆಗೆ ಮದ್ಯಪಾನ ವಿರೋಧಿ ಹೋರಾಟದಿಂದ ಖ್ಯಾತಿಗಳಿಸಿದ್ದ ಅಂಕೋಲಾ ತಾಲೂಕು ಬಡಗೇರಿಯ ಸುಕ್ರಿ ಬೊಮ್ಮಗೌಡ (88) ಗುರುವಾರ ನಸುಕಿನ ಜಾವ ನಿಧನರಾಗಿದ್ದಾರೆ

ಉತ್ತರ ಕನ್ನಡ ಜಿಲ್ಲೆಯ ಹೆಮ್ಮೆಯ ಸುಕ್ರಜ್ಜಿ ಎಂದೇ ಪ್ರಸಿದ್ದರಾಗಿದ್ದ ಸುಕ್ರಿ ಬೊಮ್ಮಗೌಡ ಅವರಿಗೆ 88 ವರ್ಷ ವಯಸ್ಸಾಗಿತ್ತು. ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಕೆಲವು ದಿನದ ಹಿಂದೆ ಉಸಿರಾಟ ಸಮಸ್ಯೆಯಿಂದ ಉಡುಪಿಯಲ್ಲಿ ಚಿಕಿತ್ಸೆ ಪಡೆದು ಬಂದಿದ್ದರು. ಆದರೆ ಇಂದು ಮುಂಜಾನೆ 4 ಗಂಟೆ ಸಮಯಕ್ಕೆ ಅಂಕೋಲದ ಬಡಿಗೇರಿಯ ಅವರ ನಿವಾಸದಲ್ಲಿ ಇಹಲೋಕ ತ್ಯಜಿಸಿದ್ದಾರೆ. ಸುಕ್ರಿ ಬೊಮ್ಮಗೌಡ ಅವರು ಇದೀಗ ಇಬ್ಬರು ಮೊಮ್ಮಕ್ಕಳು ಓರ್ವ ಸೊಸೆಯನ್ನು ಅಗಲಿದ್ದಾರೆ.

ಉತ್ತರಕನ್ನಡ ಜಿಲ್ಲೆಯ ಅಂಕೋಲಾದ ಹಾಲಕ್ಕಿ ಒಕ್ಕಲಿಗ ಜನಾಂಗಕ್ಕೆ ಸೇರಿದ ಸುಕ್ರಿ ಬೊಮ್ಮಗೌಡ ಅವರು ಸುಪ್ರಸಿದ್ಧ ಜಾನಪದ ಗಾಯಕಿಯಾಗಿದ್ದರು. ಸುಮಾರು 5 ಸಾವಿರ ಹಾಲಕ್ಕಿ ಹಾಡುಗಳು ಕಂಠಪಾಟವಾಗಿದ್ದವು. ಅವರು ಜಾನಪದ ಕಲೆಗೆ ನೀಡಿದ ಕೊಡುಗೆಗಳಿಗಾಗಿ ಮತ್ತು ಸಾಂಪ್ರದಾಯಿಕ ಬುಡಕಟ್ಟು ಸಂಗೀತವನ್ನು ಸಂರಕ್ಷಿಸುವ ಕಾರ್ಯಕ್ಕಾಗಿ ಹಲವು ಪ್ರಶಸ್ತಿಗಳನ್ನು ಸಂಪಾದಿಸಿದ್ದಾರೆ. ಜನಪದ ಹಾಗೂ ಸಾಮಾಜಿಕ ಸೇವಾ ಕ್ಷೇತ್ರಕ್ಕೆ ಸುಕ್ರಿ ಬೊಮ್ಮ ಗೌಡ ನೀಡಿರುವ ಕೊಡುಗೆ ಗುರುತಿಸಿ, 1999ರಲ್ಲಿ ಜನಪದಶ್ರೀ ಪ್ರಶಸ್ತಿ, 2006ರಲ್ಲಿ ನಾಡೋಜ ಪ್ರಶಸ್ತಿ, 2017ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು. ಇನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ದೇಶ ಹಾಗೂ ರಾಜ್ಯದ ಹಲವು ಪ್ರತಿಷ್ಠಿತ ಪ್ರಶಸ್ತಿ ಸುಕ್ರಿ ಬೊಮ್ಮ ಗೌಡ ಅವರನ್ನು ಅರಸಿಕೊಂಡು ಬಂದಿವೆ.

ಕರ್ತವ್ಯದ ವೇಳೆ 'ಮಿಸ್ ಫೈರ್' ಆಗಿ ಬೆಳಗಾವಿ ಯೋಧ ದುರ್ಮರಣ



ಬೆಳಗಾವಿ ಜಿಲ್ಲೆ ಮೂಡಲಗಿ ತಾಲೂಕಿನ ಕಲ್ಲೋಳ್ಳಿ ಗ್ರಾಮದ ಯೋಧ ಪ್ರವೀಣ್ ಸುಭಾಷ್ ಖಾನಗೌಡ್ರ(24) ಬುಧವಾರ ತಮಿಳುನಾಡಿನ ಚೆನ್ನೈನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ತಲೆಗೆ ಗುಂಡು ತಗುಲಿ ಮೃತಪಟ್ಟಿದ್ದಾರೆ.

ಕೃಷಿಕ ಕುಟುಂಬದ ಸುಭಾಷ್ ಮತ್ತು ಮಹಾದೇವಿ ದಂಪತಿಯ ಪುತ್ರರಾದ ಪ್ರವೀಣ್ ನೌಕಾಪಡೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕೊಚ್ಚಿ, ಅಂಡಮಾನ್‌ನಲ್ಲಿ ಕಾರ್ಯ ನಿರ್ವಹಿಸಿದ್ದ ಅವರು ಚೆನ್ನೈಗೆ ವರ್ಗಾವಣೆಗೊಂಡಿದ್ದರು.

ಅವರು ಮೃತಪಡುವ ಒಂದು ಗಂಟೆಯ ಮೊದಲು ತಾಯಿ ಮತ್ತು ಅಣ್ಣನೊಂದಿಗೆ ಮೊಬೈಲ್ ನಲ್ಲಿ ಮಾತನಾಡಿದ್ದಾರೆ. ನಂತರದಲ್ಲಿ ಅವರು ಗುಂಡು ತಾಗಿ ಮೃತಪಟ್ಟಿರುವುದಾಗಿ ಮಾಹಿತಿ ಗೊತ್ತಾಗಿದೆ. ಸೇನಾಧಿಕಾರಿಗಳು ಇದು ಮಿಸ್ ಫೈರ್ ಎಂದು ಹೇಳಿದ್ದು, ತನಿಖೆ ಕೈಗೊಳ್ಳಲಾಗಿದೆ. ನಂತರ ಘಟನೆಯ ಕುರಿತ ನಿಖರ ಮಾಹಿತಿ ಗೊತ್ತಾಗಲಿದೆ ಎಂದು ಹೇಳಲಾಗಿದೆ.

ಫೆಬ್ರವರಿ 14ರಂದು ಬೆಳಗ್ಗೆ ಪ್ರವೀಣ್ ಮೃತದೇಹವನ್ನು ಮೆರವಣಿಗೆ ಮೂಲಕ ತರಲಾಗುವುದು. ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಿದ್ದು, ಕಲ್ಲೋಳಿ ಪಂಚಾಯಿತಿಯ ಪಕ್ಕದ ಜಾಗದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಹೇಳಲಾಗಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಜಿ. ನಟರಾಜ ರವರ ಪತ್ನಿ ಶ್ರೀಮತಿ ಸುಜಾತ ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರುಣಾ ಗ್ರಾಮದಲ್ಲಿರುವ ಸರ್ವೆ ನಂ. 27/2 ರಲ್ಲಿ ವಿಸ್ತೀರ್ಣ 01 ಎಕರೆ, 04 ಗುಂಟೆಗಳು, ಆಕಾರ ರೂ. 0.99 ಪೈಸೆ, ಖಾತಾ ನಂ. 114, ಹೊಂದಿರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ ಹಾಗೂ ಸರ್ವೆ ನಂ. 207 ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ. 27/4 ರ ಶ್ರೀ. ಮಹೇಂದ್ರ ಬಿನ್ ಶ್ರೀ ನಂಜಪ್ಪ ರವರ ಜಮೀನು, ಉತ್ತರಕ್ಕೆ: ಸರ್ವೆ ನಂ. 27/3 ರ ಶ್ರೀ. ಮಹೇಂದ್ರ ಬಿನ್ ಶ್ರೀ ನಂಜಪ್ಪ ರವರ ಜಮೀನು, ಮತ್ತು ದಕ್ಷಿಣಕ್ಕೆ: ಸರ್ವೆ ನಂ. 12 ರ ಲಿಂಗರಾಜಪ್ಪ ರವರ ಜಮೀನು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ರಾಜ್ಯ ನಗರಾಭಿವೃದ್ಧಿ ಸಂಸ್ಥೆ

ಆಡಳಿತ ತರಬೇತಿ ಸಂಸ್ಥೆ ಆವರಣ ಲಲಿತ ಮಹಲ್ ರಸ್ತೆ, ಮೈಸೂರು–570 011
Ph.No: 0821-2520116, 163, Fax No;0821-2520164
e-mail: directorsiud@gmail.com,
website: www.siudmysore.gov.in
ಸಂಖ್ಯೆ: SIUD-ADMN0TRG/14/2025 ದಿನಾಂಕ: 12.02.2025

ಕೊಟೇಷನ್ ಪ್ರಕಟಣೆ

ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತ ಮಹಲ್ ರಸ್ತೆ, ಮೈಸೂರು ಇಲ್ಲಿನ ಪ್ರಶಿಕ್ಷಣಾರ್ಥಿಗಳಿಗೆ ಲಘು ಮೋಟಾರು ವಾಹನ (LMV) ಚಾಲನಾ ತರಗತಿಗಳನ್ನು ನೀಡಿ LLR (Learner Licence Registration) ಗಳನ್ನು ಒದಗಿಸಲು ಅರ್ಹ ಏಜೆನ್ಸಿಗಳಿಂದ ಕೊಟೇಷನ್ ಆಹ್ವಾನಿಸಲಾಗಿದೆ. 1) ಕೊಟೇಷನ್ ಸಲ್ಲಿಸಲು ಕೊನೆಯ ದಿ: 18.02.2025ರ ಸಂಜೆ 4 ಗಂಟೆಯವರೆಗೆ. 2) ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಅಥವಾ www.siudmysore.gov.in ನಲ್ಲಿ ಮಾಹಿತಿ ಪಡೆಯಬಹುದಾಗಿದೆ.

DIPR/DDMYS/1277/KSMCA//902/2024-25 ಸಹಿ/– ನಿರ್ದೇಶಕರು